ಮಾಸಿಕ
ವಾರ್ಷಿಕ ಚಂದಾ ರೂ.25/-

# ಜನಪದ

ಸಂಪುಟ-04 • ಸಂಚಿಕೆ-06 • ಮಾರ್ಚ್ 2021

ಮಾರ್ಚ್
2021



- ಜನಸಾಮಾನ್ಯರ ಬವಣೆ ನಿವಾರಿಸಲಿರುವ ಮರಳು ನೀತಿ-2020
- ಮುಖ್ಯಮಂತ್ರಿಗಳಿಂದ ಸ್ಮಾರ್ಟ್ ಸಿಟಿ ಯೋಜನೆ ಪರಿಶೀಲನೆ
- ಕರುನಾಡಿನಲ್ಲಿ ಪಸರಿಸಿದ ಪದ್ಮಗಳು
- ಜಲಸಂಪನ್ಮೂಲ ರಕ್ಷಣೆ ನಮ್ಮನಿಮ್ಮೆಲ್ಲರ ಹೊಣೆ

## ಅಡಿಕೆ ರುಚಿಗೆ ಮಾತ್ರವಲ್ಲ ಆರೋಗ್ಯಕ್ಕೂ ಒಳ್ಳೆಯದು

Download From : www.kpscvaani.com



ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ಫೆಬ್ರವರಿ 4 ರಂದು ಬೆಂಗಳೂರಿಗೆ ಆಗಮಿಸಿದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಮತ್ತು ಅವರ ಧರ್ಮಪತ್ನಿ ಸವಿತಾ ಕೋವಿಂದ್ ಅವರನ್ನು ಎಚ್.ಎ.ಎಲ್ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಮತ್ತು ರಾಜ್ಯಪಾಲರು ಬರಮಾಡಿಕೊಂಡ ಸಂದರ್ಭ.




ಫೆಬ್ರವರಿ 19 ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು 13 ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಲಾಂಛನವನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ವಾರ್ತಾ ಇಲಾಖೆ ಸಚಿವರಾದ ಸಿ.ಸಿ.ಪಾಟೀಲ್, ಕಾರ್ಯದರ್ಶಿಗಳಾದ ಅಂಜುಮ್ ಪರ್ವೇಜ್, ಆಯುಕ್ತರಾದ ಡಾ: ಪಿ.ಎಸ್.ಹರ್ಷ, ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾದ ಸುನಿಲ್ ಪುರಾಣಿಕ್, ಚಲನಚಿತ್ರ ವಾಣಿಜ್ಯ ಮಂಡಳಿ ನಿರ್ದೇಶಕರಾದ ಡಿ.ಆರ್. ಜೈರಾಜ್, ಹಿರಿಯ ಕಲಾವಿದರಾದ ತಾರಾ ಅನುರಾಧ, ಶ್ರುತಿ, ನಿರ್ಮಾಪಕರಾದ ರಾಕ್ ಲೈನ್ ವೆಂಕಟೇಶ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Download From : www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-04 • ಸಂಚಿಕೆ-06 • ಮಾರ್ಚ್ 2021

ಮಾರ್ಚ್
2021




06
ಜನಸಾಮಾನ್ಯರ ಬವಣೆ
ನಿವಾರಿಸಲಿರುವ
**ಮರಳು ನೀತಿ-2020**
• ಉಮೇಶ್ ಕೋಲಿಗೆರೆ





11
ಏರೋ ಇಂಡಿಯಾದಲ್ಲಿ
ಕಣ್ಮನ ಸೆಳೆದ
**ಲೋಹದ ಹಕ್ಕಿಗಳ ಕಲರವ**
• ಜಿ.ರಾಮಕೃಷ್ಣ

19 ಮುಖ್ಯಮಂತ್ರಿಗಳಿಂದ
**ಸ್ಮಾರ್ಟ್ ಸಿಟಿ ಯೋಜನೆ ಪರಿಶೀಲನೆ**

21 ವಾರ್ತಾಸೌಧಕ್ಕೆ
**ಭೇಟಿ ನೀಡಿದ ಸಚಿವರು**

26 ಕರುನಾಡಿನಲ್ಲಿ
**ಪಸರಿಸಿದ ಪದ್ಮಗಳು**
• ಸುಧಾ





15
ಪರಿಸರ ಪ್ರೇಮದತ್ತ
**ಬೆಳಕು ಚೆಲ್ಲುವ ಹಕ್ಕಿ ಕಥೆ**
• ಡಿ.ಪಿ.ಮುರಳೀಧರ್





23
**ಅಡಿಕೆ : ರುಚಿಗೆ ಮಾತ್ರವಲ್ಲ ಆರೋಗ್ಯಕ್ಕೂ ಒಳ್ಳೆಯದು**
• ಈಶ್ವರ ದೈತೋಟ





42
ಜಲಸಂಪನ್ಮೂಲ ರಕ್ಷಣೆ
**ನಮ್ಮನಿಮ್ಮೆಲ್ಲರ ಹೊಣೆ**
• ಡಾ.ಗುರುಲಿಂಗಪ್ಪ ಅಂಕದ

29 **ರಾಜ್ಯಪಾಲರ ಜಂಟಿ ಅಧಿವೇಶನದ ಭಾಷಣದ ಮುಖ್ಯಾಂಶಗಳು**
• ಬಿ.ಜಿ.ಪೂರ್ಣಿಮ

32 ಈ ನಿಗಮವನ್ನು
**ನಿಮ್ಮ ತಾಂಬಿಮನಿ ಅಂದ್ಕೊಂಡ್ ಬರ್‍ರೀ**
• ಚಂದ್ರಮುಖಿ

36 **ಕಟ್ಟಕಡೆಯ ಮಹಿಳೆಗೂ ಆಸರೆ ಸಿಗಬೇಕು**
• ಶುಭಾ ಮಂಜುನಾಥ್

39 ಪೊಲೀಸ್ ಪಡೆಗೆ
**ಸೇರ್ಪಡೆಗೊಂಡ ದೇಸಿ ತಳಿ ಮುಧೋಳ**
• ಪಿ.ಎಸ್. ಪಾರ್ವತಿ

45 ಅನ್ನದಾತರ ಬೆಳೆಗಳಿಗೆ
**ಬಹುಪಯೋಗಿ ಎರೆಜಲ**
• ಮಂಜುನಾಥ ಮಹಾಲಿಂಗಪುರ

47 ಅಂಚೆ ಕಲಾ ಶಿಕ್ಷಣದ
**ಆದ್ಯಪ್ರವರ್ತಕ ಎಂ.ಟಿ.ವಿ.ಆಚಾರ್ಯ**
• ಸದಾನಂದ

50 ಪದಬಂಧ-16



ಪ್ರಧಾನ ಸಂಪಾದಕರು
ಡಾ॥ ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ,
ಬೆಂಗಳೂರು - 560 010


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Download From : www.kpscvaani.com

# ನಿಮ್ಮ ಅನಿಸಿಕೆ

ಕೊಪ್ಪಳದ ಬೃಹತ್ ಆಟಿಕೆ ಕ್ಲಸ್ಟರ್ ನಿರ್ಮಾಣಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಇತ್ತೀಚೆಗೆ ಭೂಮಿ ಪೂಜೆ ನೆರವೇರಿಸಿರುವುದು ಸಂತೋಷವನ್ನು ಉಂಟು ಮಾಡಿದೆ. ಏಕೆಂದರೆ, ಇದು ದೇಶದ ಮೊದಲ ಬೃಹತ್ ಆಟಿಕೆ ನಿರ್ಮಾಣದ ಘಟಕವಾಗಿರುವುದುಷ್ಟೇ ಅಲ್ಲದೆ, ಇದರಿಂದ ಅಸಂಖ್ಯಾತ ಜನರಿಗೆ ಅನುಕೂಲವಾಗಲಿದೆ. ಸುಮಾರು 400 ಎಕರೆ ಜಮೀನಿನಲ್ಲಿ 5 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಯೋಜನೆಯಿಂದ ಸ್ಥಳೀಯ ಯುವ ಜನಾಂಗಕ್ಕೆ ಉದ್ಯೋಗದ ಅವಕಾಶಗಳು ದೊರೆಯಬಹುದಾಗಿದೆ.

ಈ ಮಹತ್ವದ ಯೋಜನೆಯಿಂದ ಚೀನಾ ರಾಷ್ಟ್ರದ ಆಟಿಕೆಗಳಿಗೆ ಸ್ವಲ್ಪಮಟ್ಟಿನ ಹೊಡೆತ ಬೀಳುವುದರಲ್ಲಿ ಸಂಶಯವಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಸುಮಾರು 1 ಲಕ್ಷಕ್ಕೂ ಅಧಿಕ ಉದ್ಯೋಗಗಳು ಭವಿಷ್ಯದಲ್ಲಿ ಸೃಷ್ಟಿಯಾಗುವುದಂತು ನಿಶ್ಚಿತ.

**– ಸಂಗಮೇಶ ಕೆ. ಜಿ.**
ಗದಗ

---

ರೈತಪರ ಸರ್ಕಾರದಿಂದ ರೈತ ಸ್ನೇಹಿ ಕಾಯಿದೆಗಳು ಎಂಬ ಶೀರ್ಷಿಕೆ ಮತ್ತು ಉಳುಮೆ ಮಾಡುತ್ತಿರುವ ರೈತನ ಛಾಯಾಚಿತ್ರದೊಂದಿಗೆ ಪ್ರಕಟಗೊಂಡಿರುವ ಫೆಬ್ರವರಿ ಸಂಚಿಕೆಯ ವಾರ್ತಾ ಜನಪದ ಅತ್ಯಂತ ಸುಂದರವಾಗಿದೆ. ಇತ್ತೀಚೆಗಂತೂ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕೃಷಿ ಸಂಬಂಧಿಸಿದ ಕಾಯಿದೆಗಳ ಕುರಿತು ಜನರಲ್ಲಿ ಭಿನ್ನಾಭಿಪ್ರಾಯ ಮೂಡಿದೆ. ಹಾಗಾಗಿ ಈ ಕುರಿತು ಕೃಷಿ ಸಚಿವರೇ ತಮ್ಮ ಪತ್ರಿಕೆಯಲ್ಲಿ ಕೃಷಿ ಕಾಯಿದೆಗಳ ಕುರಿತು ಸವಿಸ್ತಾರವಾಗಿ ಹೇಳಿರುವುದು ಬಹಳಷ್ಟು ಜನರ ಅನುಮಾನಗಳನ್ನು ದೂರಮಾಡಲಿದೆ.

**––ನರೇಂದ್ರರಾವ್,**
ಚಿತ್ರದುರ್ಗ

---

ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ ಕುರಿತು ಪ್ರಕಟಿಸಲಾಗಿರುವ ಲೇಖನ ಮೀನುಗಾರಿಕೆಯ ಸರ್ವತೋಮುಖ ಬೆಳವಣಿಗೆಯ ಮೇಲೆ ಬೆಳಕು ಚೆಲ್ಲುವಲ್ಲಿ ತುಂಬಾ ಸಹಕಾರಿಯಾಗಿರುವ ಜೊತೆಗೆ ಮೀನುಗಾರರಿಗೆ ದೊರೆಯಬಹುದಾದ ಸುಮಾರು 21 ಯೋಜನೆಗಳ ಬಗ್ಗೆ ತಿಳಿಸಿರುವುದು ಅತ್ಯಂತ ಉಪಯುಕ್ತ ಮಾಹಿತಿಯನ್ನು ಒದಗಿಸಿದಂತ್ತಾಗಿದೆ.

ರಾಜ್ಯ ಸರ್ಕಾರವು ಕರ್ನಾಟಕದ ಮತ್ಸ್ಯ ಉದ್ದಿಮೆಗಾಗಿ ಕ್ರಿಯಾ ಯೋಜನೆಯೊಂದನ್ನು ಸಿದ್ಧಪಡಿಸಿದ್ದು, ಅದಕ್ಕಾಗಿ ಸುಮಾರು 4115 ಕೋಟಿ ರೂಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವುದು ಮೆಚ್ಚುವಂತಹ ಸಂಗತಿ.

**–ಲತಾ ರಾಮಚಂದ್ರ,**
ಕೆ.ಆರ್.ಪೇಟೆ




ಕೇಂದ್ರದ ಕೃಷಿ ಕಾಯಿದೆ ಮತ್ತು ಎಪಿಎಂಸಿ ಕಾಯಿದೆಯಿಂದ ರೈತರಿಗೆ ಆಗುವ ಲಾಭ ಮತ್ತು ಅನುಕೂಲಗಳೇನು ಎಂಬುದರ ಬಗ್ಗೆ ಮಾನ್ಯ ಕೃಷಿ ಸಚಿವರು ಸುದೀರ್ಘವಾಗಿ ಪ್ರಸ್ತಾಪಿಸಿರುವುದಷ್ಟೇ ಅಲ್ಲದೆ ರೈತರ ಮಸೂದೆಗಳು ದೂರದೃಷ್ಟಿಯ ಯೋಜನೆಗಳಾಗಿದ್ದು, ರೈತರಿಗೆ ಯಾವುದೇ ಅಡೆತಡೆಗಳಾಗು–ವುದಿಲ್ಲವೆಂದು ಆಶ್ವಾಸನೆ ನೀಡಿರುತ್ತಾರೆ. ಮುಖ್ಯಮಂತ್ರಿಗಳು ಕೃಷಿಗೆ ಸಂಬಂಧಿಸಿರುವ ಕಾಯಿದೆಗಳ ಬಗ್ಗೆ ತಮ್ಮ ಅನಿಕೆಗಳನ್ನು ತಿಳಿಸುತ್ತಾ, ರೈತರ ಹಿತವನ್ನು ಕಾಪಾಡುವ ಜೊತೆಗೆ ಅವರ ಸ್ವಾಭಿಮಾನವನ್ನು ಎತ್ತಿ ಹಿಡಿಯುತ್ತೇವೆ ಎಂದು ತಿಳಿಸಿದ್ದಾರೆ. ಹಾಗಾಗಿ ನನ್ನ ಬೆಳೆ ನನ್ನ ಹಕ್ಕು ಎನ್ನುವ ರೈತರ ಹೇಳಿಕೆಗಳು ಮೊಳಗುವ ಕಾಲ ಹತ್ತಿರ ಬರುವುದರಲ್ಲಿ ಸಂಶಯವಿಲ್ಲ.

ಜವರೇಗೌಡ, ಮಳವಳ್ಳಿ

---

ಶ್ರೀಯುತ ರಾಜಮನ್ನಾರ್ ಅವರ ಕೊರೊನಾ ನಿಗ್ರಹಕ್ಕೆ ಲಸಿಕಾ ಅಭಿಯಾನ ಲೇಖನ ತುಂಬಾ ಮಹತ್ವ ಪೂರ್ಣವಾಗಿದೆ. ಇಡೀ ಭೂಮಂಡಲವನ್ನೇ ಆಕ್ರಮಿಸಿ, ಜನರ ಜೀವನವನ್ನು ಹಿಂಡಿ ಹಿಪ್ಪೆ ಮಾಡಿದ ಕ್ರೂರಿ ಕೊರೊನಾ, 20ರ ದಶಕದ ಪೂರ್ವಭಾಗದಿಂದ ಇಡೀ ವಿಶ್ವವನ್ನೇ ತನ್ನ ಕದಂಬ ಬಾಹುಗಳಲ್ಲಿ ಬಂಧಿಸಿ ಲಕ್ಷಾಂತರ ಜನರ ಪ್ರಾಣಗಳಿಗೆ ಕಂಟಕವಾಗಿ ಪರಿಣಮಿಸಿತ್ತು.

ಈ ಘನಘೋರ ಕಾಯಿಲೆಗೆ ಯಾರೂ ಔಷಧ ಕಂಡುಹಿಡಿಯಲಿಲ್ಲವೆಂದು ಕಾಣದ ದೇವರ ಮೊರೆ ಹೋಗುವಂತೆ ಮಾಡಿದ್ದ ಸಮಯದಲ್ಲಿ ನಮ್ಮ ದೇಶದವರೇ ಲಸಿಕೆಯನ್ನು ಕಂಡುಹಿಡಿದರು. ಲಸಿಕೆ ಅಭಿಯಾನ ಪ್ರಾರಂಭವಾಗುತ್ತಿದ್ದಂತೆ ಜನರ ಆತಂಕ ದೂರವಾಯಿತು. ಆದರೆ ಹಾಗೆಯೇ ಕೆಲವು ಜನರ ತಪ್ಪು ಗ್ರಹಿಕೆಗಳಿಂದ ಲಸಿಕೆ ಹಾಕಿಸಿಕೊಳ್ಳುವ ಕುರಿತು ಅನುಮಾನಗಳು ಹುಟ್ಟಿಕೊಂಡಿತು.

ಲೇಖಕರು ಜನರ ಅನುಮಾನವನ್ನು ದೂರವಾಗಿಸುವ ನಿಟ್ಟಿನಲ್ಲಿ ಲೇಖನವನ್ನು ಸಿದ್ಧಪಡಿಸಿದ್ದಾರೆ. ಸುಮಾರು 7 ರಿಂದ 8 ತಿಂಗಳ ಅವಧಿಯಲ್ಲೇ ನಮ್ಮ ದೇಶದ ವಿಜ್ಞಾನಿಗಳು ಅಹೋರಾತ್ರಿಯ ಪರಿಶ್ರಮದಿಂದ ಕೊರೊನಾ ಲಸಿಕೆಯನ್ನು ಸಿದ್ಧಪಡಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ. ಅವರಿಗೆ ನನ್ನ ತುಂಬು ಹೃದಯದ ಅಭಿನಂದನೆಗಳು.

**– ಆತ್ರೇಯ್ ಬಿ.ಎಸ್.**
ಬೆಂಗಳೂರು

---

ನಮ್ಮ ಮನವಿಯನ್ನು ಸ್ವೀಕರಿಸಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಅನುಕೂಲವಾಗುವಂತೆ ವಾರ್ತಾ ಜನಪದ ಮಾಸಿಕ ಪತ್ರಿಕೆಯನ್ನು ತಲುಪಿಸಿದ್ದಕ್ಕಾಗಿ ನಮ್ಮ ಶಾಲೆಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸರ್ವ ಪದಾಧಿಕಾರಿಗಳು, ಶಾಲಾ ಶಿಕ್ಷಕ ಬಳಗ ಹಾಗೂ ಮಕ್ಕಳ ಪರವಾಗಿ ತಮಗೆ ತುಂಬು ಹೃದಯದ ಧನ್ಯವಾದಗಳು. ತಾವು ಕಳುಹಿಸಿರುವ ಪತ್ರಿಕೆಯಿಂದ ನಮಗೆ ಮತ್ತು ಮಕ್ಕಳಿಗೆ ಹೆಚ್ಚಿನ ಜ್ಞಾನ ಪಡೆಯಲು ಸಹಕಾರಿಯಾಗಲಿದೆ. ತಮ್ಮ ಸಹಕಾರಕ್ಕೆ ನಾವು ಚಿರಋಣಿಯಾಗಿದ್ದೇವೆ. ಇದೆ ರೀತಿ ತಮ್ಮ ಆಶೀರ್ವಾದ ನಮ್ಮ ಮಕ್ಕಳ ಮೇಲಿರಲಿ, ಈ ಮಾಸಿಕ ಪತ್ರಿಕೆಯ ಸದುಪಯೋಗವನ್ನು ಸರಿಯಾಗಿ ಮಾಡಿಕೊಳ್ಳಲಾಗುವುದು.

**–ಮುಖ್ಯ ಗುರುಗಳು**
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,ಮುಧೋಳ

---

'ವಾರ್ತಾ ಜನಪದ' ಮಾಸಿಕ ಈಗ **www.kanaja.inನಲ್ಲಿ ಲಭ್ಯ**

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಕಡ್ಡಾಯವಾಗಿ ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Download From : www.kpscvaani.com



## ಸಂಪಾದಕೀಯ...

# ಹೋಮ್ ವರ್ಕ್‌ನಿಂದ ವರ್ಕ್ ಫ್ರಮ್ ಹೋಮ್‌ವರೆಗೆ !

ಪ್ರಿಯ ಓದುಗ ಮಿತ್ರರೆ,

ಪ್ರಸಕ್ತ ಸಾಲಿನಲ್ಲಿ ನಮ್ಮ ಪಯಣ ಮಾರ್ಚ್ ತಿಂಗಳನ್ನು ಪ್ರವೇಶಿಸಿದೆ.

ಭಾರತದ ಪ್ರಧಾನ ಮಂತ್ರಿಯವರ ಕರೆಗೆ ಓಗೊಟ್ಟು, ಕಳೆದ ವರ್ಷ ಮಾರ್ಚ್ 22 ರಂದು ಜನತಾ ಕರ್ಫ್ಯೂ ಎಂಬ ಹೊಸ ಪರಿಕಲ್ಪನೆಗೆ ಜನತೆಯ ಅಭೂತಪೂರ್ವ ಬೆಂಬಲ ದೊರೆತದ್ದು ಹಾಗೂ ಜನತಾ ಕರ್ಫ್ಯೂ ಅವಧಿಯಲ್ಲಿ ದೇಶದ ಜನತೆ ತಮ್ಮ ಚಲನ-ವಲನ ಮತ್ತು ಸಂಚಾರಕ್ಕೆ ತಾವೇ ಹೇರಿಕೊಂಡ ಸ್ವಯಂ ನಿರ್ಬಂಧ ಅತ್ಯದ್ಭುತ ಯಶಸ್ಸನ್ನು ಕಂಡದ್ದು ಇತಿಹಾಸ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಿಸಬೇಕಾದ ಸಂಗತಿಯಾಗಿದೆ.

ನಂತರ, ಭಾರತದ ಚರಿತ್ರೆಯಲ್ಲಿಯೇ ಪ್ರಪ್ರಥಮ ಬಾರಿಗೆ ಮಾರ್ಚ್ 24 ರಂದು ಪ್ರಕಟಗೊಂಡ ಲಾಕ್‌ಡೌನ್ ಎಂಬ ಹೊಸ ಕಟ್ಟುಪಾಡು ಸಾರ್ವಜನಿಕರಿಗೆ ಮಾತ್ರವಲ್ಲದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೂ ಹಲವು ಸವಾಲುಗಳನ್ನು ತಂದೊಡ್ಡಿದ್ದನ್ನು ಸ್ಮರಿಸಿಕೊಂಡರೆ ಬೆಚ್ಚಿ ಬೀಳುವಂತಾಗುತ್ತದೆ.

ಇದೀಗ ಕೊರೋನಾ ವೈರಾಣುವಿನ ಉಪಟಳ ಒಂದು ವರ್ಷ ಪೂರ್ಣಗೊಳಿಸಿದೆ. ಕೋವಿಡ್-19 ಎಂಬ ಮಹಾಮಾರಿಗೆ ಒಂದೆಡೆ ಔಷಧಿ ಇಲ್ಲ, ಮತ್ತೊಂದೆಡೆ ಚಿಕಿತ್ಸೆ ಇಲ್ಲ ಎಂಬ ವಾತಾವರಣದಿಂದ ನಾವು ಈಗ ಪಾರಾಗಿದ್ದೇವೆ. ನಮ್ಮಲ್ಲಿ ಔಷಧಿಯೂ ಲಭ್ಯವಿದೆ. ನಮಗೆ ಚಿಕಿತ್ಸೆಯ ವಿಧಾನವೂ ಗೊತ್ತಿದೆ. ಅಷ್ಟೇ ಅಲ್ಲ ! ಕೋವಿಡ್-19 ಎಂಬ ಹೆಮ್ಮಾರಿಯನ್ನು ತಡೆಗಟ್ಟಲು ಲಸಿಕಾಕರಣದ ಸೌಲಭ್ಯವೂ ಇದೆ.

ಕೋವಿಡ್-19 ನಮಗೆ ಬಹಳಷ್ಟು ಪಾಠಗಳನ್ನು ಕಲಿಸಿದೆ. ನಮ್ಮಲ್ಲಿ ಬಹುತೇಕರು ಬದಲಾಗಿದ್ದೇವೆ. ಇದೀಗ ಸ್ವಚ್ಛತೆಯ ಮಹತ್ವವನ್ನು ನಾವು ಬಲ್ಲೆವು. ನಮ್ಮಲ್ಲಿ ಕೆಲವರಾದರೂ ಮೃಗೀಯ ವರ್ತನೆಯಿಂದ ಮಾನವೀಯತೆಯತ್ತ ಹೊರಳಿದ್ದೇವೆ. ಮುಖಗವಸು ಧರಿಸಿದ್ದರಿಂದ ಅಸ್ತಮಾ ಹಾಗೂ ಮೈನೂರತೆ (ಅಲರ್ಜಿ) ಯಂತಹ ಸಮಸ್ಯೆಗಳು ಹಲವರಿಂದ ದೂರವಾಗಿವೆ. ಸ್ಯಾನಿಟೈಸರ್ ಬಳಸಿ ಶುಚಿತ್ವ ಕಾಯ್ದುಕೊಂಡಿದ್ದರಿಂದ ರೋಗಗಳ ಪ್ರಮಾಣ ಕ್ಷೀಣಿಸಿವೆ. ರೋಗಿಗಳ ಪ್ರಮಾಣ ಇಳಿಮುಖವಾಗಿದೆ.

ಸಾಮಾಜಿಕ ಸಮಾರಂಭಗಳು ಸರಳವಾಗಿದ್ದರೂ ಸ್ವೀಕರಿಸುವ ಮನೋಧರ್ಮ ನಮ್ಮಲ್ಲಿ ಮೂಡಿದೆ. ಯಾವುದೇ ಸಮಾರಂಭಗಳಿಗೆ ಆಮಂತ್ರಿಸದಿದ್ದರೂ ಆಕ್ಷೇಪಿಸುವ ಮನೋಭಾವ ನಮ್ಮಲ್ಲಿ ಮಾಯವಾಗಿದೆ.

ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿಯೂ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಶಾಲೆಗಳಲ್ಲಿ ಮಕ್ಕಳಿಗೆ ಹೋಮ್ ವರ್ಕ್ ಕೊಡುತ್ತಿದ್ದುದ್ದು, ತಮಗೆ ನೆನಪಿದೆ. ಅಲ್ಲವೇ ? ಅದೇ ಮಾದರಿಯಲ್ಲಿ, ವರ್ಕ್ ಫ್ರಮ್ ಹೋಮ್ ಎಂಬ ಹೊಸ ಆಯಾಮ ಇದೀಗ ಉದ್ಯೋಗ ಕ್ಷೇತ್ರವನ್ನು ಆವರಿಸಿದೆ.

ಒಂದೆಡೆ ಪ್ರಯಾಣದ ವೆಚ್ಚ, ಮತ್ತೊಂದೆಡೆ ಪ್ರಯಾಣದ ಸಮಯವನ್ನು ಉಳಿತಾಯ ಮಾಡುವ, ಮಗದೊಂದೆಡೆ ಮನೆಯೂಟವನ್ನು ಸವಿಯಲು ಅವಕಾಶವನ್ನು ಕಲ್ಪಿಸುವ ಈ ಪರಿಕಲ್ಪನೆ ಉದ್ಯೋಗಿ-ಸ್ನೇಹಿ ಮಾತ್ರವಲ್ಲ, ಸ್ಥಳ, ವಿದ್ಯುತ್ ಮತ್ತಿತರ ವೆಚ್ಚಗಳನ್ನು ಕಡಿತಗೊಳಿಸಲು ನೆರವಾಗಿ ಉದ್ಯೋಗದಾತರ-ಸ್ನೇಹಿಯೂ ಆಗಿದೆ.

ಹೌದು ! ಶಿಕ್ಷಣ ಕ್ಷೇತ್ರದ ಮನೆಗೆಲಸ (ಹೋಮ್ ವರ್ಕ್) ಎಂಬ ಪರಿಕಲ್ಪನೆ ಇದೀಗ ಉದ್ಯೋಗ ಕ್ಷೇತ್ರದಲ್ಲಿ ಮನೆಯಿಂದಲೇ ಕೆಲಸ (ವರ್ಕ್ ಫ್ರಮ್ ಹೋಮ್) ಎಂಬ ಹೊಸ ಪರಿಕಲ್ಪನೆಯತ್ತ ಪಯಣಿಸಿದೆ ಎಂಬುದನ್ನು ಗಮನಿಸಿರುವಿರಾ ?

**ಡಾ॥ ಪಿ. ಎಸ್. ಹರ್ಷ, ಐಪಿಎಸ್**
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001. email : feedbackjanapada@gmail.com



Download From : www.kpscvaani.com

# ಜನಸಾಮಾನ್ಯರ ಬವಣೆ ನಿವಾರಿಸಲಿರುವ

# ಮರಳು ನೀತಿ 2020



ಉಮೇಶ್ ಕೋಲಿಗೆರೆ



ನಿಸರ್ಗದತ್ತವಾಗಿ ದೊರೆಯುವ ಮರಳು ದಿನ ಕಳೆದಂತೆ ವಜ್ರದ ಹರಳುಗಳಂತೆ ಬೆಲೆ ಹೆಚ್ಚಿಸಿಕೊಳ್ಳುತ್ತಿದೆ. ಪ್ರತಿಯೊಂದು ಕನಸಿನ ಮನೆಗೂ ಕಲ್ಲು, ಸಿಮೆಂಟ್, ಕಬ್ಬಿಣ, ಮರಳು ಅತ್ಯಗತ್ಯವಾಗಿ ಬೇಕಾದ ಕಚ್ಚಾ ವಸ್ತುಗಳು. ಸುಲಭವಾಗಿ ಜನ ಸಾಮಾನ್ಯರ ಕೈಗೆಟಕುತ್ತಿದ್ದ ಮರಳು ದಿನ ಕಳೆದಂತೆ ದುಬಾರಿಯಾಗ ತೊಡಗಿದೆ. ಜನರಿಗಷ್ಟೆ ಅಲ್ಲ, ಮರಳಿನ ಬೇಡಿಕೆಯ ಬಿಸಿ ಸರ್ಕಾರದ ಕಾಮಗಾರಿಗಳಿಗೂ ತಗುಲಿದೆ. ಅಭಿವೃದ್ಧಿ ಕಾರ್ಯಗಳು ನಡೆಯಬೇಕು ಎಂದರೆ ಮರಳು ಬೇಕೇ ಬೇಕು. ಆದರೆ ಮುಗಿದು ಹೋಗುವ ಸಂಪನ್ಮೂಲವಾಗಿರುವ ಮರಳು ಕಾಲ ಕ್ರಮೇಣ ಕಡಿಮೆಯಾಗುತ್ತಿದೆ.

ಬೇಡಿಕೆ ಹೆಚ್ಚಾಗಿ ಪೂರೈಕೆ ಕಡಿಮೆಯಾದಂತೆಲ್ಲಾ ಅದರ ಬೆಲೆಯೂ ಗಗನ ಮುಖಿಯಾಗಿದೆ. ಅದನ್ನು ನಿಯಂತ್ರಿಸುವುದು ಒಂದೆಡೆಯಾದರೆ, ಮರಳನ್ನು ಹೆಚ್ಚು ತೆಗೆದಂತೆಲ್ಲಾ ಅಂತರ್ಜಲ ಕುಸಿದು ಪರಿಸರದ ಮೇಲೂ ಅಡ್ಡ ಪರಿಣಾಮಗಳಾಗಲಿವೆ. ಒಂದೆಡೆ ಬೇಡಿಕೆಯೂ ಪೂರೈಕೆಯಾಗಬೇಕು ಮತ್ತೊಂದೆಡೆ ಪರಿಸರವೂ ರಕ್ಷಣೆಯಾಗಬೇಕು. ಆ ರೀತಿಯ ಹೊಸ ಮರಳು ನೀತಿಯನ್ನು ರಾಜ್ಯ ಸರ್ಕಾರ ರೂಪಿಸಿದೆ.

ನೆರೆಯ ಆಂಧ್ರ ಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ ದೊಡ್ಡ ಚರ್ಚೆಗೆ ಗ್ರಾಸವಾಗಿದೆ. 2005 ರಿಂದೀಚೆಗೆ ಕರ್ನಾಟಕದಲ್ಲೂ ಮರಳು ಗಣಿಗಾರಿಕೆ ದೊಡ್ಡ ಸದ್ದು ಮಾಡಿದೆ. ತಮ್ಮದೇ ಕನಸಿನ ಮನೆ ಕಟ್ಟಿಕೊಳ್ಳಲು ಮುಂದಾಗುವ ಜನಸಾಮಾನ್ಯರು ಮರಳು, ಕಬ್ಬಿಣ, ಕಲ್ಲಿನ ಬೆಲೆ ಕೇಳಿ ಅಸಾಹಯಕರಾಗಿ ಕೈ ಚೆಲ್ಲುವ ಪರಿಸ್ಥಿತಿ ಇತ್ತು. ಮರಳು ಪೂರೈಕೆ ಮತ್ತು ಬೆಲೆ ನಿಯಂತ್ರಣ ಸರ್ಕಾರಕ್ಕೆ ಸವಾಲಿನ ಕೆಲಸವೇ ಆಗಿತ್ತು. ಪ್ರತಿ ವಿಧಾನ ಮಂಡಲದ





Download From : www.kpscvaani.com



**ಮರಳಿನ ಬೇಡಿಕೆ ಮತ್ತು ಪೂರೈಕೆ ನಡುವೆ ಇರುವ ಅಂತರವನ್ನು ಹೋಗಲಾಡಿಸಲು ಹಾಗೂ ಜನಸಾಮಾನ್ಯರು ಸ್ವಂತ ಮನೆ ಹೊಂದುವ ಆಶಯಕ್ಕಾಗಿ ಪಡುತ್ತಿರುವ ಬವಣೆಯನ್ನು ನಿವಾರಿಸಲು ಸರ್ಕಾರವು ಹೊಸ ಮರಳು ನೀತಿಯನ್ನು ರೂಪಿಸಿದೆ. ಈ ನೀತಿಯಿಂದ ಏನೆಲ್ಲಾ ಅವಕಾಶಗಳನ್ನು ಕಲ್ಪಿಸಲಾಗಿದೆ ಎಂಬುದನ್ನು ಸವಿಸ್ತಾರವಾಗಿ ಲೇಖನದಲ್ಲಿ ತಿಳಿಸಲಾಗಿದೆ.**

ಅಧಿವೇಶನದಲ್ಲೂ ಮರಳಿನ ಕೊರತೆ ಸಾಮಾನ್ಯವಾಗಿ ಚರ್ಚೆಗೆ ಬರುತ್ತಿದ್ದ ಖಾಯಂ ಅತಿಥಿ. 2020–21ನೇ ಸಾಲಿನ ಬಜೆಟ್ ಮಂಡನೆ ವೇಳೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮರಳಿನ ಸಮಸ್ಯೆಗೆ ಖಾಯಂ ಪರಿಹಾರ ಕಂಡು ಹಿಡಿಯುವ ಹೊಸ ನೀತಿಯನ್ನು ರೂಪಿಸುವುದಾಗಿ ಘೋಷಿಸಿದ್ದರು.

ಅದರಂತೆ ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿದ್ದ ಸಿ.ಸಿ.ಪಾಟೀಲ್ ಅವರ ನೇತೃತ್ವದಲ್ಲಿ ನೂತನವಾದ ಮರಳು ನೀತಿ 2020 ಅನ್ನು ರೂಪಿಸಲಾಯಿತು. ಈ ನೀತಿ ಅಕ್ರಮ ವ್ಯವಹಾರವನ್ನು ನಿಲ್ಲಿಸುವ ಜೊತೆಗೆ, ಅಗತ್ಯದಷ್ಟು ಮರಳನ್ನು ಒದಗಿಸಲಿದೆ. ಹಾಗೂ ಜನ ಸಾಮಾನ್ಯನ ಬವಣೆ ನೀಗಲಿದೆ.

2020ರ ಮೇ 21 ರಿಂದ ಜಾರಿಗೊಂಡಿರುವ ನೂತನ ನೀತಿಯ ಅನುಸಾರ ರಾಜ್ಯಾದ್ಯಂತ 183 ಮರಳು ನಿಕ್ಷೇಪಗಳನ್ನು ಗುರುತಿಸಿರುವುದಾಗಿ ಪ್ರಸ್ತುತ ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿರುವ ಮುರುಗೇಶ್ ನಿರಾಣಿ ಹೇಳಿದ್ದಾರೆ. ಇನ್ನೂ ಮುಂದೆ ಗರಿಷ್ಠ 300 ರೂ. ಪ್ರತಿಟನ್‌ಗೆ ಮರಳು ಲಭ್ಯವಾಗಲಿದೆ ಎಂದು ಸಚಿವರು ಭರವಸೆ ನೀಡಿದ್ದಾರೆ.

ಹಿಂದಿನ ಎಲ್ಲಾ ಕಹಿ ಅನುಭವಗಳನ್ನು ಕ್ರೋಢೀಕರಿಸಿ ಮತ್ತೆ ಅದೇ ತಪ್ಪುಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಲು ನೂತನ ಮರಳು ನೀತಿ ರೂಪಿಸಲಾಗಿದೆ. ಹಳೆಯ ವ್ಯವಸ್ಥೆಯಲ್ಲಿ ತೊಂದರೆ ಅನುಭವಿಸುತ್ತಿದ್ದ ಗ್ರಾಮೀಣರಿಗೆ ಈ ನೀತಿ ತುಸು ನೆಮ್ಮದಿ ಮೂಡಿಸಿದೆ. ಹಳ್ಳಿಗಾಡಿನಲ್ಲಿ ಮರಳು ಸಾಗಾಣಿಕೆಯ ಗೊಂದಲಗಳು ಬಗೆ ಹರಿದಿವೆ. ಅಕ್ರಮ ತಡೆಗೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆ ಇದೆ. ಪ್ರಮುಖವಾಗಿ ಬೆಲೆ ನಿಯಂತ್ರಣಕ್ಕೆ ಬರುವ ಮುನ್ಸೂಚನೆ ಸಿಕ್ಕಿದೆ.

### ಮರಳಿನ ಕೊರತೆ:

ರಾಜ್ಯದಲ್ಲಿ ಬೇಡಿಕೆಯಷ್ಟು ಮರಳು ಲಭ್ಯವಿಲ್ಲ. ಹೀಗಾಗಿ ಮರಳಿನ ಬೆಲೆ ಅನಪೇಕ್ಷಿಯವಾಗಿ ಏರಿಕೆಯಾಗಿತ್ತು. ರಾಜ್ಯ ಸರ್ಕಾರದ ಅಂದಾಜಿನ ಪ್ರಕಾರ ವರ್ಷಕ್ಕೆ 45 ದಶಲಕ್ಷ ಮೆಟ್ರಿಕ್ ಟನ್ ಮರಳಿನ ಬೇಡಿಕೆ ಇದೆ. ಮಾರುಕಟ್ಟೆಯಲ್ಲಿ ಇದರ ಪ್ರಮಾಣವನ್ನು 70 ದಶಲಕ್ಷ ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದೆ.

ಕೃತಕ ಮರಳು (ಎಂ ಸ್ಯಾಂಡ್), ನದಿಪಾತ್ರದ ಹಾಗೂ ಹರಾಜು ಹಾಕಲಾದ ನಿಕ್ಷೇಪಗಳಿಂದ 30 ದಶಲಕ್ಷ ಮೆಟ್ರಿಕ್ ಟನ್ ಮರಳು ಲಭ್ಯವಾಗುತ್ತಿದೆ. ಹೊರ

**ಹೊಸ ಮರಳು ನೀತಿಯಡಿ ಸ್ಥಳೀಯವಾಗಿ ಹಳ್ಳ, ತೊರೆ, ಕೆರೆಗಳಲ್ಲಿ ದೊರೆಯುವ ಮರಳು ನಿಕ್ಷೇಪಗಳನ್ನು ಕಂದಾಯ, ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಅಂತರ್ಜಲ ಇಲಾಖೆ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ತಂಡ ಗುರುತಿಸಲಿದೆ. ಈ ಪ್ರದೇಶಗಳಲ್ಲಿ ಪ್ರತಿ ವರ್ಷ ಎಷ್ಟು ಮರಳು ಸಂಗ್ರಹವಾಗಲಿದೆ ಎಂಬುದನ್ನು ಆಧರಿಸಿ ಗರಿಷ್ಠ ಒಂದು ವರ್ಷ ಮರಳು ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗುತ್ತದೆ. ಅದೇ ರೀತಿಯಲ್ಲಿ ಜಂಟಿ ಸಮೀಕ್ಷಾ ತಂಡಗಳ ಶಿಫಾರಸ್ಸು ಮತ್ತು ತಾಲ್ಲೂಕು ಸಮಿತಿಗಳ ಶಿಫಾರಸ್ಸು ಆಧರಿಸಿ ಜಿಲ್ಲಾಧಿಕಾರಿ ನೇತೃತ್ವದ ಸಮಿತಿ ಮರಳು ಗಣಿಗಾರಿಕೆಗೂ ಅನುಮತಿ ನೀಡಲಿದೆ.**



Download From : www.kpscvaani.com

ರಾಜ್ಯಗಳಿಂದ 2 ದಶಲಕ್ಷ ಮೆಟ್ರಿಕ್ ಟನ್ ತರಿಸಿಕೊಳ್ಳಲಾಗುತ್ತಿದ್ದು, ಲೈಸೆನ್ಸ್ ಪಡೆದ ಪಟ್ಟಾ ಜಮೀನುಗಳಿಂದ 4.5 ದಶಲಕ್ಷ ಮೆಟ್ರಿಕ್ ಟನ್ ಸೇರಿ ಒಟ್ಟು 36.5 ದಶಲಕ್ಷ ಮೆಟ್ರಿಕ್ ಟನ್ ಮರಳು ಸಿಗುತ್ತಿದೆ. ಇದರ ಹೊರತಾಗಿ ಇನ್ನೂ 8 ದಶಲಕ್ಷ ಮೆಟ್ರಿಕ್ ಟನ್ ಮರಳಿನ ಕೊರತೆ ಇದೆ.





## ಲೋಪ ಸರಿ ಪಡಿಸಲು ನಿರಂತರ ಪ್ರಯತ್ನ:

ಮರಳಿನ ಕೊರತೆ ನಿಗಿಸಲು 2011ರ ನೀತಿಯಲ್ಲಿ ಮರಳು ಗಣಿಗಾರಿಕೆಯನ್ನು ಲೋಕೋಪಯೋಗಿ ಇಲಾಖೆಗೆ ಒಪ್ಪಿಸಲಾಗಿತ್ತು. ತಾಲ್ಲೂಕು ಮರಳು ಸಮಿತಿಗಳು ನದಿ ಪಾತ್ರಗಳಲ್ಲಿ ಲಭ್ಯ ಇರುವ ಮರಳು ನಿಕ್ಷೇಪಗಳನ್ನು ಗುರುತಿಸಿ ಜಿಲ್ಲಾ ಸಮಿತಿಯಿಂದ ಅನುಮೋದನೆ ಪಡೆದು ಲೋಕೋಪಯೋಗಿ ಇಲಾಖೆ ಮೂಲಕ ಗಣಿಗಾರಿಕೆ ನಡೆಸಲು ಅವಕಾಶ ನೀಡುತ್ತಿದ್ದವು. ಭೂಮಿ ಬಗೆದು ಹೊರ ತೆಗೆದ ಮರಳನ್ನು ಒಂದೆಡೆ ದಾಸ್ತಾನು ಮಾಡಲಾಗುತ್ತಿತ್ತು. ಅಲ್ಲಿಂದ ಗ್ರಾಹಕರಿಗೆ ಸರಬರಾಜು ಮಾಡಲಾಗುತ್ತಿತ್ತು.

ಹಿಂದಿನ ಸರ್ಕಾರದ ಅವಧಿಯಲ್ಲಿ ಈ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಶಾಸಕರಾಗಿದ್ದ ಡಾ.ರಫೀಕ್ ಅಹ್ಮದ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿಯ ಶಿಫಾರಸ್ಸಿನಂತೆ ಕರ್ನಾಟಕ ಉಪ ಖನಿಜ ರಿಯಾಯಿತಿ ತಿದ್ದುಪಡಿ ನಿಯಮಾವಳಿಗಳನ್ನು ರೂಪಿಸಿ 2016ರ ಆಗಸ್ಟ್ 12ರಂದು ಜಾರಿಗೆ ತರಲಾಯಿತು. ಈ ನಿಯಮದ ಪ್ರಕಾರ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮೂಲಕ ಟೆಂಡರ್ ಕರೆದು ಮರಳು ನಿಕ್ಷೇಪಗಳನ್ನು ಹರಾಜು ಹಾಕುವ ಪದ್ಧತಿ ಜಾರಿಗೆ ಬಂದಿತ್ತು. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ನಡೆಸಲು ಲೈಸೆನ್ಸ್ ನೀಡಲಾಗುತ್ತಿತ್ತು.

ಆದರೂ ಮರಳಿನ ಕೊರತೆ ನೀಗಿಲ್ಲ. ಹಾಗಾಗಿ ರಾಜ್ಯ ಸರ್ಕಾರ 2017ರ ನವೆಂಬರ್ 16ರಂದು ಮತ್ತೊಮ್ಮೆ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳಿಗೆ ತಿದ್ದುಪಡಿ ತಂದು ವಿದೇಶದಿಂದ ಮರಳನ್ನು ಆಮದು ಮಾಡಿಕೊಳ್ಳಲು ಮುಂದಾಯಿತು. 2018ರಲ್ಲಿ ಎಂಎಸ್‌ಐಎಲ್ ಸಂಸ್ಥೆ 8 ಸಾವಿರ ಮೆಟ್ರಿಕ್ ಟನ್ ಮರಳನ್ನು ಆಮದು ಮಾಡಿಕೊಂಡು ಅದರಲ್ಲಿ ಅರ್ಧದಷ್ಟನ್ನು ಮಾರಾಟ ಮಾಡಿತ್ತು. ನಂತರ ಮಲೇಶಿಯಾದಿಂದ ಮತ್ತಷ್ಟು ಮೆಟ್ರಿಕ್ ಟನ್ ಮರಳನ್ನು ಆಮದು ಮಾಡಿಕೊಳ್ಳಲು ನಿರ್ಧರಿಸಲಾಯಿತಾದರೂ ಸಾಗಾಣಿಕೆ ವೆಚ್ಚ ಹೆಚ್ಚಾದ ಹಿನ್ನೆಲೆಯಲ್ಲಿ ಅದು ಬಂದರಿನಲ್ಲೇ ಸಿಲುಕಿಕೊಂಡಿತ್ತು.

ಮರಳು ಗಣಿಗಾರಿಕೆ ನಿಕ್ಷೇಪಗಳನ್ನು ಹರಾಜು ಮಾಡಲಾರಂಭಿಸಿದ ಮೇಲೆ ಬೆಲೆಯ ಮೇಲೆ ನಿಯಂತ್ರಣವೇ ಇಲ್ಲವಾಯಿತು. ಮರಳಿನ ದರ ಏರಿಕೆಯಾಗಿ ಜನ ತತ್ತರಿಸಿ ಹೋದರು. ಸರ್ಕಾರದ ವಿವಿಧ ಯೋಜನೆಗಳು ಮರಳಿನ ವೆಚ್ಚ ಭರಿಸಲಾಗದೆ ನಷ್ಟಕ್ಕೀಡಾದವು. ಮರಳಿಗೆ ಬೇಡಿಕೆ ಹೆಚ್ಚಿದೆ ಎಂದು ಮನಗಂಡ ಕೆಲವು ಗುತ್ತಿಗೆದಾರರು ದುಬಾರಿ ಮೊತ್ತಕ್ಕೆ ಮರಳಿನ ನಿಕ್ಷೇಪಗಳನ್ನು ಹರಾಜು ಕೂಗಿದರು. ಆದರೆ ಅಷ್ಟು ಹಣ ತೆತ್ತು ಮರಳು ತೆಗೆದು ಮಾರಿದರೂ ಲಾಭವಿಲ್ಲ ಎಂದು ಹೇಳಿ ಗಣಿಗಾರಿಕೆ ಮಾಡಲು ಮುಂದೆ ಬರಲಿಲ್ಲ. ಹೀಗಾಗಿ ನಿಕ್ಷೇಪಗಳು ಹರಾಜಾದರೂ ಮರಳಿನ ಕೊರತೆ ಕಡಿಮೆಯಾಗಲಿಲ್ಲ. ದರ ಮತ್ತಷ್ಟು ಹೆಚ್ಚಾಯಿತು. ಸರ್ಕಾರ ಕಾಮಗಾರಿಗಳಿಗೆ ಮರಳು ಪೂರೈಸಲಾಗದೆ ಕೆಲಸಗಳು ನಿಂತು ಹೋದವು.

ಸಮಸ್ಯೆ ಪರಿಹಾರ ಕಂಡು ಹಿಡಿಯಲು 2018ರ ಸೆಪ್ಟಂಬರ್ 20ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮರಳು ನೀತಿಯನ್ನು ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ಸಚಿವ ಸಂಪುಟದ ಉಪ ಸಮಿತಿ ರಚಿಸಲು ನಿರ್ಧರಿಸಲಾಯಿತು. ನವೆಂಬರ್ 3ರಂದು ಅಸ್ತಿತ್ವಕ್ಕೆ ಬಂದ ಸಂಪುಟ ಉಪ ಸಮಿತಿ ತನ್ನ ವರದಿ ನೀಡಿತ್ತು. ಬಳಿಕ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ 2019ರ ಡಿಸೆಂಬರ್ 13ರಂದು, 2020ರ ಫೆಬ್ರವರಿ 11ರಂದು ಎರಡು ಬಾರಿ ನಡೆದ ಸಭೆಗಳಲ್ಲಿ ಹೊಸ ಮರಳು ನೀತಿ ರೂಪಿಸಲು ನಿರ್ಧರಿಸಲಾಯಿತು.  ಮುಖ್ಯಮಂತ್ರಿ ಅವರ ಸೂಚನೆಯ ಮೇರೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ನೇತೃತ್ವದಲ್ಲಿ 2020ರ ಫೆಬ್ರವರಿ 27 ಮತ್ತು ಮಾರ್ಚ್ 5ರಂದು ಎರಡು ಸಭೆಗಳು ನಡೆದು ಕರಡು ಮರಳು

> **ಮರಳಿನ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು 2018ರ ಸೆಪ್ಟಂಬರ್ 20ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮರಳು ನೀತಿಯನ್ನು ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ಸಚಿವ ಸಂಪುಟದ ಉಪ ಸಮಿತಿ ರಚಿಸಲು ನಿರ್ಧರಿಸಲಾಯಿತು. ನವೆಂಬರ್ 3ರಂದು ಅಸ್ತಿತ್ವಕ್ಕೆ ಬಂದ ಸಂಪುಟ ಉಪ ಸಮಿತಿ ತನ್ನ ವರದಿ ನೀಡಿತ್ತು. ಬಳಿಕ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ 2019ರ ಡಿಸೆಂಬರ್ 13ರಂದು, 2020ರ ಫೆಬ್ರವರಿ 11ರಂದು ಎರಡು ಬಾರಿ ನಡೆದ ಸಭೆಗಳಲ್ಲಿ ಹೊಸ ಮರಳು ನೀತಿ ರೂಪಿಸಲು ನಿರ್ಧರಿಸಲಾಯಿತು.**



Download From : www.kpscvaani.com

ನೀತಿಯನ್ನು ರೂಪಿಸಲಾಯಿತು. ಏಪ್ರಿಲ್ 30ರಂದು ನಡೆದ ಸಚಿವ ಸಂಪುಟ ಸಭೆ 2020ರ ಹೊಸ ಮರಳು ನೀತಿಗೆ ಅನುಮೋದನೆ ನೀಡಿದೆ. ಮೇ 5ರಂದು ಈ ಬಗ್ಗೆ ಅಧಿಕೃತ ಆದೇಶ ಜಾರಿಯಾಗಿ, ಮೇ 21ರಿಂದ ಅನುಷ್ಠಾನಕ್ಕೆ ಬಂದಿದೆ.

### ನೂತನ ನೀತಿಯ ವಿಶೇಷಗಳು:

ನೂತನ ನೀತಿಯಲ್ಲಿ ಮರಳು ನಿಕ್ಷೇಪಗಳನ್ನು ಗುರುತಿಸುವುದರಿಂದ ಸಾಗಾಣಿಕೆಯವರೆಗೂ ವ್ಯವಸ್ಥಿತವಾದ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಗ್ರಾಮ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ನಿಕ್ಷೇಪಗಳನ್ನು ಗುರುತಿಸುವ ಜವಾಬ್ದಾರಿ ನೀಡುವ ಮೂಲಕ ಅಧಿಕಾರ ವಿಕೇಂದ್ರೀಕರಣಕ್ಕೂ ಒತ್ತು ನೀಡಲಾಗಿದೆ.

ಹಳ್ಳ, ತೊರೆ, ಕೆರೆಗಳಲ್ಲಿ ದೊರೆಯುವ ಮರಳು ನಿಕ್ಷೇಪಗಳನ್ನು ಒಂದರಿಂದ ಮೂರನೇವರೆಗಿನ ಖನಿಜ ಉಪ ಉತ್ಪನ್ನಗಳೆಂದು ಗುರುತಿಸಲಾಗಿದೆ. ಇದನ್ನು ಕಂದಾಯ, ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಅಂತರ್ಜಲ ಇಲಾಖೆ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ತಂಡ ಗುರುತಿಸಲಿದೆ. ಈ ಪ್ರದೇಶಗಳಲ್ಲಿ ಪ್ರತಿ ವರ್ಷ ಎಷ್ಟು ಮರಳು ಸಂಗ್ರಹವಾಗಲಿದೆ ಎಂಬುದನ್ನು ಆಧರಿಸಿ ಗರಿಷ್ಠ ಒಂದು ವರ್ಷ ಮರಳು ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗುತ್ತದೆ. ಜಂಟಿ ಸಮೀಕ್ಷಾ ತಂಡಗಳ ಶಿಫಾರಸ್ಸು ಮತ್ತು ತಾಲ್ಲೂಕು ಸಮಿತಿಗಳ ಶಿಫಾರಸ್ಸು ಆಧರಿಸಿ ಜಿಲ್ಲಾಧಿಕಾರಿ ನೇತೃತ್ವದ ಸಮಿತಿ ಮರಳು ಗಣಿಗಾರಿಕೆಗೆ ಅನುಮತಿ ನೀಡಲಿದೆ.

ಇನ್ನು ಹೊಳೆ, ನದಿ, ಅಣೆಕಟ್ಟು ಮತ್ತು ಅಣೆಕಟ್ಟಿನ ಹಿನ್ನೀರು ಪ್ರದೇಶದ ಮರಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಜಲಸಂಪನ್ಮೂಲ ಇಲಾಖೆ, ಕಂದಾಯ ಅಧಿಕಾರಿಗಳು ಜಂಟಿಯಾಗಿ ಸಮೀಕ್ಷೆ ನಡೆಸಿ ಗುರುತಿಸಲಿದ್ದಾರೆ. ಅರಣ್ಯ ಪ್ರದೇಶದಲ್ಲಿ ಮರಳು ನೀಕ್ಷೇಪಗಳಿದ್ದರೆ ಅದನ್ನು ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಸಮೀಕ್ಷೆ ನಡೆಸಿ ಗುರುತಿಸಲಾಗುತ್ತದೆ. ಮರಳಿನ ಲಭ್ಯತೆಯನ್ನು ವೈಜ್ಞಾನಿಕವಾಗಿ ಅಂದಾಜಿಸಿ ಗರಿಷ್ಠ ಐದು ವರ್ಷಗಳ ಕಾಲ ಗಣಿಗಾರಿಕೆ ಮಾಡಲು ಅನುಮತಿ ನೀಡಬಹುದಾಗಿದೆ. ಹಳ್ಳ ತೊರೆ, ಕೆರೆಗಳಲ್ಲಿ ಗ್ರಾಮ ಪಂಚಾಯತ್‌ಗಳು ಮರಳು ಗಣಿಗಾರಿಕೆ ನಡೆಸಿದರೆ, ನದಿ, ಹೊಳೆ ಪಾತ್ರದಲ್ಲಿ



**ನೂತನ ನೀತಿಯಲ್ಲಿ ಮರಳು ನಿಕ್ಷೇಪಗಳನ್ನು ಗುರುತಿಸುವುದರಿಂದ ಸಾಗಾಣಿಕೆಯವರೆಗೂ ವ್ಯವಸ್ಥಿತವಾದ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಹಾಗಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಖನಿಜ ಸಂರಕ್ಷಣಾ ಪಡೆಯನ್ನು ರಚಿಸುತ್ತಿದ್ದು, ಆ ಪಡೆಗಳು ಅನಧಿಕೃತ ಗಣಿಗಾರಿಕೆ, ಮರಳು ಸಾಗಾಣಿಕೆ ಮತ್ತು ದಾಸ್ತಾನನ್ನು ತಡೆಯಲಿವೆ.**

ತಾಲ್ಲೂಕು ಸಮಿತಿ ಮಾರ್ಗದರ್ಶನದಲ್ಲಿ ಸರ್ಕಾರ ಸೂಚಿಸಿದ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ನಿಗಮ, ಮಂಡಳಿಗಳು, ಕಾರ್ಪೋರೇಷನ್‌ಗಳು ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆದು ಮರಳು ಗಣಿಗಾರಿಕೆ ನಡೆಸಲಿವೆ. ನದಿ, ಹೊಳೆಯ ಭಾಗದಲ್ಲಿ ಗರಿಷ್ಠ ಐದು ವರ್ಷ ಮರಳು ತೆಗೆಯಲು ಅನುಮತಿ ನೀಡಬಹುದಾಗಿದೆ.

### ಮನೆ ನಿರ್ಮಾಣದ ಮರಳಿಗೆ ರಿಯಾಯಿತಿ:

ಈ ಮೊದಲಿನ ಪದ್ಧತಿಯಲ್ಲಿ ಸ್ವಂತ ಮನೆ ಕಟ್ಟುವವರು ಮರಳು ಸಾಗಾಣಿಕೆ ಮಾಡಲು ಅಂಜುವ ಪರಿಸ್ಥಿತಿ ಇತ್ತು. ಹೊಸ ನೀತಿಯಲ್ಲಿ ಮರಳು ಸಾಗಾಣಿಕೆಯ ನಿಯಮಗಳನ್ನು ಸಡಿಲಿಸಲಾಗಿದೆ. ಸ್ಥಳೀಯರು ಸ್ವಂತ ಮನೆ, ಶೌಚಾಲಯ, ಸಬ್ಸಿಡಿ ಮನೆಗಳು ಹಾಗೂ ಸಾಮೂದಾಯಿಕ ಯೋಜನೆಗಳಿಗೆ ಮರಳು ಬೇಕಾದ ಸಂದರ್ಭದಲ್ಲಿ ನಿರ್ಮಾಣ ಕಾಮಗಾರಿಯ ಫೋಟೋ, ಕಟ್ಟಡ ನಿರ್ಮಾಣದ ನಕ್ಷೆ ಅಥವಾ ಅನುಮತಿ ಪತ್ರ ಸೇರಿದಂತೆ ಯಾವುದಾರೂ ಒಂದು ದಾಖಲಾತಿಯನ್ನು ಹಾಜರು ಪಡಿಸಿ ಕೆರೆ, ತೊರೆ, ಹಳ್ಳಗಳ ಮರಳನ್ನು ಎತ್ತಿನ ಗಾಡಿ ಅಥವಾ ಟ್ರ್ಯಾಕ್ಟರ್‌ನಂತಹ ಲಘು ವಾಹನಗಳಲ್ಲಿ ತೆಗೆದುಕೊಂಡು ಹೋಗಬಹುದಾಗಿದೆ. ಅಂತರ್ ತಾಲ್ಲೂಕು ಮತ್ತು ಅಂತರ್ ಜಿಲ್ಲಾ ಮರಳು ಸಾಗಾಣಿಕೆಯನ್ನು ನಿರ್ಬಂಧಿಸಲಾಗಿದೆ. ಒಂದು ವೇಳೆ ಅನಿವಾರ್ಯವಾದರೆ ಸಂಬಂಧಿಸಿದ ಸಮಿತಿಗಳ ಮುಖ್ಯಸ್ಥರಾದ ಜಿಲ್ಲಾಧಿಕಾರಿಗಳ ಅನುಮತಿ ಪಡೆದು ಸಾಗಾಣಿಕೆ ಮಾಡಬಹುದಾಗಿದೆ.

### ಆನ್‌ಲೈನ್ ಬುಕ್ಕಿಂಗ್‌ಗೆ ಅವಕಾಶ:

ರಾಜ್ಯ ಸರ್ಕಾರ ನೆರೆಯ ತೆಲಂಗಾಣ ರಾಜ್ಯದ ಮರಳು ನೀತಿ ಬಹುತೇಕ ಅಂಶಗಳನ್ನು ಅಳವಡಿಸಿಕೊಂಡಿದೆ. ಇನ್ನೂ ಮುಂದೆ ಗ್ರಾಹಕರು ಮರಳಿಗಾಗಿ ಹುಡುಕಾಡಬೆಕಿಲ್ಲ. ಮರಳು ಮಿತ್ರ ಆ್ಯಪ್ ಅಳವಡಿಸಿಕೊಂಡರೆ ಅದರಲ್ಲಿ ಆನ್‌ಲೈನ್ ಮೂಲಕವೂ ಮರಳು ಖರೀದಿಸಬಹುದು. ಆ್ಯಪ್‌ನಲ್ಲಿ ಮರಳಿನ ಗುಣಮಟ್ಟ, ದರ ಸೇರಿದಂತೆ ಎಲ್ಲಾ ಮಾಹಿತಿಗಳು ಲಭ್ಯವಾಗಲಿವೆ. ಕುಳಿತ ಜಾಗದಿಂದಲೇ ಮರಳು ಖರೀದಿ ಆದೇಶ ನೀಡಿದರೆ, ಸಾಗಾಣಿಕೆಯ ಜವಾಬ್ದಾರಿ ಹೊತ್ತ ಸಂಸ್ಥೆಗಳು ಮನೆಯ ಬಾಗಿಲಿಗೆ ಮರಳನ್ನು ತಲುಪಿಸಲಿವೆ. ಸ್ಯಾಂಡ್ ಸೇಲ್ ಮ್ಯಾನೇಜ್‌ಮೆಂಟ್ ಅಂಡ್ ಮಾನಿಟರಿಂಗ್ ಸಿಸ್ಟಮ್ ಮೂಲಕ ಆನ್‌ಲೈನ್ ವ್ಯವಹಾರವನ್ನು ನಿರ್ವಹಣೆ ಮಾಡಲಾಗುತ್ತಿದೆ. ಮರಳು ಸಾಗಾಣಿಕೆಯ ವಾಹನಗಳ ಮೇಲೆ ನಿಗಾ ಇಡಲು ಹೊಸ ವ್ಯವಸ್ಥೆಯನ್ನು ರೂಪಿಸಲಾಗಿದೆ.

ಸರ್ಕಾರದ ಕಾಮಗಾರಿಗಳಿಗೆ ಮರಳಿನ ಕೊರತೆ ಎದುರಾಗದಂತೆ ಎಚ್ಚರಿಕೆ ವಹಿಸಲು ಕ್ರಮ ವಹಿಸಲಾಗಿದೆ. ಜಿಲ್ಲಾ ಸಮಿತಿ ಸರ್ಕಾರದ ಕಾಮಗಾರಿಗಳಿಗಾಗಿಯೇ ಮರಳು ನಿಕ್ಷೇಪಗಳನ್ನು ಕಾಯ್ದಿರಿಸುವ ಅಧಿಕಾರವನ್ನು ಹೊಂದಿದ್ದಾರೆ. ಆದರೆ



Download From : www.kpscvaani.com

ಕಾಯ್ದಿರಿಸಿದ ನಿಕ್ಷೇಪದ ಮರಳನ್ನು ಸರ್ಕಾರದ ಕಾಮಗಾರಿಗಳಿಗೆ ಮಾತ್ರ ಬಳಸಬೇಕು, ಅನ್ಯ ಉದ್ದೇಶಕ್ಕೆ ಬಳಸಿದರೆ ಅದನ್ನು ಅಕ್ರಮ ಎಂದು ಭಾವಿಸಲಾಗುತ್ತದೆ.

ಎಂದಿನಂತೆ ಪಟ್ಟಾ ಜಮೀನಿನಲ್ಲಿ ಗಣಿಗಾರಿಕೆ ಮಾಡಬಹುದು. 2016 ರ ನಿಯಮದಂತೆ ಮರಳು ಗುತ್ತಿಗೆ ಪಡೆದವರು ಅವಧಿ ಮುಗಿಯುವವರೆಗೂ ಆಯಾ ಪ್ರದೇಶದಲ್ಲಿ ಮರಳು ಗಣಿಗಾರಿಕೆ ಮಾಡಬಹುದಾಗಿದೆ. ಈ ಬಾರಿ ಮರಳಿನ ದರ ನಿಗದಿಯ ಹೊಣೆಗಾರಿಕೆಯನ್ನು ಸರ್ಕಾರ ತಾನೇ ಉಳಿಸಿಕೊಂಡಿದೆ. ಜಿಲ್ಲಾ ಸಮಿತಿಗಳು ನಿಕ್ಷೇಪಗಳಿಂದ ಹೊರ ತೆಗೆದ ಮರಳಿಗೆ ದರ ನಿಗದಿ ಮಾಡುತ್ತವೆ. ಅದಕ್ಕಿಂತ ಹೆಚ್ಚಿನ ದರಕ್ಕೆ ಮರಳು ಮಾರಾಟ ಮಾಡಿದರೆ ಅಪರಾಧವೆಂದು ಪರಿಗಣಿಸಲಾಗುತ್ತದೆ.

**ಅಕ್ರಮಕ್ಕೆ ಕಡಿವಾಣ:**

ಬೇಡಿಕೆ ಹೆಚ್ಚಾದಂತೆ ಅಕ್ರಮಗಳು ಹೆಚ್ಚ ತೊಡಗಿವೆ. 2014 ರಿಂದ 2019ರ ನಡುವೆ ಐದು ವರ್ಷದಲ್ಲಿ ಮರಳು ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ 2030 ಪ್ರಕರಣಗಳು ದಾಖಲಾಗಿವೆ. ಅವುಗಳಿಂದ 4.11 ಕೋಟಿ ರೂಪಾಯಿ ದಂಡ ವಸೂಲಿ ಮಾಡಿ, 1032 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಅಕ್ರಮ ಮರಳು ಸಾಗಾಣಿಕೆಗೆ ಸಂಬಂಧಿಸಿದಂತೆ 34,768 ಪ್ರಕರಣಗಳು ದಾಖಲಾಗಿದ್ದು, 46.04 ಕೋಟಿ ರೂ.ದಂಡ ವಸೂಲಿ ಮಾಡಲಾಗಿದೆ. 12,804 ಎಫ್‌ಐಆರ್‌ಗಳು ದಾಖಲಾಗಿವೆ.

ಮರಳನ್ನು ಅಕ್ರಮವಾಗಿ ದಾಸ್ತಾನು ಮಾಡಿದ 1049 ಪ್ರಕರಣಗಳು ವರದಿಯಾಗಿದ್ದು, 479 ಪ್ರಕರಣಗಳಲ್ಲಿ ಕ್ರಿಮಿನಲ್ ಅಪರಾಧಕ್ಕಾಗಿ ಎಫ್‌ಐಆರ್ ದಾಖಲಿಸಲಾಗಿದೆ, 27.4 ಕೋಟಿ ರೂ. ದಂಡ ವಸೂಲಿ ಮಾಡಲಾಗಿದೆ. ಇನ್ನೂ ಫಿಲ್ಟರ್ ಮರಳಿಗೆ ಸಂಬಂಧಿಸಿದಂತೆ 580 ಪ್ರಕರಣ ವರದಿಯಾಗಿದ್ದು, 32 ಲಕ್ಷ ರೂಪಾಯಿ ದಂಡ ವಸೂಲಿ ಮಾಡಲಾಗಿದೆ. 471 ಎಫ್‌ಐಆರ್ ದಾಖಲಿಸಲಾಗಿದೆ. ನೂತನ ನೀತಿಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಖನಿಜ ಸಂರಕ್ಷಣಾ ಪಡೆಯನ್ನು ರಚಿಸುತ್ತಿದೆ. ಆ ಪಡೆಗಳು ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನನ್ನು ತಡೆಯಲಿವೆ.

ಹೊರ ರಾಜ್ಯಗಳ ನಡುವೆ ಮರಳು ಸಾಗಾಣಿಕೆ ನಡೆಯುವಾಗ ಪ್ರತಿ ಮೆಟ್ರಿಕ್ ಟನ್‌ಗೆ 100 ರೂ. ನಿಯಂತ್ರಣ ಶುಲ್ಕ ವಿಧಿಸಲಾಗುತ್ತದೆ. ಮರಳು ಸಾಗಾಣಿಕೆಯ ವಾಹನಗಳು ಕಡ್ಡಾಯವಾಗಿ ಜಿಪಿಎಸ್ ಅಳವಡಿಸಿಕೊಂಡಿರಬೇಕು ಎಂಬ ನಿಯಮವನ್ನು ಕಟ್ಟು ನಿಟ್ಟಾಗಿ ಜಾರಿಗೆ ತರಲಾಗಿದೆ.

ಪರವಾನಗಿ ಪಡೆದವರನ್ನು ಹೊರತು ಪಡಿಸಿ ಬೇರೆಯವರು ಮರಳು ದಾಸ್ತಾನು ಮಾಡುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಅಕ್ರಮ ದಾಸ್ತಾನು ಕಂಡು ಬಂದರೆ ಅದನ್ನು ಜಪ್ತಿ ಮಾಡಿ ಸರ್ಕಾರಿ ಕಾಮಗಾರಿಗಳಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ಅವಕಾಶ ಇದೆ.

ಪರವಾನಗಿಯಲ್ಲಿ ನಿಗದಿ ಪಡಿಸಿದ್ದಕ್ಕಿಂತ ಹೆಚ್ಚಿನ ಮರಳನ್ನು ಸಾಗಾಣಿಕೆ ಮಾಡಿದರೆ ಹೆಚ್ಚುವರಿಯಾಗಿರುವ ಪ್ರತಿ ಮೆಟ್ರಿಕ್ ಟನ್‌ಗೆ 3 ಸಾವಿರ ರೂ. ದಂಡವನ್ನು, ಜಿಪಿಎಸ್ ಅಳವಡಿಸದ ವಾಹನಗಳಿಗೆ 10 ಸಾವಿರ ದಂಡ ವಿಧಿಸಲಾಗುತ್ತದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹಳ್ಳ, ತೊರೆ, ಕೆರೆಗಳಿಂದ ಮರಳು ಸಾಗಾಣಿಕೆ ಮಾಡುವ ಲಘು ವಾಹನಗಳಿಗೆ ಈ ದಂಡ ಅನ್ವಯವಾಗುವುದಿಲ್ಲ ಎಂದು ಹೇಳಲಾಗಿದೆ. ಆಡಳಿತಾತ್ಮಕವಾಗಿ ಸರ್ಕಾರ ಮೂರು ಹಂತದ ವ್ಯವಸ್ಥೆಯನ್ನು ರೂಪಿಸಿದೆ. ಜಿಲ್ಲಾಧಿಕಾರಿ ನೇತೃತ್ವದಲ್ಲಿರುವ ಜಿಲ್ಲಾ ಸಮಿತಿಗೆ ಸಿಇಒ, ಎಸ್‌ಪಿ, ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆಯ ಕಾರ್ಯಪಾಲಕ ಅಭಿಯಂತರು, ಆರ್‌ಟಿಒ, ಜಿಲ್ಲೆಯ ಎಲ್ಲಾ ವಿಭಾಗಗಳ ಉಪವಿಭಾಗಾಧಿಕಾರಿಗಳು, ತಹಸೀಲ್ದಾರ್ ಅವರು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಸದಸ್ಯರಾಗಿದ್ದರೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಈ ಸಮಿತಿಯು ಕನಿಷ್ಠ ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ತಾಲ್ಲೂಕು ಸಮಿತಿಯಿಂದ ವರದಿ ಪಡೆದು ಮರಳು ಗಣಿಗಾರಿಕೆ ಪರವಾನಗಿಗಳ ಮಂಜೂರಾತಿ ಕುರಿತು ತೀರ್ಮಾನ ತೆಗೆದುಕೊಳ್ಳಬೇಕು. ಮರಳು ಗಣಿಗಾರಿಕೆಯಿಂದ ಪರಿಸರಕ್ಕೆ ಹಾನಿಯಾಗಿದ್ದರೆ ಅದನ್ನು ಅಂದಾಜಿಸಲು ಮಾಜಿ ಸೇನಾಧಿಕಾರಿ, ನಾಗರಿಕ ಸೇವೆಯಿಂದ ನಿವೃತ್ತರಾದವರು ಮತ್ತು ಪರಿಸರ ಹಾಗೂ ಗಣಿಗಾರಿಕೆ ಕ್ಷೇತ್ರದಲ್ಲಿ ಶೈಕ್ಷಣಿಕ ಹಿನ್ನೆಲೆ ಹೊಂದಿರುವ ಪ್ರಾಧ್ಯಾಪಕರನ್ನೊಳಗೊಂಡ ಸಮಿತಿ ರಚಿಸಬೇಕು. ವರದಿ ಪಡೆದು ಹಾನಿಗೊಳಗಾದ ಪರಿಸರ ಸುಧಾರಣೆಗೆ ತಗಲುವ ವೆಚ್ಚವನ್ನು ಸಂಬಂಧ ಪಟ್ಟವರಿಂದ ವಸೂಲು ಮಾಡಬೇಕು.

ಈ ಮೊದಲು 2016ರಲ್ಲಿ ಗುತ್ತಿಗೆ ಪಡೆದು ಮರಳು ಗಣಿಗಾರಿಕೆ ನಡೆಸುತ್ತಿರುವವರು ಶೇ.25ರಷ್ಟು ಮರಳನ್ನು ಸರ್ಕಾರಿ ಕಾಮಗಾರಿಗೆ ಮೀಸಲಿರಿಸುವಂತೆ ಸೂಚಿಸುವುದು. ಅಕ್ರಮ ತಡೆಗೆ ತನಿಖಾ ಠಾಣೆಗಳನ್ನು ಸ್ಥಾಪಿಸುವುದು, ನೆರೆಯ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಿ ಮರಳು ಗಣಿಗಾರಿಕೆ ಮಾಹಿತಿಗಳನ್ನು ಹಂಚಿಕೊಂಡು ಸಮನ್ವಯ ಸಭೆಗಳನ್ನು ನಡೆಸುವುದು. ಕೊರತೆ ಇರುವ ಜಾಗಗಳಲ್ಲಿ ಮರಳು ದಾಸ್ತಾನು ಕೇಂದ್ರ ಸ್ಥಾಪಿಸುವುದು ಜಿಲ್ಲಾ ಸಮಿತಿಗಳ ಜವಾಬ್ದಾರಿಗಳಾಗಿವೆ.

ಉಪವಿಭಾಗಾಧಿಕಾರಿ ನೇತೃತ್ವದಲ್ಲಿ ತಾಲ್ಲೂಕು ಸಮಿತಿ ರಚಿಸಲಾಗುತ್ತಿದ್ದು, ಅದರಲ್ಲಿ ಇಒ, ಡಿವೈಎಸ್‌ಪಿ, ಲೋಕೋಪಯೋಗಿ, ಜಲಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೋಟಾರು ವಾಹನ ನಿರೀಕ್ಷಕರು, ಸಹಾಯಕ ಪರಿಸರ ಅಧಿಕಾರಿ, ಭೂ ವಿಜ್ಞಾನಿ, ಪಿಡಿಒ ಸದಸ್ಯರಾಗಿದ್ದರೆ, ತಹಸೀಲ್ದಾರ್ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಈ ಸಮಿತಿಗಳು ಮರಳು ನಿಕ್ಷೇಪಗಳನ್ನು ಗುರುತಿಸಿ ನಕ್ಷೆ ರೂಪಿಸಲಿವೆ. ಗಣಿಗಾರಿಕೆಯ ನೇರ ಉಸ್ತುವಾರಿ ನೋಡಿಕೊಳ್ಳಲಿವೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ನೇತೃತ್ವದಲ್ಲಿ ರಾಜ್ಯ ಮಟ್ಟದ ಸಮಿತಿ ರಚನೆಯಾಗಲಿದ್ದು, ಈ ಸಮಿತಿಯಲ್ಲಿ ಡಿಜಿಪಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಆಯುಕ್ತರು/ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಉಳಿದಂತೆ 11 ಇಲಾಖೆಗಳ ಮುಖ್ಯಸ್ಥರು ಸದಸ್ಯರಾಗಿರುತ್ತಾರೆ. ಈ ಸಮಿತಿ ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾ ಸಮಿತಿಯ ಜವಾಬ್ದಾರಿ ನಿರ್ವಹಣೆಯನ್ನು ಪರಾಮರ್ಶೆ ನಡೆಸಲಿದೆ.

ಒಟ್ಟಿನಲ್ಲಿ ಹೊಸ ಮರಳು ನೀತಿ ಮುಂದಿನ ದಿನಗಳಲ್ಲಿ ಮರಳಿನ ಅಭಾವ ನೀಗಿಸುವ ಮುನ್ಸೂಚನೆ ನೀಡಿದೆ. ■



Download From : www.kpscvaani.com

AERO INDIA 2021

## ಏರೋ ಇಂಡಿಯಾದಲ್ಲಿ ಕಣ್ಮನ ಸೆಳೆದ

# ಲೋಹದ ಹಕ್ಕಿಗಳ ಕಲರವ



**ಶುಭ್ರವಾದ ನೀಲಾಕಾಶದಲ್ಲಿ ಲೋಹದ ಹಕ್ಕಿಗಳ ಕಲರವ, ಚಮಾತ್ಕಾರ. ಕಿವಿಗಡಚಿಕ್ಕುವಂತೆ ಭೂಮಿಯಿಂದ ಆಕಾಶಕ್ಕೆ ಚಿಮ್ಮಿ ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ತನ್ನ ಚಮಾತ್ಕಾರದಿಂದ ನೋಡುಗರನ್ನು ಚಕಿತಗೊಳಿಸುವಂತಹ ವಾತಾವರಣ.... ಹೌದು, ಇದು ಬೆಂಗಳೂರಿನ ಯಲಹಂಕದ ವಾಯುನೆಲೆಯಲ್ಲಿ ನಡೆದ 13ನೇ ಏರೋ ಇಂಡಿಯಾ 2021ರಲ್ಲಿ ಕಂಡು ಬಂದ ನೋಟ.**

ಜಿ. ರಾಮಕೃಷ್ಣ

ನೆಲದಿಂದ ಆಕಾಶಕ್ಕೆ ಹಾರಿ ಅಲ್ಲಲ್ಲಿ ಕಂಡುಬಂದ ಮೋಡಗಳ ಮಧ್ಯೆ ನುಗ್ಗಿ ಆಕಾಶದಲ್ಲಿ ಪೈಲೆಟ್‌ನ ಹಿಡಿತದಿಂದ ಪಲ್ಟಿ ಹೊಡೆಯುವುದೂ ಸೇರಿದಂತೆ ಹಲವಾರು ಚಮಾತ್ಕಾರಗಳ ಮೂಲಕ ನೋಡುಗರಲ್ಲಿ ಅಚ್ಚರಿ, ಗಾಬರಿ, ದಿಗ್ಭ್ರಮೆ ಮೂಡಿಸಿ ಮತ್ತೆ ಭೂಮಿಯತ್ತ ಬರುತ್ತಿದ್ದ ದೃಶ್ಯ ಕಣ್ಮನ ಸೆಳೆಯಿತು.

ಏರೋ ಇಂಡಿಯಾ ಪ್ರದರ್ಶನ ಆರಂಭವಾಗುವ ಸಂದರ್ಭದಲ್ಲಿ ಭಾರತದ ತ್ರಿವಣ ಧ್ವಜ, ವಾಯುಸೇನೆ ಧ್ವಜ ಹಾಗೂ ಏರೋ ಇಂಡಿಯಾ –2021ರ ಧ್ವಜವನ್ನು ಹೊತ್ತ ಮೂರು ಪ್ರತ್ಯೇಕ ಹೆಲಿಕಾಪ್ಟರ್‌ಗಳು ಸಾಲಾಗಿ ಹಾರುವ ಮೂಲಕ ರೋಚಕ, ಕಣ್ಮನ ಸೆಳೆದು ವೈಮಾನಿಕ ಪ್ರದರ್ಶನಕ್ಕೆ ಚಾಲನೆ ಸಿಕ್ಕಿತು.

ಎಚ್‌ಎಎಲ್ ನಿರ್ಮಿತ ವಿಮಾನ **'ಆತ್ಮನಿರ್ಭರ ಭಾರತ್'** ಫಾರ್ಮೇಷನ್, ವಿಶ್ವದ ಏಕೈಕ ಹೆಲಿಕಾಪ್ಟರ್ ಕಸರತ್ತಿನ ತಂಡವಾದ ಸಾರಂಗ್, ಸೂರ್ಯಕಿರಣ ವಿಮಾನಗಳ ಜತೆಗೆ ಜಂಟಿ ಪ್ರದರ್ಶನ ನಡೆಸಿದವು. ಭಾರತೀಯರ ಹೆಮ್ಮೆಯ ಸಂಕೇತವಾದ ತೇಜಸ್, ಸುಖೋಯ್–30, ರಫೆಲ್ ನಭಕ್ಕೆ ಚಿಮ್ಮುವ ಮೂಲಕ ವೈಮಾನಿಕ ಪ್ರದರ್ಶಕ್ಕೆ ಮೆರಗು ತುಂಬಿದವು.

### ರಫೆಲ್ ಪ್ರದರ್ಶನ

ಭಾರೀ ನಿರೀಕ್ಷೆ ಮೂಡಿಸಿರುವ ರಫೇಲ್ ಯುದ್ಧ ವಿಮಾನದ ಬಗ್ಗೆ ಎಲ್ಲರಿಗೂ ಕುತೂಹಲ. ಫ್ರಾನ್ಸ್‌ನಿಂದ ಖರೀದಿ ಮಾಡಲಾಗಿರುವ ಈ ಯುದ್ಧ ವಿಮಾನದ ಪ್ರದರ್ಶನ ಹಾಗೂ ಸಾಹಸದ ಬಗ್ಗೆ ತಿಳಿದುಕೊಳ್ಳಲು ಎಲ್ಲರಿಗೂ ಕಾತರ. ಈ ಕಾತರವನ್ನು ರಫೆಲ್ ನಿವಾರಿಸಿತು. ಕ್ಷಣ ಮಾತ್ರದಲ್ಲಿ ನೆಲದಿಂದ ನಭೋಮಂಡಲಕ್ಕೆ ಹಾರಿದ ರಫೆಲ್ ನೀಲಾಕಾಶದಲ್ಲಿ ರೊಯ್ಯನೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹಾರಾಡಿ ತನ್ನ ಸಾಮರ್ಥ್ಯ ಪ್ರದರ್ಶಿಸಿ ಎಲ್ಲರ ಗಮನ ಸೆಳೆಯಿತು.





Download From : www.kpscvaani.com

## ಡಕೋಟ ಪ್ರದರ್ಶನ

ವಿಶೇಷ ಎಂದರೆ, ಜಮ್ಮು-ಕಾಶ್ಮೀರದ ಪ್ರಮುಖ ಭಾಗವನ್ನು ಉಳಿಸಿ ಸ್ವತಂತ್ರ ಭಾರತದ ಮೊದಲ ಯುದ್ಧ ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ **'ಪರುಶುರಾಮ'** (ಡಕೋಟಾ ಡಿ.ಸಿ-3) ಎರಡನೇ ಬಾರಿ ಏರೋ ಇಂಡಿಯಾದ ವೈಮಾನಿಕ ಪ್ರದರ್ಶನ ನೀಡಿತ್ತು. ಆರಂಭದ ದಿನ ವೈಮಾನಿಕ ಪ್ರದರ್ಶನದಲ್ಲಿ 42 ಏರ್‌ಕ್ರಾಫ್ಟ್‌ಗಳು ಒಟ್ಟು 12 ಬಗೆಯ ಫಾರ್ಮೇಷನ್‌ನಲ್ಲಿ ಪ್ರದರ್ಶನ ನೀಡಿದವು. ಅದರಲ್ಲಿ ಎಚ್‌ಎಎಲ್ ನಿರ್ಮಿತ ವಿಮಾನಗಳಾದ ಎಲ್‌ಸಿಎಚ್ ಟ್ರೈನರ್, ಎಚ್‌ಟಿಟಿ-40, ಹಾಕ್‌ಎಂಕೆ-132, ಡು-228, ಐಜೆಟಿ ವಿಮಾನಗಳು ಆಕರ್ಷಣೆಯ **'ಆತ್ಮನಿರ್ಭರ ಭಾರತ್'** ಫಾರ್ಮೇಷನ್ ಮನಮೋಹಕವಾಗಿತ್ತು.

## ಕಣ್ಮನ ಸೆಳೆದ ಸೂರ್ಯಕಿರಣ ಮತ್ತು ಸಾರಂಗ್

ವಿಶ್ವದ ಏಕೈಕ ಕಸರತ್ತಿನ ಹೆಲಿಕಾಪ್ಟರ್ ತಂಡ ಸಾರಂಗ್ ನಾಲ್ಕು ಲಘು ಉಪಯೋಗಿ ಹೆಲಿಕಾಪ್ಟರ್ ಹಾಗೂ ಬರೋಬ್ಬರಿ ಒಂಬತ್ತು ಸೂರ್ಯಕಿರಣ ವಿಮಾನಗಳು ನಡೆಸಿದ ಜಂಟಿ ಪ್ರದರ್ಶನ ರೋಚಕವಾಗಿತ್ತು. ಏಕಕಾಲಕ್ಕೆ ನಾಲ್ಕು ಸಾರಂಗ್ ಹೆಲಿಕಾಪ್ಟರ್ ಮತ್ತು ಒಂಬತ್ತು ಸೂರ್ಯಕಿರಣ ವಿಮಾನಗಳು ಬಾನಂಗಳದಲ್ಲಿ ಚಿತ್ತಾರ ಮೂಡಿಸಿದವು. ಎರಡು ಸೂರ್ಯಕಿರಣ ವಿಮಾನಗಳು ಪ್ರೇಮ ಸಂಕೇತವಾದ ಹೃದಯದ ಚಿತ್ತಾರವನ್ನು ಹೊಗೆಯ ಮೂಲಕ ಬಿಡಿಸಿದರೆ, ಸಾರಂಗ್ ಸುಖೋಯ್ ಫಾರ್ಮೇಷನ್ ನಡೆಸಿದವು. ಸೂರ್ಯಕಿರಣ ಡಾಲ್ಫಾ, ತೇಜಸ್, ಜಿಕಿಂಗ್ ಕ್ರಾಸ್ ಫಾರ್ಮೇಷನ್ ಹಾಗೂ ಎರಡು ಸೂರ್ಯಕಿರಣ ವಿಮಾನಗಳ ಸುತ್ತ ಮತ್ತೊಂದು ಸೂರ್ಯಕಿರಣ ವಿಮಾನ ಪಲ್ಟಿ ಹಾಕುತ್ತಾ ಬಲದಿಂದ ಎಡಕ್ಕೆ ಹಾರಿದ್ದು, ನೋಡುಗರ ಮೈನವಿರೇಳಿಸಿತ್ತು. ಸ್ವದೇಶಿ ನಿರ್ಮಿತ ಹಾಗೂ ವಿಶ್ವದ ಅತ್ಯಂತ ಹಗುರ ಯುದ್ಧ ವಿಮಾನ ಎಂಬ ಹೆಗ್ಗಳಿಕೆಗೆ ಪಾತ್ರವಾದ ತೇಜಸ್ ಎಂಕೆ-1 ಕಿವಿ ಗುಂಯ್‌ಗುಡುವಂತೆ ಸೂಪರ್ ಸಾನಿಕ್ ವೇಗದಲ್ಲಿ ಪಲ್ಟಿ ಹೊಡೆಯುತ್ತಾ ಸಾಗಿದ್ದು ನೋಡುಗರಲ್ಲಿ ಬೆರಗು ಮೂಡಿಸಿತು.

## ಏಕೈಕ ವಿದೇಶಿ ವಿಮಾನ ಹಾರಾಟ

ಇದೇ ಮೊದಲ ಬಾರಿಗೆ ಯುಎಸ್ ನ 'ಬಿ 1 ಬಿ ಲ್ಯಾನ್ಸರ್ ಹೆವಿ ಬಾಂಬರ್' ವೈಮಾನಿಕ ಪ್ರದರ್ಶನ ನೀಡಿತ್ತು. ಈ ಮೂಲಕ ವೈಮಾನಿಕ ಪ್ರದರ್ಶನದಲ್ಲಿ ಭಾಗವಹಿಸಿದ ಏಕೈಕ ವಿದೇಶಿ ವಿಮಾನವಾಗಿದೆ. ಬಿ 1ಬಿ ಲ್ಯಾನ್ಸರ್ ಹೆವಿ ಬಾಂಬರ್ ವಿಮಾನ ನಿರಂತರವಾಗಿ 26 ಗಂಟೆ ಹಾರಾಟ ನಡೆಸಬಲ್ಲ ಸಾಮರ್ಥ್ಯ ಹೊಂದಿದೆ. ವೈಮಾನಿಕ ಪ್ರದರ್ಶನದಲ್ಲಿ ಯುಎಸ್‌ನ ವಿಮಾನಕ್ಕೆ ಭಾರತೀಯರ ಹೆಮ್ಮೆಯ ತೇಜಸ್ ಸಾಥ್ ನೀಡಿದ್ದು ವಿಶೇಷವಾಗಿತ್ತು.

## ಸಾರ್ವಜನಿಕರಿಗಿರಲಿಲ್ಲ ಪ್ರವೇಶ

ಬೆಂಗಳೂರಿನಲ್ಲಿಯೇ ನಡೆದ 12ನೇ ಏರೋ ಇಂಡಿಯಾದಲ್ಲಿ ಲಕ್ಷಾಂತರ ಪ್ರೇಕ್ಷಕರು ಆಗಮಿಸಿ ವಿಮಾನಗಳ ಚಮಾತ್ಕಾರವನ್ನು ವೀಕ್ಷಿಸಿ ಕಣ್ತುಂಬಿಕೊಂಡಿದ್ದರು. ಪ್ರದರ್ಶನ ಮುಗಿದಾಗ ಸಾರ್ವಜನಿಕರು ನಿಂತಿದ್ದ ವಿಮಾನಗಳ ಬಳಿ ಹೋಗಿ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದ್ದರು. ಆದರೆ, ಈ ಬಾರಿ ಅಂತಹ ವಾತಾವರಣ ಕಂಡುಬರಲಿಲ್ಲ. ಇದಕ್ಕೆ ಕೊರೊನಾ ಸೋಂಕು ಭೀತಿ ಇನ್ನು ಮರೆಯಾಗದೇ ಇರುವುದೇ ಕಾರಣ. ಈ ಬಾರಿಯ ಏರ್ ಶೋಗೆ ವಾಯುಸೇನೆಯ ಅಧಿಕಾರಿಗಳು, ಆಯ್ದ ಗಣ್ಯರು, ಕೆಲವು ಕಂಪನಿಗಳ ಅಧಿಕಾರಿಗಳು, ಮಾಧ್ಯಮದವರು ಮಾತ್ರ ಭಾಗಿಯಾಗಿದ್ದರು. ಒಟ್ಟಾರೆ ಪ್ರತಿದಿನ 3 ಸಾವಿರ ಮಂದಿಗಿಂತ ಹೆಚ್ಚು ಮಂದಿಗೆ ಅವಕಾಶವಿರಲಿಲ್ಲ. ಇದರಿಂದ ಪ್ರೇಕ್ಷಕರ ಗ್ಯಾಲರಿ ಬಿಕೋ ಎನ್ನುವಂತಾಗಿತ್ತು.



**ಭಾರತ ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುತ್ತಿದೆ. ಆತ್ಮನಿರ್ಭರ ಭಾರತದ ಕಾರ್ಯಕ್ರಮದಡಿ ನಿಗದಿತ ಗುರಿ ತಲುಪಲು ಬಹಳಷ್ಟು ಅವಕಾಶಗಳಿವೆ. ರಕ್ಷಣಾ ಮತ್ತು ವೈಮಾನಿಕ ಕ್ಷೇತ್ರದಲ್ಲಿ ಅವಕಾಶಗಳನ್ನು ಹೆಚ್ಚಿಸಲು ಈ ಏರೋ ಇಂಡಿಯಾ 2021 ಉತ್ತಮ ವೇದಿಕೆಯಾಗಲಿದೆ. ಆತ್ಮ ನಿರ್ಭರ್ ಯೋಜನೆಯ ಮೂಲಕ ರಕ್ಷಣಾ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಯನ್ನು ತರಲು ಸರ್ಕಾರ ಕ್ರಮಕೈಗೊಂಡಿದೆ.**

ನರೇಂದ್ರ ಮೋದಿ
ಪ್ರಧಾನಮಂತ್ರಿಗಳು
ಭಾರತ ಸರ್ಕಾರ

## ಉತ್ತಮ ಆಯೋಜನೆ

ಏರೋ ಇಂಡಿಯಾ ಹಿನ್ನೆಲೆಯಲ್ಲಿ ಯಲಹಂಕ ವಾಯುನೆಲೆಯ 10 ಕಿಲೋಮೀಟರ್ ಸುತ್ತಳತೆಯಲ್ಲಿ ಮಾಂಸದ ಅಂಗಡಿಗಳು, ಮಾಂಸಾಹಾರ ಹೋಟೆಲ್‌ಗಳಿಗೆ ಬೀಗ ಹಾಕಲಾಗಿತ್ತು. ವಿಮಾನಗಳ ಚಮಾತ್ಕಾರದ ಸಂದರ್ಭದಲ್ಲಿ ಪಕ್ಷಿಗಳ ಉಪಟಳ ಇರಬಾರದು ಎಂಬ ಕಾರಣಕ್ಕೆ ಇಂತಹ ಕ್ರಮ ಕೈಗೊಳ್ಳಲಾಗಿತ್ತು. ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೂಡಾ 10 ದಿನಗಳ ಕಾಲ ಕಟ್ಟೆಚ್ಚರ ವಹಿಸಿದ್ದರಿಂದ ಏರೋ ಇಂಡಿಯಾದಲ್ಲಿ ವಿಮಾನಗಳ ಪ್ರದರ್ಶನ ಅಚ್ಚುಕಟ್ಟಾಗಿ ನಡೆಯಲು ಕಾರಣವಾಯಿತು.

## ಗಮನ ಸೆಳೆದ ಇಂಡಿಯಾ ಪೆವಿಲಿಯನ್

ಭಾರತೀಯ ರಕ್ಷಣಾ ಮತ್ತು ವೈಮಾನಿಕ ಉತ್ಪನ್ನ ತಯಾರಿಕಾ ಸಂಸ್ಥೆಗಳು ಹೆಲಿಕಾಪ್ಟರ್, ವಿಮಾನ ತಯಾರಿಕೆಗೆ ಸೀಮಿತವಾಗದೇ 'ಆತ್ಮನಿರ್ಭರ ಭಾರತ್'ಗೆ ಪುಷ್ಟಿ ನೀಡುವ ವೈದ್ಯಕೀಯ, ವಿಪತ್ತು ಪ್ರವಾಸ ಸೇರಿದಂತೆ ಇನ್ನಿತರ ಕ್ಷೇತ್ರಗಳಿಗೆ ನೆರವಾಗುವ ಹಲವು ಉಪಕರಣ ಮತ್ತು ಸಾಧನಗಳನ್ನು 'ಇಂಡಿಯಾ ಪೆವಿಲಿಯನ್'ನಲ್ಲಿ ಪ್ರದರ್ಶನಕ್ಕಿಟ್ಟಿದ್ದು ಗಮನ ಸೆಳೆಯಿತು.

ಫೆಬ್ರವರಿ 3ರಂದು ವೈಮಾನಿಕ ಪ್ರದರ್ಶನವನ್ನು ಕೇಂದ್ರ ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್ ಹಾಗೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 'ಇಂಡಿಯಾ ಪೆವಿಲಿಯನ್' ಮಳಿಗೆ ಉದ್ಘಾಟನೆ ಮಾಡಿದರು. ಈ ಮಳಿಗೆಯಲ್ಲಿ



Download From : www.kpscvaani.com



ಎಚ್‌ಎಎಲ್, ಡೈನಾಮ್ಯಾಟಿಕ್ಸ್ ಟೆಕ್ನಾಲಜಿ, ಟಾಟಾ ಏರೋ ಸ್ಪೇಸ್, ಬಿಇಎಲ್, ಭಾರತೀಯ ವಾಯು ಸೇನೆ ಸೇರಿದಂತೆ 74 ಕಂಪನಿಗಳು ತಮ್ಮ ಉತ್ಪನ್ನ ಮತ್ತು ಸಂಶೋಧನೆಗಳನ್ನು ಪ್ರದರ್ಶನ ಮಾಡಿತ್ತು.

ಎಚ್‌ಎಎಲ್ ನಿರ್ಮಿತ ಎರಡು ಸುಧಾರಿತ ಲಘು ಹೆಲಿಕಾಪ್ಟರ್‌ಗಳು ಇಂಡಿಯಾ ಪೆವಿಲಿಯನ್‌ನ ಪ್ರಮುಖ ಆಕರ್ಷಣೆಯಾಗಿದ್ದವು. ಈ ಹೆಲಿಕಾಪ್ಟರ್‌ಗಳು ಮೂರು ಟನ್‌ನಿಂದ 13 ಟನ್‌ವರೆಗೂ ಭಾರ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದ್ದು, ವೈದ್ಯಕೀಯ ತುರ್ತು, ವಿಪತ್ತು ನಿರ್ವಹಣೆ ಸೇರಿದಂತೆ ಪ್ರಮುಖ ಕಾರ್ಯಗಳಿಗೆ ಬಳಸಿಕೊಳ್ಳಬಹುದಾಗಿದೆ. ಇವುಗಳ ಜತೆಗೆ ಹತ್ತಾರು ಡ್ರೋನ್‌ಗಳು, ಹೆಲಿಕಾಪ್ಟರ್, ಲಘು ಯುದ್ಧ ವಿಮಾನ ಬಿಡಿಭಾಗಗಳು, ವೈಮಾನಿಕ ಸಂಪರ್ಕಕ್ಕೆ ನೆರವಾಗುವ ಉತ್ಪನ್ನಗಳನ್ನು ಪ್ರದರ್ಶನ ಮಾಡಲಾಗಿತ್ತು.

## ಮಿತ್ರ ರಾಷ್ಟ್ರಗಳಿಗೆ ಭಾರತ ನೆರವು

**'ಏರೋ ಇಂಡಿಯಾ–2021'** ಅಂಗವಾಗಿ ಹಿಂದೂ ಮಹಾಸಾಗರ ವ್ಯಾಪ್ತಿಯಲ್ಲಿನ ದೇಶಗಳ 'ಚೀಫ್ ಆಫ್ ಏರ್ ಸ್ಟಾಫ್ ಕಾನ್‌ಕ್ಲೇವ್' ಉದ್ಘಾಟಿಸಿದ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಮಾತನಾಡಿ, ಮಿತ್ರ ರಾಷ್ಟ್ರಗಳಲ್ಲಿನ ಭದ್ರತಾ ಸಮಸ್ಯೆಗಳಿಗೆ ಭಾರತ ನೆರವು ನೀಡಲು ಸದಾ ಸಿದ್ಧ. ಮಿತ್ರ ರಾಷ್ಟ್ರಗಳು ಹಾಗೂ ಹಿಂದೂ ಮಹಾಸಾಗರ ಪ್ರದೇಶದ ರಾಷ್ಟ್ರಗಳೊಂದಿಗಿನ ಸಂಬಂಧ ಗಟ್ಟಿಗೊಳಿಸಿಕೊಳ್ಳುವುದು ನಮ್ಮ ಉದ್ದೇಶವಾಗಿದೆ. ಮಿತ್ರ ರಾಷ್ಟ್ರಗಳಲ್ಲಿನ ಭದ್ರತಾ ಸಮಸ್ಯೆಗಳಿಗೆ ಭಾರತ ನೆರವು ನೀಡಲು ಸದಾ ಸಿದ್ಧವಿದೆ. ಭಾರತದ ಸೇನೆ ಎಲ್ಲ ರೀತಿಯ ಸನ್ನಿವೇಶಗಳನ್ನು ದಿಟ್ಟವಾಗಿ ನಿಭಾಯಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ವರ್ಚುವಲ್‌ನಲ್ಲಿ ಭಾಗವಹಿಸಿದ್ದ ಇರಾನ್, ರಿಪಬ್ಲಿಕ್ ಆಫ್ ಕೊರಿಯಾ, ಸ್ವೀಡನ್, ಆಸ್ಟ್ರೇಲಿಯಾ, ಮಾಲ್ಡೀವ್ಸ್, ಥಾಯ್ಲಾಂಡ್, ಕೀನ್ಯಾ, ಗಿನಿ, ನ್ಯೂಜಿಲ್ಯಾಂಡ್, ಕತಾರ್, ಶ್ರೀಲಂಕಾ, ಯುಎಇ, ತಾಂಜೇನಿಯ, ಕಜಕಿಸ್ತಾನ್, ಸೂಡಾನ್, ಬಾಂಗ್ಲಾ ಸೇರಿದಂತೆ 15ಕ್ಕೂ ಹೆಚ್ಚಿನ ದೇಶಗಳ ವಾಯುಸೇನೆ ಮುಖ್ಯಸ್ಥರು ವೈಯಕ್ತಿಕವಾಗಿ ಹಾಗೂ ಐದಕ್ಕೂ ಹೆಚ್ಚಿನ ದೇಶಗಳ ವಾಯುಸೇನೆ ಮುಖ್ಯಸ್ಥರು ಭಾರತದ ಉದ್ದೇಶಕ್ಕೆ ತಮ್ಮ ಬೆಂಬಲ ಸೂಚಿಸಿದರು.

## ದೇಶದ ವಾಯು ನೆಲೆ ಸಶಕ್ತ

ವಿವಾದಾತ್ಮಕ ಗಡಿ ಪ್ರದೇಶದಲ್ಲಿ ಯಥಾಸ್ಥಿತಿ ಕಾಪಾಡದೆ ತೊಂದರೆ ಉಂಟು ಮಾಡಲು ಯತ್ನಗಳು ನಡೆಯುತ್ತಿವೆ. ಇಂತಹ ದುಸ್ಸಾಹಸಕ್ಕೆ ದೇಶದ ವಾಯುಸೇನೆಯ ಮೂಲಕವೇ ನಮ್ಮ ಪ್ರದೇಶವನ್ನು ರಕ್ಷಣೆ ಮಾಡಿಕೊಳ್ಳಲಾಗುತ್ತದೆ ಎಂದು ಭಾರತ ಸರ್ಕಾರದ ರಕ್ಷಣಾ ಸಚಿವ ರಾಜನಾಥ ಸಿಂಗ್ ತಿಳಿಸಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಸದಾನಂದಗೌಡ, ರಕ್ಷಣಾ ಮುಖ್ಯಸ್ಥ ಬಿಪಿನ್ ರಾವತ್, ಭೂಸೇನೆ ಮುಖ್ಯಸ್ಥ ಮನೋಜ್ ಮುಕುಂದ್ ನರವಾನೆ, ವಾಯುಸೇನೆ ಮುಖ್ಯಸ್ಥ ಆರ್.ಕೆ. ಬದೌರಿಯಾ, ನೌಕಾಸೇನೆ ಮುಖ್ಯಸ್ಥ ಅಡ್ಮಿರಲ್ ಕರಂಬೀರ್ ಸಿಂಗ್, ರಕ್ಷಣಾ ಇಲಾಖೆ ಕಾರ್ಯದರ್ಶಿ ಅಜಯ್‌ಕುಮಾರ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮತ್ತಿತರ ಗಣ್ಯರ ಸಮ್ಮುಖದಲ್ಲಿ ಏರೋ ಇಂಡಿಯಾ ಉದ್ಘಾಟನೆ ಮಾಡಿ ಮಾತನಾಡಿದ ಅವರು, ನಮ್ಮ ದೇಶದ ಪ್ರದೇಶವನ್ನು ಕಬಳಿಸುವಂತಹ

**ರಕ್ಷಣಾ ಹಾಗೂ ಏರೋಸ್ಪೇಸ್ ಕ್ಷೇತ್ರದಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿಯಲ್ಲಿದೆ. ಈ ಕ್ಷೇತ್ರಗಳಲ್ಲಿನ ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ.67 ರಷ್ಟು ಕರ್ನಾಟಕದಿಂದಲೇ ಬರುತ್ತಿದೆ. ಏರೋಸ್ಪೇಸ್‌ಗೆ ಮತ್ತಷ್ಟು ಉತ್ತೇಜನ ನೀಡಲು ದೇಶದಲ್ಲೇ ಮೊದಲ ಏರೋ ಸ್ಪೇಸ್ ಪಾಲಿಸಿ ಜಾರಿಗೆ ತಂದಿದ್ದೇವೆ. ದೇವನಹಳ್ಳಿಯಲ್ಲಿ 1 ಸಾವಿರ ಎಕರೆಯಲ್ಲಿ ಏರೋಸ್ಪೇಸ್ ಪಾರ್ಕ್ ನಿರ್ಮಿಸಿ 14,700 ಕೋಟಿ ರೂ. ಬಂಡವಾಳ ಹೂಡುತ್ತಿದ್ದೇವೆ.**

–ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ






Download From : www.kpscvaani.com



## ರಾಜ್ಯದಲ್ಲಿ ಹೂಡಿಕೆಗೆ ವಿಫುಲ ಅವಕಾಶ

ಏರೋ ಸ್ಪೇಸ್ ಮತ್ತು ರಕ್ಷಣಾ ಕ್ಷೇತ್ರದಲ್ಲಿ ಹೂಡಿಕೆಗೆ ರಾಜ್ಯದಲ್ಲಿ ವಿಫುಲ ಅವಕಾಶಗಳಿವೆ. ನೂತನ ಕೈಗಾರಿಕಾ ನೀತಿಯಡಿ ರಾಜ್ಯದ ಎರಡು ಹಾಗೂ ಮೂರನೇ ಹಂತದ ನಗರಗಳಲ್ಲೂ ಅತ್ಯುತ್ತಮ ಉದ್ಯಮ ಸ್ನೇಹಿ ವಾತಾವರಣ ಸೃಷ್ಟಿಯಾಗಿದೆ. ಹೀಗಾಗಿ ಬೆಂಗಳೂರು ಮಾತ್ರವಲ್ಲದೆ ಎರಡು–ಮೂರನೇ ಹಂತದ ನಗರಗಳಲ್ಲೂ ಹೂಡಿಕೆಗೆ ಎಲ್ಲ ಅವಕಾಶಗಳಿವೆ. ಏರೋಸ್ಪೇಸ್ ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಮೊದಲಿನಿಂದಲೂ ಕೈಗಾರಿಕಾ ಸ್ನೇಹಿಯಾಗಿರುವ ರಾಜ್ಯದಲ್ಲಿ ಇತ್ತೀಚೆಗೆ ನೂತನ ಕೈಗಾರಿಕೆ ನೀತಿ ಹಾಗೂ ಕೈಗಾರಿಕೆಗೆ ಉತ್ತೇಜನ ನೀಡುವ ಕಾಯಿದೆಗಳನ್ನು ಮಾಡಿದ್ದೇವೆ. ಈ ಮೂಲಕ ದೇಶದಲ್ಲಿಯೇ ಬಂಡವಾಳ ಹೂಡಿಕೆಗೆ ಪ್ರಶಸ್ತ ರಾಜ್ಯವಾಗಿ ಕರ್ನಾಟಕ ಬದಲಾಗಿದೆ. ನೀತಿ ಆಯೋಗದ ಸೂಚ್ಯಂಕದಲ್ಲಿ ಸತತ ಎರಡು ವರ್ಷಗಳಿಂದ ಮೊದಲ ಸ್ಥಾನ ಪಡೆದಿದೆ.

– **ಜಗದೀಶ್ ಶೆಟ್ಟರ್,** ಸಚಿವರು ಬೃಹತ್ ಮತ್ತು ಮಧ್ಯಮ ಕೈಗಾರಿಕೆ.

ದುಸ್ಸಾಹಸಕ್ಕೆ ಕೈ ಹಾಕಿದರೆ ತಕ್ಕ ಪ್ರತ್ಯುತ್ತರ ನೀಡಿ ನಮ್ಮ ಗಡಿಯ ಸುರಕ್ಷತೆ ಕಾಪಾಡಲು ಸಜ್ಜಾಗಿದ್ದೇವೆ. ದೀರ್ಘ ಕಾಲದಿಂದ ಬಗೆಹರಿಯದ ವಿವಾದಾತ್ಮಕ ಗಡಿ ಪ್ರದೇಶದಲ್ಲಿ ಕಾಲಿರಿಸುವ ಹಲವು ಪ್ರಯತ್ನಗಳು ನಡೆಯುತ್ತಿವೆ. ಇಂತಹ ದುಸ್ಸಾಹಸಕ್ಕೆ ಪ್ರತ್ಯುತ್ತರ ನೀಡಲು ಹಾಗೂ ಗಡಿಯ ಸಮಗ್ರತೆಯನ್ನು ರಕ್ಷಿಸಲು ನಾವು ಬದ್ಧರಾಗಿದ್ದು, ಎದುರಾಳಿಗಳಿಗೆ ತಕ್ಕ ಉತ್ತರ ನೀಡಲು ನಮ್ಮ ದೇಶದ ವಾಯು ಸೇನೆಯ ಬಲ ಸಿದ್ಧವಾಗಿದೆ ಎಂದರು.

ಯಾವುದೇ ಮಿತ್ರ ರಾಷ್ಟ್ರಗಳು ಸಂಕಷ್ಟದಲ್ಲಿದ್ದಾಗ ನಮ್ಮ ಸೇನೆ ಸಹಾಯ ಹಸ್ತ ಚಾಚಲಿದೆ. ಮಿತ್ರ ರಾಷ್ಟ್ರಗಳಲ್ಲಿ ಯಾವುದೇ ನೈಸರ್ಗಿಕ ವಿಪತ್ತು ಮತ್ತಿತರ ಘಟನೆಗಳು ನಡೆದರೂ ರಕ್ಷಣೆಗೆ ಧಾವಿಸಲು ನಾವು ಸಿದ್ಧರಿದ್ದೇವೆ. 'ವಸುದೈವ ಕುಟುಂಬಕಂ' ತತ್ವಕ್ಕೆ ಬದ್ಧವಾಗಿರುವ ನಾವು ವಿಶ್ವವೇ ಒಂದು ಕುಟುಂಬ ಎಂಬುದರಲ್ಲಿ ನಂಬಿಕೆ ಹೊಂದಿದ್ದೇವೆ ಎಂದು ಕೇಂದ್ರ ಸಚಿವ ರಾಜನಾಥ್ ಸಿಂಗ್ ನೆರೆದಿದ್ದ ಮಿತ್ರರಾಷ್ಟ್ರಗಳ ಪ್ರತಿನಿಧಿಗಳಿಗೆ ಭರವಸೆ ನೀಡಿದರು.

### 34 ಕಂಪನಿಗಳೊಂದಿಗೆ ಕರ್ನಾಟಕ ಸರ್ಕಾರ ಒಪ್ಪಂದ

ಏರೋ ಇಂಡಿಯಾದ ಮೂರು ದಿನಗಳ ಸಂಭ್ರಮದಲ್ಲಿ ಕರ್ನಾಟಕ ಸರ್ಕಾರ 34 ಕಂಪನಿಗಳೊಂದಿಗೆ ರಕ್ಷಣಾ ವಲಯಕ್ಕೆ ಸಂಬಂಧಿಸಿದಂತೆ ಬಂಡವಾಳ ಹೂಡಿಕೆಗೆ ಒಪ್ಪಂದ ಮಾಡಿಕೊಂಡಿದೆ. ಇದರ ಪ್ರಕಾರ 2464 ಕೋಟಿ ರೂ. ಬಂಡವಾಳ ಹೂಡಿಕೆಯಾಗಲಿದ್ದು, 6,350 ಮಂದಿಗೆ ಉದ್ಯೋಗ ದೊರೆಯಲಿದೆ. ವಿವಿಧ ರೀತಿಯ ಏರೋಸ್ಪೇಸ್ ಉತ್ಪನ್ನಗಳನ್ನು ಉತ್ಪಾದನೆ ಮಾಡುವ ಉದ್ದೇಶದಿಂದಲೇ ಈ ಒಪ್ಪಂದ ಮಾಡಿಕೊಳ್ಳಲಾಗಿದೆ.

### ಎಚ್ಎಎಲ್‌ಗೆ 48 ಸಾವಿರ ಕೋಟಿ ಒಪ್ಪಂದ

ಬೆಂಗಳೂರಿನಲ್ಲಿರುವ ಸಾರ್ವಜನಿಕ ಸ್ವಾಮ್ಯದ ಹಿಂದೂಸ್ಥಾನ್ ಏರೋನಾಟಿಕಲ್ ಲಿಮಿಟೆಡ್ (ಎಚ್ಎಎಲ್) ರೋಲ್ಸ್ ರಾಯ್ಸ್ ಜೊತೆ ಹಾಗೂ ರಕ್ಷಣಾ ಇಲಾಖೆ ಜೊತೆ 48 ಸಾವಿರ ಕೋಟಿ ರೂ. ವೆಚ್ಚದಲ್ಲಿ 73 ತೇಜಸ್ ಲಘು ಯುದ್ಧ ವಿಮಾನ ಹಾಗೂ 10 ಟ್ರೇನರ್ ಜೆಟ್‌ಗಳನ್ನು ನಿರ್ಮಿಸಿಕೊಡುವುದಾಗಿ ಒಪ್ಪಂದ ಮಾಡಿಕೊಂಡಿದೆ. ಈ ಎಲ್ಲ ವಿಮಾನಗಳನ್ನು 9 ವರ್ಷದೊಳಗೆ ನಿರ್ಮಿಸಿ ಕೊಡಲಾಗುತ್ತದೆ.

### ಕರ್ನಾಟಕದ ಸಾಧನೆಗೆ ರಾಷ್ಟ್ರಪತಿ ಮೆಚ್ಚುಗೆ

ಭಾರತವು ಕೊರೊನಾ ನಡುವೆಯೂ ಸವಾಲಾಗಿ ಸ್ವೀಕರಿಸಿ ವಿಶ್ವ ಮಟ್ಟದ **'ಏರೋ ಇಂಡಿಯಾ–2021'** ವೈಮಾನಿಕ ಪ್ರದರ್ಶನ ಆಯೋಜಿಸಲು ಯಶಸ್ವಿಯಾಗಿದೆ. ಹಲವು ವರ್ಷಗಳಿಂದ ವೈಮಾನಿಕ ಪ್ರದರ್ಶನ ಯಶಸ್ವಿಯಾಗಿ ನಡೆದುಕೊಂಡು ಬರಲು ಕರ್ನಾಟಕ ಸರ್ಕಾರ ಕೂಡಾ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಮೆಚ್ಚುಗೆ ವ್ಯಕ್ತಪಡಿಸಿದರು.

ಏರೋ ಇಂಡಿಯಾ–2021ರ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶವು ಆತ್ಮನಿರ್ಭರ ಪರಿಕಲ್ಪನೆಯತ್ತ ವಾಲುತ್ತಿದೆ. ಪ್ರತಿ ಕ್ಷೇತ್ರದಂತೆ ರಕ್ಷಣಾ ಕ್ಷೇತ್ರದಲ್ಲೂ ದೇಶಿಯ ಕಂಪೆನಿಗಳ ಕೊಡುಗೆ ಹೆಚ್ಚಿಸಲು ಏರೋ ಇಂಡಿಯಾ ಪ್ರಮುಖ ವೇದಿಕೆಯಾಗಿ ಪರಿಣಾಮಕಾರಿ ಕೆಲಸ ಮಾಡಿದೆ. ಕೊರೊನಾ ನಿಯಮಾವಳಿಗಳಲ್ಲಿ ರಾಜಿಯಾಗದೆ ವಿಶ್ವಮಟ್ಟದ ವೈಮಾನಿಕ ಪ್ರದರ್ಶನ ನಡೆಸಿರುವುದು ಹೆಮ್ಮೆಯ ವಿಷಯ. ಈ ವೇಳೆ ಭಾರತೀಯ ವಾಯುಸೇನೆ ಸೈನಿಕರ ಶಕ್ತಿ ಹಾಗೂ ಸಾಹಸಗಳ ಪ್ರದರ್ಶನಗಳು ಗಮನ ಸೆಳೆದಿವೆ. ದೇಶದ ವಾಯುಗಡಿಯನ್ನು ಸುರಕ್ಷಿತವಾಗಿಸುವ ಜೊತೆಗೆ ದೇಶಕ್ಕೆ ರಕ್ಷಣೆ ಒದಗಿಸುವ ಎಲ್ಲಾ ಸೈನಿಕರಿಗೂ ಧನ್ಯವಾದ ಎಂದರು.

ಕಳೆದ ಆರು ವರ್ಷಗಳಿಂದ ರಕ್ಷಣಾ ಕ್ಷೇತ್ರಗಳಲ್ಲಿ ಆಗಿರುವ ಸುಧಾರಣೆಗಳಿಂದಾಗಿ ರಕ್ಷಣಾ ಕ್ಷೇತ್ರದಲ್ಲಿ ಸ್ವದೇಶಿ ಕಂಪೆನಿಗಳ ಕೊಡುಗೆ ಹೆಚ್ಚುತ್ತಿದೆ. ದೇಶವನ್ನು ರಕ್ಷಣಾ ಉತ್ಪಾದನೆಯ ಪ್ರಮುಖ ಜಾಲ ಮಾಡುವತ್ತ ಹೆಜ್ಜೆ ಇಡಲಾಗಿದೆ. ಕಳೆದ ಆರು ವರ್ಷಗಳಲ್ಲಿ ಏರೋಸ್ಪೇಸ್ ಕ್ಷೇತ್ರದಲ್ಲಿ ಹೂಡಿಕೆ ಪ್ರಮಾಣ ಶೇ. 200 ಹೆಚ್ಚಾಗಿದೆ. ಅದರ ಜತೆಗೆ ರಕ್ಷಣಾ ಕ್ಷೇತ್ರದ ಉತ್ಪಾದನೆ ಮತ್ತು ಹೂಡಿಕೆ ಪ್ರಮಾಣವೂ ಹೆಚ್ಚಾಗುತ್ತಿದೆ. ಇದು ದೇಶದ ರಕ್ಷಣೆಗೆ ಕೈಗೊಂಡಿರುವ ಕ್ರಮಗಳಾಗಿದ್ದು ಮೆಚ್ಚುಗೆಯ ಅಂಶ ಎಂದರು. ■



Download From : www.kpscvaani.com

# ಪರಿಸರ ಪ್ರೇಮದತ್ತ ಬೆಳಕು ಚೆಲ್ಲುವ

# ಹಕ್ಕಿ ಕಥೆ

ಡಿ. ಪಿ. ಮುರಳೀಧರ್





Download From : www.kpscvaani.com

ರಂಗಾಯಣ ಹೆಸರಾಂತ ನಾಟಕಕಾರ ಬಿ. ವಿ. ಕಾರಂತರ ಕನಸಿನ ಕೂಸು. ಇಡೀ ದಕ್ಷಿಣ ಭಾರತದಲ್ಲಿಯೇ ಪ್ರಪ್ರಥಮ ಬಾರಿಗೆ ಮೈಸೂರಿನಲ್ಲಿ 1989 ರಲ್ಲಿ ಅಸ್ತಿತ್ವಕ್ಕೆ ಬಂದ ಈ ರಂಗ ಶಿಕ್ಷಣ ಸಂಸ್ಥೆ ಹವ್ಯಾಸೀ ಕಲಾವಿದರನ್ನು ವೃತ್ತಿಪರ ಪ್ರತಿಭೆಗಳನ್ನಾಗಿ ರೂಪಿಸುವ ವಿಶೇಷ ವೇದಿಕೆಯಾಯಿತಲ್ಲದೆ, ರಂಗಾಸಕ್ತರಿಗೆ ಸದಭಿರುಚಿಯ ನಾಟಕಗಳನ್ನು ನೋಡುವ ಸೌಭಾಗ್ಯವನ್ನೂ ಕಲ್ಪಿಸಿತು. ಪ್ರಾದೇಶಿಕ ಭಾಷೆ ಮತ್ತು ಸಿರಿವಂತ ಸಂಸ್ಕೃತಿಗೆ ಪುಷ್ಠಿ ನೀಡುವ ಸಲುವಾಗಿ ಧಾರವಾಡದಲ್ಲಿ 2006 ರಲ್ಲಿ, ಶಿವಮೊಗ್ಗದಲ್ಲಿ 2011 ರಲ್ಲಿ ಹಾಗೂ ಕಲಬುರಗಿಯಲ್ಲಿ 2014 ರಲ್ಲಿ ರಂಗಾಯಣದ ಶಾಖೆಗಳು ಸ್ಥಾಪನೆಗೊಂಡವು.

ರಂಗಭೂಮಿಯನ್ನು ಉಳಿಸಿ–ಬೆಳೆಸುವ, ಬೆಳೆಸಿ–ಬೆಳಗಿಸುವ ಕಾಯಕದಲ್ಲಿ ತೊಡಗಿರುವ ರಂಗಾಯಣಕ್ಕೆ ಆಶ್ರಯ ಕಲ್ಪಿಸಿದ್ದು ಕರ್ನಾಟಕ ಸರ್ಕಾರ. ಕನ್ನಡವನ್ನು ಎಲ್ಲೆಡೆ ಪಸರಿಸುವ ಸಂಸ್ಕೃತಿಯನ್ನು ಎಲ್ಲೆಡೆ ಬಿತ್ತುವ ಹೊಣೆ ಹೊತ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಚಾಮರದಲ್ಲಿ ರಂಗಾಯಣ ಹೆಮ್ಮರವಾಗಿ ಬೆಳೆಯುತ್ತಿರುವುದು ಅಭಿಮಾನದ ಸಂಗತಿ.

ರಂಗಾಯಣದ ಹಲವು ರಂಗ ಪ್ರಯೋಗಗಳು ಜನ ಜಾಗೃತಿ ಮೂಡಿಸುವಲ್ಲಿ ಯಶಸ್ಸು ಕಂಡಿವೆ. ರಂಗಾಯಣದ ವೇದಿಕೆಯಲ್ಲಿ ಮೂಡಿಬಂದ ನಾಟಕಗಳು ಕೇವಲ ಮನರಂಜನೆ ಮಾತ್ರವಲ್ಲ, ಮನೋವಿಕಾಸಕ್ಕೂ ಮದ್ದಾಗಿವೆ. ಅಂತಹುದರಲ್ಲಿ ಹಕ್ಕೀ ಕಥೆಯೂ ಒಂದು.

ಬೇಸಿಗೆ ಕಾಲದಲ್ಲಿ ಆಲೀ ಕಲ್ಲು ಮಳೆ, ಚಳಿಗಾಲದಲ್ಲಿ ಬಿಸಿಲಿನ ತಾಪಮಾನ ತಾರಕಕ್ಕೆ, ಮಳೆಗಾಲದಲ್ಲಿ ಮಳೆಯೇ ಇಲ್ಲ ! ವಿಶ್ವದೆಲ್ಲೆಡೆ ಹೀಗೆ ಹವಾಮಾನ ವೈಪರೀತ್ಯವನ್ನು ಕಾಣುತ್ತಿದ್ದೇವೆ. ಇದಕ್ಕೆಲ್ಲಾ ಕಾರಣ ಏನು ? ಕಾರಣ ಯಾರು ?

ಜೀವ ಸಂಕುಲದಲ್ಲಿ ಮಾನವ ಮಾತ್ರವಲ್ಲ, ಪ್ರಾಣಿ ಸಂಕುಲವಿದೆ. ಪಕ್ಷಿ ಸಂಕುಲವಿದೆ. ಸಸ್ಯ ಸಂಕುಲವೂ ಇದೆ. ಎಂಬುದನ್ನು ಮಾನವ ಮರೆತಿದ್ದಾನೆ. ಅಭಿವೃದ್ಧಿಯ ಹೆಸರಿನಲ್ಲಿ ನಾಡು ವಿಸ್ತಾರಗೊಳ್ಳುತ್ತಿದೆ. ಕಾಡು ಕ್ಷೀಣಿಸುತ್ತಿದೆ.

ಪರಿಸರದಲ್ಲಿ ಸಮತೋಲನ ಕಾಯ್ದುಳ್ಳಬೇಕೆಂಬ ಕನಿಷ್ಠ ಕಾಳಜಿ ಮಾನವನಲ್ಲಿ ಮಾಯವಾಗಿದೆ. ನಿಸರ್ಗದ ಮಹತ್ವವನ್ನು ಮಾನವ ನಿರ್ಲಕ್ಷಿಸಿದ್ದಾನೆ. ಪ್ರಕೃತಿಯಲ್ಲಿ ಮಾನವ ವಿಕೃತಿಯನ್ನು ಮೆರೆಯುತ್ತಿದ್ದಾನೆ.




ಪರಿಸರ ಅಸಮತೋಲನದಿಂದ ಏನಾಗುತ್ತದೆ ? ನಿಸರ್ಗದ ನಾಶವಾದರೆ ಉಂಟಾಗುವ ಸಮಸ್ಯೆಗಳೇನು ? ಈ ಎಲ್ಲಾ ವಿಚಾರಗಳನ್ನು ಮನನ ಮಾಡಿಕೊಡುವ ಹೆಸರಾಂತ ಬರಹಗಾರ ನಾ. ಡಿಸೋಜಾ ಅವರ "ಹಕ್ಕಿಗೊಂದು ಗೂಡು ಕೊಡಿ" ಕೃತಿಯ ರಂಗರೂಪವೇ ಹಕ್ಕೀ ಕಥೆ ! ಇದು ಶಿವಮೊಗ್ಗ ರಂಗಾಯಣದ ವಿಶೇಷ ಪ್ರಸ್ತುತಿ.

ಒಂದು ಗಂಡು ಹಕ್ಕಿ, ಮತ್ತೊಂದು ಹೆಣ್ಣು ಹಕ್ಕಿ. ಕಾಡಿನೊಳಗೆ ಈ ಹಕ್ಕಿ ದಂಪತಿ ನೆಮ್ಮದಿಯಿಂದ ವಾಸಿಸುತ್ತಿರುತ್ತವೆ. ಹೆಣ್ಣು ಹಕ್ಕಿ ತುಂಬು ಗರ್ಭಿಣಿಯಾದಾಗ ಸಂತಸದಿಂದ ನಲಿಯುತ್ತದೆ. ಓಹ್ ! ತಾನು ಮೂರು ಮೊಟ್ಟೆ ಇಟ್ಟಾಗಲಂತೂ ಆ ತಾಯಿ ಹಕ್ಕಿಯ ಸಂತಸಕ್ಕೆ ಪಾರವೇ ಇಲ್ಲ.

ಮೊಟ್ಟೆಗೆ ಶಾಖ ಕೊಡುವ ತಾಯಿ ಹಕ್ಕಿಗೆ ಕೆಂಪು ಮಕರಂದದ ನೆನಪಾಗುತ್ತದೆ. ಮಕರಂದವನ್ನು ಇಷ್ಟಪಟ್ಟ ತನ್ನ ಮಡದಿಯ ಆಸೆಯನ್ನು ಈಡೇರಿಸಲು ಮುಂದಾದ ಗಂಡು ಹಕ್ಕಿ, ಮೊಟ್ಟೆಗಳನ್ನು ಕಾಯುವ ಜವಾಬ್ದಾರಿ ತನಗಿರಲಿ ಎಂದು ತಿಳಿಸಿ, ಆ ಹೆಣ್ಣು ಹಕ್ಕಿಗೆ ಮಕರಂದ ಸವಿಯಲು ಮಕರಂದ ವನಕ್ಕೆ ತೆರಳಲು ಅನುವುಮಾಡಿಕೊಡುತ್ತದೆ. ಅದೇಕೋ ಏನೋ ? ಮಡದಿಗೆ ಮಾತು ಕೊಟ್ಟದ್ದನ್ನು ಮರೆತು ವಿಹಾರಾರ್ಥ ಗೂಡಿನಿಂದ ಹೊರ ಹೋಗುತ್ತದೆ.

ಛೇ ! ತಾಯಿ ಹಕ್ಕಿ ಗೂಡಿಗೆ ಮರಳುವ ವೇಳೆಗೆ ಒಂದು ಮೊಟ್ಟೆ ಗಿಡುಗನ ಪಾಲಾಗಿ ಹೋಗಿದೆ. ಗಂಡು ಹಕ್ಕಿಯ ಬೇಜವಾಬ್ದಾರಿತನಕ್ಕೆ ಹಿಡಿ ಶಾಪ ಹಾಕುವ ಆ ತಾಯಿ ಹಕ್ಕಿಯ ತೊಳಲಾಟವನ್ನು ನೋಡಲಾಗದು.

ಈ ಜಗತ್ತಿನಲ್ಲಿ ಒಂದು ಬಲಿಷ್ಠ ಪ್ರಾಣಿ ಇನ್ನೊಂದು ಮೃದು ಪ್ರಾಣಿಯನ್ನು ತಿಂದು ಬದುಕುತ್ತದೆ. ಒಂದು ದೊಡ್ಡ ಹಕ್ಕಿಯು ಇನ್ನೊಂದು ಸಣ್ಣ ಹಕ್ಕಿಯನ್ನು ತಿಂದು ಬದುಕುತ್ತದೆ. ಒಂದು ಸಣ್ಣ ಹಕ್ಕಿಯು ಹುಳುಗಳನ್ನು ಹಾಗೂ ಕ್ರಿಮಿ–ಕೀಟಗಳನ್ನು ತಿಂದು ಬದುಕುತ್ತದೆ. ಇದು ನೈಸರ್ಗಿಕ ನ್ಯಾಯ ಎಂದು ಹಕ್ಕಿ ದಂಪತಿ ಸಮಾಧಾನ ಪಟ್ಟುಕೊಂಡು ಉಳಿದೆರಡು ಮೊಟ್ಟೆಗಳನ್ನು ಎಚ್ಚರಿಕೆಯಿಂದ ಸಂರಕ್ಷಿಸಲು ಮುಂದಾಗುತ್ತವೆ.

ಮೊಟ್ಟೆಗಳು ಒಡೆದು ಎರಡು ಸಣ್ಣ ಹಕ್ಕಿಗಳು ಹೊರ ಬಂದಾಗ ಆ ಹಕ್ಕಿ



Download From : www.kpscvaani.com







ದಂಪತಿಯ ಬಾಳಲ್ಲಿ ಮತ್ತೆ ಸಂತಸದ ಚಿಗುರೊಡೆಯುತ್ತದೆ. ಮರಿ ಹಕ್ಕಿಗಳಲ್ಲಿ ಒಂದು ಗಂಡು ಮತ್ತೊಂದು ಹೆಣ್ಣು. ಗಂಡು ಹಕ್ಕಿ ತುಂಟತನದ ಜೊತೆಗೆ ಸಾಹಸೀ ಕೂಡಾ. ಮಕರಂದ ಹೀರಲು ತಂದೆ–ತಾಯಿ ಹೊರ ಹೋದಾಗ ಅಪ್ಪ–ಅಮ್ಮನ ಮಾತು ಕೇಳದೆ ತಾನೂ ಹೊರ ಹೋಗಿ ಗಿಡುಗನಿಗೆ ಬಲಿಯಾಗುತ್ತದೆ. ಹಕ್ಕೀ ದಂಪತಿಗಳ ಬಾಳಲ್ಲಿ ಮತ್ತೆ ಶೋಕ ಆವರಿಸುತ್ತದೆ. ಈ ಶೋಕದಲ್ಲಿ ಪುಟ್ಟ ಹೆಣ್ಣು ಹಕ್ಕಿಯೂ ಭಾಗೀ.

ಅರಣ್ಯಕ್ಕೆ ಮಾನವ ಪ್ರವೇಶಿಸುತ್ತಾನೆ. ಆತನ ಭೇಟಿ ಮತ್ತು ಬೇಟೆಗೆ ಹಕ್ಕಿ ಕುಟುಂಬಕ್ಕೆ ಕಂಟಕವಾಗುತ್ತದೆ. ಆತನ ಬಂದೂಕಿನಿಂದ ಹೊರ ಬಂದ ಗುಂಡು ತಗುಲಿ ಗಂಡು ಹಕ್ಕಿ ಕೊನೆಯುಸಿರೆಳೆಯುತ್ತದೆ.

ತಾಯಿ ಹಕ್ಕಿ ಮತ್ತು ಮಗಳು ಹಕ್ಕಿಗೆ ಬದುಕು ಬರ್ಬರ ಜೀವನ ನಶ್ವರ ಎಂದೆನಿಸುತ್ತದೆ. ಸುರಕ್ಷಿತ ಸ್ಥಳಕ್ಕೆ ತೆರಳಬೇಕು ಎನ್ನುವಷ್ಟರಲ್ಲಿ ಜೆ ಸಿ ಬಿ ಮತ್ತು ಬುಲ್ಡೋಜರ್‌ಗಳ ಸದ್ದು ಮೊಳಗುವುದರೊಂದಿಗೆ ಅರಣ್ಯದಲ್ಲಿ ಅಭಿವೃದ್ಧಿಯ ಚಟುವಟಿಕೆಗಳು ಆರಂಭವಾಗುತ್ತವೆ. ಮರಗಳಿಗೆ ಕೊಡಲಿ ಪೆಟ್ಟು ಬೀಳುತ್ತದೆ. ಅರಣ್ಯದಲ್ಲೂ ಪರಿಸರ ಮಾಲಿನ್ಯ ಉಂಟಾಗಿ ಹೆಣ್ಣು ಹಕ್ಕಿ ಸಾವನ್ನಪ್ಪುತ್ತದೆ.

ಪಾಪ ಹೆಣ್ಣು ಮರಿ ಹಕ್ಕಿಗೆ ದಿಕ್ಕೇ ತೋಚದಾಗುತ್ತದೆ. ಪರಿಸರ ಅಸಮತೋಲನದ ಹಿನ್ನೆಲೆಯಲ್ಲಿ ಪ್ರವಾಹ ಎದುರಾಗುತ್ತದೆ. ಏಕಾಂಗಿಯಾದ ಹೆಣ್ಣು ಮರಿ ಹಕ್ಕಿಗೆ ತಂದೆ–ತಾಯಿ ಬಂಧು–ಬಳಗವನ್ನು ಕಳೆದು ಕೊಂಡ ಗಂಡು ಹಕ್ಕಿಯೊಂದು ಸಂಗಾತಿಯಾಗುತ್ತದೆ. ಈ ಯುವ ಜೋಡಿ ಹಕ್ಕಿಗಳು ಕಾಡು ತೊರೆದು ನಾಡನ್ನು ಪ್ರವೇಶಿಸುತ್ತವೆ. ವೃಕ್ಷ ಸಂತತಿಯೇ ಇಲ್ಲದ ನಗರದಲ್ಲಿ ಹಕ್ಕಿಗಳಿಗೆ ಗೂಡು ಎಲ್ಲಿ ?





Download From : www.kpscvaani.com





ಹೌದು ! ಈ ಜೋಡಿ ಹಕ್ಕಿಗಳು ಮೊಬೈಲ್ ಟವರ್‌ನ ತುತ್ತ ತುದಿಯಲ್ಲಿ ಗೂಡು ಕಟ್ಟಿಕೊಂಡು ಜೀವಿಸಲು ಪ್ರಾರಂಭಿಸುತ್ತವೆ. ಆದರೆ, ಟವರ್‌ನ ದುರಸ್ತಿಗಾಗಿ ಬರುವ ಮಾನವ ಅಲ್ಲಿರುವ ಗೂಡನ್ನೂ ಕಿತ್ತು ಹಾಕುತ್ತಾನೆ. ಹಾಗಾದರೆ, ಹಕ್ಕಿಗಳಿಗೆ ಬದುಕುವ ಹಕ್ಕು ಇಲ್ಲವೇ ? ಎಂಬ ಪ್ರಶ್ನೆಯನ್ನು ಹೆಣ್ಣು ಹಕ್ಕಿ ಪ್ರೇಕ್ಷಕನ ಎದುರು ಇಡುತ್ತದೆ.

ನಾಡು ವಿಸ್ತಾರಗೊಂಡು ಕಾಡು ಕ್ಷೀಣವಾದುದರ ಪರಿಣಾಮ ಹುಲಿಯೊಂದು ನಗರವನ್ನು ಪ್ರವೇಶಿಸುತ್ತದೆ. ತನ್ನನ್ನು ಬದುಕಲು ಬಿಡು ಎನ್ನುವ ಮಾನವನಿಗೆ, ನೀನು ನಮ್ಮನ್ನು ಬದುಕಲು ಬಿಟ್ಟೆಯಾ ? ಎಂದು ಹುಲಿರಾಯ ಘರ್ಜಿಸುತ್ತಾ ಪ್ರಶ್ನಿಸುತ್ತಾನೆ. ಇದು ಹಕ್ಕೀ ಕಥೆಯ ಸಾರಾಂಶ.

## ವಿಶಿಷ್ಠ ಪ್ರಯೋಗ

ನಮ್ಮ ಕನ್ನಡ ರಂಗಭೂಮಿಯಲ್ಲಿ ಮಾತ್ರವಲ್ಲ, ಇಡೀ ಭಾರತೀಯ ರಂಗಭೂಮಿಯಲ್ಲೇ ಹಕ್ಕೀ ಕಥೆ ಒಂದು ವಿಶೇಷ ಮತ್ತು ವಿಭಿನ್ನ ರಂಗ ಪ್ರಯೋಗ ಎನಿಸಿದೆ. ನಾಲ್ಕು ಮಹಿಳಾ ಹಾಗೂ ಎಂಟು ಪುರುಷರೂ ಒಳಗೊಂಡಂತೆ ಹನ್ನೆರಡು ಕಲಾವಿದರು ತಮ್ಮ ಪ್ರತಿಭೆಯ ಧಾರೆ ಎರೆದು ಮನೋಜ್ಞ ಅಭಿನಯ ನೀಡಿದ್ದಾರೆ. ಹಲವೆಡೆಗಳಲ್ಲಿ ನಾಟಕವನ್ನು ವೀಕ್ಷಿಸುವಾಗ ಮನ ಮತ್ತು ಹೃದಯ ಮಿಡಿಯುತ್ತದೆ. ಪ್ರೇಕ್ಷಕರ ಕಣ್ಣಾಲೆಗಳಲ್ಲಿ ನೀರು ತುಂಬಿಕೊಳ್ಳುತ್ತವೆ.

ಹೆಸರಾಂತ ರಂಗ ಕರ್ಮಿ ಶ್ರವಣ್ ಅವರು ಪ್ರಪ್ರಥಮ ಬಾರಿಗೆ ಜಪಾನೀ ಶೈಲಿಯ ಬುನ್‌ರಾಕೋ ಬೊಂಬೆಯಾಟದ ಪ್ರದರ್ಶನವನ್ನು ರಂಗ ವೇದಿಕೆಯ ಮೇಲೆ ತಂದಿದ್ದಾರೆ. ಈ ಹೊಸ ಪ್ರಯೋಗಕ್ಕೆ ರಂಗ ನಿರ್ದೇಶಕ ಗಣೇಶ್ ಮಂದಾರ್ತಿ ಅವರು ನಾಟಕವನ್ನು ನಿರ್ದೇಶಿಸಿ ಶ್ರೇಷ್ಠ ನಿರ್ದೇಶಕರಾಗಿ ಹೊರ ಹೊಮ್ಮಿದ್ದಾರೆ.

ರಂಗ ವೇದಿಕೆಯಲ್ಲಿ ಹಕ್ಕಿಗಳ ಕಲರವ, ಚೀರಾಟ ದೃಶ್ಯಕಾವ್ಯದಂತೆ ಅತ್ಯಂತ ಸೊಗಸಾಗಿ ಮೂಡಿಬಂದಿದೆ. ಈ ಪ್ರಸ್ತುತಿ ಭಾರತೀಯ ರಂಗಭೂಮಿಗೆ ವಿಶಿಷ್ಠ ಕೊಡುಗೆಯಾಗಲಿದೆ ಎಂದು ಶಿವಮೊಗ್ಗ ರಂಗಾಯಣದ ನಿರ್ದೇಶಕ ಸಂದೇಶ್ ಜವಳಿ ಅವರು ಹೆಮ್ಮೆಯಿಂದ ಹೇಳುತ್ತಾರೆ. ಕನ್ನಡ ಮತ್ತು ಸಂಸ್ಕೃತಿ ಹಾಗೂ ಅರಣ್ಯ ಖಾತೆಗಳಿಗೆ ಒಬ್ಬರೇ ಸಚಿವರು ಇರುವುದರಿಂದ ನಾಟಕದ ಕಥಾ ವಸ್ತು ಮತ್ತಷ್ಟು ಅರ್ಥಪೂರ್ಣ ಎಂಬುದು ಸಂದೇಶ್ ಜವಳಿ ಅವರ ಸ್ಪಷ್ಟ ಅಭಿಪ್ರಾಯ.

ಈ ನಾಟಕವನ್ನು ನಾಡಿನೆಲ್ಲೆಡೆ ಕೊಂಡೊಯ್ಯಬೇಕೆಂಬುದು ಶಿವಮೊಗ್ಗ ರಂಗಾಯಣದ ಆಡಳಿತಾಧಿಕಾರಿ ಶಫಿ ಸಾದುದ್ದೀನ್ ಅವರ ಅಭಿಲಾಷೆ ಮತ್ತು ಇಚ್ಛೆ..



Download From : www.kpscvaani.com



ಸಿಲಿಕಾನ್ ಸಿಟಿ ಬೆಂಗಳೂರು ನಗರವನ್ನು ಅಭಿವೃದ್ಧಿ ಮಾಡುವುದು ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಲಾಷೆಯಾಗಿದ್ದು, ಸ್ಮಾರ್ಟ್ ಸಿಟಿ ಯೋಜನೆಯ ಮೂಲಕ ಅದನ್ನು ಸಾಕಾರಗೊಳಿಸಲಾಗುತ್ತಿದೆ.

# ಮುಖ್ಯಮಂತ್ರಿಗಳಿಂದ ಸ್ಮಾರ್ಟ್ ಸಿಟಿ ಯೋಜನೆ ಪರಿಶೀಲನೆ





ಒಂದು ನಗರ, ಒಂದು ಪರಿವರ್ತನೆ (ಒನ್ ಸಿಟಿ, ಒನ್ ಇಂಪ್ಯಾಕ್ಟ್) ಎಂಬ ಪರಿಕಲ್ಪನೆಯಡಿ ದೇಶದ ಪ್ರಮುಖ ನಗರಗಳನ್ನು ಅಭಿವೃದ್ಧಿ ಮಾಡಲು ಕೇಂದ್ರ ಸರ್ಕಾರವು ನಿರ್ಧಸಿದೆ. ಹಾಗಾಗಿ ಮೊದಲ ಹಂತದಲ್ಲಿ ಸ್ಮಾರ್ಟ್ ಸಿಟಿ ಯೋಜನೆಗೆ ಕರ್ನಾಟಕ ರಾಜ್ಯದಿಂದ ಏಳು ನಗರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅದರಲ್ಲಿ ರಾಜ್ಯದ ರಾಜಧಾನಿ ಬೆಂಗಳೂರು ನಗರ ಕೂಡ ಒಂದು.

ಹಾಗಾಗಿ ಬೆಂಗಳೂರು ನಗರವನ್ನು ಮತ್ತಷ್ಟು ಸುಂದರಗೊಳಿಸುವ ಜೊತೆಗೆ ನಾಗರಿಕರಿಗೆ ಮೂಲಸೌಕರ್ಯ ದೊರಕಿಸುವ ನಿಟ್ಟಿನಲ್ಲಿ 1939.04 ಕೋಟಿ ರೂ ವೆಚ್ಚದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ 43 ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ. ಈ 43 ಕಾಮಗಾರಿಗಳಲ್ಲಿ ಈ ವರೆಗೆ 4 ಕಾಮಗಾರಿಗಳು ಪೂರ್ಣಗೊಂಡಿದ್ದು, 29 ಕಾಮಗಾರಿಗಳು ಪ್ರಗತಿಯಲ್ಲಿದ್ದು, 4 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ. ಅಲ್ಲದೆ 2 ಕನ್ವರ್ಜೆನ್ಸ್ ಹಂತದ ಯೋಜನೆಗಳು ಹಾಗೂ 4 ಪಿಪಿಪಿ ಯೋಜನೆಗಳನ್ನು ಈ ಕಾಮಗಾರಿಯಡಿ ಹಮ್ಮಿಕೊಳ್ಳಲಾಗಿದೆ.

ಈ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲನೆ ಮಾಡಲು ಜನವರಿ 30 ರಂದು ಖುದ್ದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ



Download From : www.kpscvaani.com






ಸ್ಮಾರ್ಟ್ ಸಿಟಿ ಯೋಜನೆಯಲ್ಲಿ
ಸ್ವಚ್ಛತೆಗೆ 28%,
ಆರ್ಥಿಕತೆಗೆ 24%,
ಪರಿಸರಕ್ಕೆ 23%,
ಸರ್ವರನ್ನೂ ಒಳಗೊಳ್ಳುವಿಕೆಗೆ 23%
ಅಂತರ್ಜಲಕ್ಕೆ 2%
ಆದ್ಯತೆ ನೀಡಲಾಗುತ್ತಿದೆ.

ಅವರೇ ಕಾಮಗಾರಿ ಪ್ರಗತಿಯಲ್ಲಿರುವ ರೇಸ್ ಕೋರ್ಸ್ ರಸ್ತೆ, ರಾಜರಾಮ್ ಮೋಹನ್ ರಾಯ್ ರಸ್ತೆ, ಹೇಯ್ಸ್ ರಸ್ತೆ, ಹುಡ್ ಸ್ಟ್ರೀಟ್, ಟಾಟಾ ಲೇನ್, ಕ್ಯಾಪಿಟಲ್ ಹೋಟೆಲ್, ರಾಜಭವನ ಜಂಕ್ಷನ್ ಮತ್ತು ಪ್ಲಾನಿಟೇರಿಯಂ ರಸ್ತೆಗಳಿಗೆ ಭೇಟಿ ನೀಡಿದರು.

ಈ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ರಸ್ತೆ ಅಭಿವೃದ್ಧಿ, ಕೋವಿಡ್ ಆಸ್ಪತ್ರೆಗಳಿಗೆ ನೆರವು, ಐಟಿ–ಯೋಜನೆಗಳು, ಕಟ್ಟಡ ನಿರ್ಮಾಣ ಮತ್ತು ಇತರ ಕಾಮಗಾರಿಗಳು ಸೇರಿವೆ.

ಕಾಮಗಾರಿ ಪರಿಶೀಲನೆ ವೇಳೆಯಲ್ಲಿ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ತ್ವರಿತವಾಗಿ ಪೂರ್ಣಗೊಳಿಸುವಂತೆ ಹಾಗೂ ಗುಣಮಟ್ಟದ ಕಾಮಗಾರಿಯನ್ನು ಖಾತರಿಪಡಿಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವಂತೆ ಸೂಚನೆ ನೀಡಿದರು.

ಈ ಯೋಜನೆಯಡಿ ನಗರದ ಹೃದಯ ಭಾಗದಲ್ಲಿರುವ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು 37 ರಸ್ತೆಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳಲ್ಲಿ ಸುಸ್ಥಿತಿಯಲ್ಲಿರುವ ಪಾದಚಾರಿ ಮಾರ್ಗಗಳನ್ನು ಹಾಗೆಯೇ ಉಳಿಸಿಕೊಂಡು ರಸ್ತೆ ಅಭಿವೃದ್ಧಿ ಪಡಿಸುವ ಮೂಲಕ ಹಣವನ್ನು ಪೋಲು ಮಾಡದಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿಗಳು ಕಾಮಗಾರಿ ಪರಿಶೀಲನೆ ಮಾಡುತಿದ್ದ ಸಂದರ್ಭದಲ್ಲಿ ಆರ್‌ಸಿ ಕಾಲೇಜಿನ ವಿದ್ಯಾರ್ಥಿಗಳು ರಸ್ತೆಯು ತುಂಬಾ ಅಗಲವಾಗಿರುವುದರಿಂದ ರಸ್ತೆ ದಾಟವುದು ಅಪಾಯಕಾರಿಯಾಗಿದೆ ಎಂದು ಮುಖ್ಯಮಂತ್ರಿಯವರಿಗೆ ತಿಳಿಸಿದರು. ವಿದ್ಯಾರ್ಥಿಗಳ ಮನವಿಯನ್ನು ಆಲಿಸಿದ ಕೂಡಲೇ ಮುಖ್ಯಮಂತ್ರಿಗಳು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಬಸವೇಶ್ವರ ವೃತ್ತದಲ್ಲಿ ಸ್ಕೈವಾಕ್ ನಿರ್ಮಿಸುವ ಕುರಿತು ಪರಿಶೀಲನೆ ನಡೆಸುವಂತೆ ತಿಳಿಸಿದ್ದಾರೆ.

ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಾಣ ಮಾಡಲಾಗಿರುವ ಪಾದಚಾರಿ ಮಾರ್ಗ ಮತ್ತು ಸೈಕಲ್ ಪಥಗಳಲ್ಲಿ ಸ್ವತಃ ನಡೆದಾಡಿ ಗುಣಮಟ್ಟವನ್ನು ಪರಿಶೀಲಿಸಿದ ಮುಖ್ಯಮಂತ್ರಿಗಳು ಕಾಮಗಾರಿಯ ಗುಣಮಟ್ಟದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದಾರೆ.

ಸ್ಮಾರ್ಟ್ ಸಿಟಿ ಯೋಜನೆಯು ಅತ್ಯಂತ ಚುರುಕಾಗಿ ಸಾಗಿರುವುದನ್ನು ನೋಡಿದರೆ ಯೋಜನೆಯು 2022 ರ ಮಾರ್ಚ್ ವೇಳೆ ಒಳಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಮುಖ್ಯಮಂತ್ರಿಗಳು ಮುಂದಿನ ಎರಡು ಮೂರು ತಿಂಗಳ ನಂತರ ಮತ್ತೆ ಕಾಮಗಾರಿಯ ಪ್ರಗತಿಯನ್ನು ವೀಕ್ಷಣೆ ಮಾಡುವುದಾಗಿ ತಿಳಿಸಿದ್ದಾರೆ.

ಒಟ್ಟಿನಲ್ಲಿ ಸಾರ್ವಜನಿಕರಿಗೆ ಮೂಲ ಸೌಕರ್ಯಗಳನ್ನು ಒದಗಿಸಿ, ಅವರಿಗೆ ಯೋಗ್ಯವಾದ ಜೀವನಮಟ್ಟವನ್ನು ನೀಡಿ ಸ್ವಚ್ಛ ಮತ್ತು ಸುಸ್ಥಿತ ಪರಿಸರ ಮತ್ತು ಸ್ಮಾರ್ಟ್ ಪರಿಹಾರಗಳ ಮೂಲಕ ನಗರದ ಜನಜೀವನವನ್ನು ಉತ್ತೇಜಿಸುವುದು ಸ್ಮಾರ್ಟ್ ಸಿಟಿಯ ಉದ್ದೇಶವಾಗಿದೆ.



Download From : www.kpscvaani.com




# ವಾರ್ತಾ ಸೌಧಕ್ಕೆ ಭೇಟಿ ನೀಡಿದ ಸಚಿವರು

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಖಾತೆಯನ್ನು ವಹಿಸಿಕೊಂಡ ನಂತರ ಪ್ರಥಮ ಬಾರಿಗೆ ಸಿ.ಸಿ. ಪಾಟೀಲ್ ಅವರು ಜನವರಿ ೩೦ ರಂದು ವಾರ್ತಾ ಸೌಧಕ್ಕೆ ಭೇಟಿ ನೀಡಿ ಇಲಾಖೆಯ ಕಾರ್ಯಕ್ರಮಗಳ ಕುರಿತು ಪರಿಶೀಲನೆ ನಡೆಸಿದರು.**

ನರಗುಂದ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿರುವ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ ಅವರು ಬಿ.ಎಸ್. ಯಡಿಯೂರಪ್ಪ ಅವರ ಸಚಿವ ಸಂಪುಟದಲ್ಲಿ ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿ ಕಾರ್ಯನಿರ್ವಹಿಸುತಿದ್ದರು. ಆದರೆ ಇತ್ತೀಚೆಗೆ ಸಚಿವ ಸಂಪುಟ ವಿಸ್ತರಣೆಯಾದ ಹಿನ್ನೆಲೆಯಲ್ಲಿ ಅವರಿಗೆ ಸರ್ಕಾರವು ಸಣ್ಣ ಕೈಗಾರಿಕೆ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖಾ ಖಾತೆಯನ್ನು ಹಂಚಿಕೆ ಮಾಡಿತು. ಸಾಮಾನ್ಯವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಖಾತೆಯನ್ನು ಮುಖ್ಯಮಂತ್ರಿಗಳು ತಮ್ಮ ಬಳಿಯೇ ಉಳಿಸಿಕೊಳ್ಳುತ್ತಿದ್ದರು. ಆದರೆ ಬಹಳ ವರ್ಷಗಳ ನಂತರ ವಾರ್ತಾ ಇಲಾಖೆಯ ಜವಾಬ್ದಾರಿಯನ್ನು ಸಚಿವರೊಬ್ಬರಿಗೆ ಹಂಚಿಕೆ ಮಾಡಲಾಗಿದೆ.

ಸಚಿವರಾದ ನಂತರ ಪ್ರಥಮ ಬಾರಿಗೆ ಇಲಾಖೆಗೆ ಆಗಮಿಸಿದ ಸಚಿವರನ್ನು ಇಲಾಖೆಯ ಆಯುಕ್ತರಾದ ಡಾ. ಪಿ. ಎಸ್. ಹರ್ಷ ಅವರು ಆತ್ಮೀಯವಾಗಿ ಬರಮಾಡಿಕೊಂಡು, ಇಲಾಖೆಯ ಕಾರ್ಯವಿಧಾನಗಳನ್ನು ಸಚಿವರಿಗೆ ಸುಧೀರ್ಘವಾಗಿ ವಿವರಿಸಿದರು. ಅತ್ಯಂತ ಉತ್ಸಾಹದಿಂದ ಇಲಾಖೆಯ ಕಾರ್ಯವಿಧಾನಗಳನ್ನು ಆಲಿಸಿದ ನಂತರ ಸಚಿವರು ಮಾತನಾಡಿ ವಾರ್ತಾ ಮತ್ತು



Download From : www.kpscvaani.com







**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಸಂಪರ್ಕ ಏರ್ಪಡಿಸುವ ಇಲಾಖೆಯಾಗಿದೆ. ಸರ್ಕಾರವು ಹಲವಾರು ಸಂಕಷ್ಟಗಳ ನಡುವೆಯೂ ಅನೇಕ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಹಾಗಾಗಿ ಈವರೆಗೆ ಸರ್ಕಾರ ಸಾಧಿಸಿರುವ ಸಾಧನೆ ಮತ್ತು ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸುವ ಕೆಲಸವನ್ನು ಇಲಾಖಾ ಅಧಿಕಾರಿಗಳು ಪರಿಣಾಮಕಾರಿಯಾಗಿ ನಿಭಾಯಿಸಬೇಕು.**

ಸಿ.ಸಿ.ಪಾಟೀಲ್
ಸಣ್ಣ ಕೈಗಾರಿಕೆ ಮತ್ತು ವಾರ್ತಾ ಸಚಿವರು

ಸಾರ್ವಜನಿಕ ಸಂಪರ್ಕ ಇಲಾಖೆಯು ಉಳಿದ ಇಲಾಖೆಗಳಿಂದ ಅತ್ಯಂತ ಪ್ರಮುಖವಾದ ಇಲಾಖೆ. ಸರ್ಕಾರ ಸಿದ್ಧಪಡಿಸುವ ಜನಪರ ಯೋಜನೆಗಳನ್ನು ಜನರ ಬಳಿಗೆ ಕೊಂಡೊಯ್ಯಲು ಸಾಧ್ಯವಿರುವ ಇಲಾಖೆ ಇದಾಗಿದೆ.

ಸರ್ಕಾರ ರಚನೆಯಾದಾಗಿನಿಂದ ಪ್ರವಾಹ, ಸಾಂಕ್ರಾಮಿಕ ರೋಗ ಇವೇ ಮುಂತಾದ ಒಂದಲ್ಲ ಒಂದು ಸಂಕಷ್ಟಗಳು ಎದುರಾಗುತ್ತಲೇ ಇದೆ. ಇಂತಹ ಸಂಕಷ್ಟದ ನಡುವೆಯೂ ನಮ್ಮ ಸರ್ಕಾರವು ಜನಪರ ಯೋಜನೆಗಳನ್ನು ನೀಡುತ್ತಿದೆ. ಹಾಗಾಗಿ ಸರ್ಕಾರ ಹಮ್ಮಿಕೊಂಡಿರುವ ಜನಪರ ಯೋಜನೆಗಳನ್ನು ಸಾರ್ವಜನಿಕರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಪ್ರಚಾರ ಕಾರ್ಯವನ್ನು ಕೈಗೊಳ್ಳುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಬಲೀಕರಣಕ್ಕೆ ಪೂರಕವಾದ ಎಲ್ಲ ಕ್ರಮಗಳಿಗೆ ಸಂಪೂರ್ಣ ಸಹಕಾರ ನೀಡಲಾಗುವುದಲ್ಲದೆ ಸರ್ಕಾರದ ಸಾಧನೆಗಳು, ಕಾರ್ಯವೈಖರಿಯನ್ನು ಜನಮಾನಸಕ್ಕೆ ತಲುಪಿಸಲು ಇನ್ನಷ್ಟು ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸಬೇಕೆಂದರು.

ಅರ್ಹರಾದವರಿಗೆ ನ್ಯಾಯೋಚಿತವಾಗಿ ಇರುವ ಸೌಲಭ್ಯಗಳು ತಲುಪಬೇಕಾದರೆ ಜನರಿಗೆ ಸರ್ಕಾರದ ಸೌಲಭ್ಯಗಳ ಕುರಿತು ಮಾಹಿತಿ ದೊರೆಯಬೇಕಾಗುತ್ತದೆ. ಆ ಮಾಹಿತಿಯನ್ನು ಜನರಿಗೆ ನೀಡುವುದು ಇಲಾಖೆಯ ಪ್ರಮುಖ ಕೆಲಸವಾಗಿದೆ. ಹಾಗಾಗಿ ಇನ್ನು ಮುಂದೆ ರಾಜ್ಯದ ಎಲ್ಲಾ ಹೆದ್ದಾರಿ ಫಲಕಗಳಲ್ಲಿ ಸರ್ಕಾರದ ಸಾಧನೆಗಳು ಮತ್ತು ಯೋಜನೆಗಳನ್ನು ಪ್ರಚುರಪಡಿಸಿ ಎಂದರು. ಖಚಿತ ಸುದ್ದಿಗಳು, ತಪ್ಪು ಸುದ್ದಿಗಳಿಗೆ ಸ್ಪಷ್ಟೀಕರಣ ತುರ್ತಾಗಿ ನೀಡುವಂತಾಗಬೇಕು. ಆಗ ಸಾರ್ವಜನಿಕರು ತಪ್ಪು ಅಭಿಪ್ರಾಯ ಹೊಂದಲು ಸಾಧ್ಯವಾಗುವುದಿಲ್ಲ ಎಂದು ಸಚಿವರು ಅಭಿಪ್ರಾಯಪಟ್ಟರು.


ಕೋವಿಡ್-19 ನಿಂದಾಗಿ ಕೇಂದ್ರ ಸರ್ಕಾರದ ಮಾರ್ಗ ಸೂಚಿಯಂತೆ ವಿವಿಧ ಪ್ರಚಾರ ಮಾಧ್ಯಮಗಳಲ್ಲಿ ಕೊರೊನಾ ಕುರಿತಂತೆ ಮುನ್ನೆಚ್ಚರಿಕೆಯ ಮಾಹಿತಿಗಳಿದ್ದು, ಮುಂದಿನ ಹಣಕಾಸು ವರ್ಷದಲ್ಲಿ ಸರ್ಕಾರದ ಸಾಧನೆಗಳು ಮತ್ತು ಜನಪರ ಯೋಜನೆಗಳ ಪ್ರಚಾರಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು. ಹಾಗೂ ಜಿಲ್ಲಾ ಮಟ್ಟದ ಇಲಾಖೆಗಳ ಸಬಲೀಕರಣಕ್ಕೆ ಕ್ರಮಕೈಗೊಳ್ಳಲಾಗುವುದು ಎಂದು ಈ ಸಂದರ್ಭದಲ್ಲಿ ಆಯುಕ್ತರು ಸಚಿವರಿಗೆ ತಿಳಿಸಿದರು.

ಅಂದು ಸಚಿವರು ಇಲಾಖೆಗೆ ಭೇಟಿ ನೀಡಿದ ದಿನ ರಾಷ್ಟ್ರಪಿತ ಮಹಾತ್ಮಾಗಾಂಧಿ ಅವರ 73 ನೇ ಪುಣ್ಯ ಸ್ಮರಣೆಯಾದ ಹಿನ್ನೆಲೆಯಲ್ಲಿ ಇಲಾಖೆಯ ಆವರಣದಲ್ಲಿನ ಗಾಂಧಿ ಪ್ರತಿಮೆಗೆ ಸಚಿವರು ಪುಷ್ಪ ನಮನ ಸಲ್ಲಿಸಿದರು.



Download From : www.kpscvaani.com

# ಅಡಿಕೆ ರುಚಿಗೆ ಮಾತ್ರವಲ್ಲ! ಆರೋಗ್ಯಕ್ಕೂ ಒಳ್ಳೆಯದು



**ಭಾರತದ ಅಸ್ಸಾಮಿನಿಂದ ಅಮೆರಿಕಾದವರೆಗೆ ಮಂತ್ರ, ತಂತ್ರ, ಪೂಜೆ ಪುನಸ್ಕಾರದಿಂದ ತೊಡಗಿ ದಕ್ಷಿಣೆಯವರೆಗೆ ಅಡಿಕೆ ನಿರಂತರ ಕೈಯಲ್ಲಿರಲೇಬೇಕು ಎಂಬುದು ಖಂಡಿತಾ. ದೈವೀ ಪ್ರಸಿದ್ಧಿಯ ಜೊತೆಗೆ ಅದರಿಂದ ಕ್ಯಾನ್ಸರ್‌ನಂತಹ ಖಾಯಿಲೆ ಬರಬಹುದೆಂಬ ಅಪಪ್ರಚಾರ ಹೇಗೋ ಅಂಟಿಕೊಂಡಿದೆ. ಆದರೆ, ಇತ್ತೀಚೆಗೆ ಭಾರತೀಯ ಸಂಶೋಧಕರು ವೈಜ್ಞಾನಿಕವಾಗಿ ಸಂಶೋಧನೆ, ಪ್ರಯೋಗಗಳನ್ನು ನಡೆಸಿ ಹಿಂದೂ ದೇಶದ ಶಾಸ್ತ್ರ ನಂಬಿಕೆಗಳಲ್ಲಿ ಪ್ರಾಮುಖ್ಯವಾದ ಪ್ರಕೃತಿಯ ಕೊಡುಗೆ-ಕೈಯೊಳಗೆ ಅಡಕವಾಗಿ ಬಿಡುವ, ಎತ್ತರ ಮರದ ತುದಿಯಿಂದ ಕೊಯ್ದು ಜಾಗ್ರತೆಯಿಂದ ಕೆಳಗಿಳಿಸಲಾಗುವ ಮತ್ತು ಕಾಲಕಾಲಕ್ಕೆ ಹಸಿರು, ಕೆಂಪು ಮತ್ತು ಕರಿಬಣ್ಣಗಳನ್ನೆಲ್ಲಾ ಒಂದೊಂದಾಗಿ ಮೈಗೂಡಿಸಿ ತೋರುವ ಈ ಫಲದ ಮಹಿಮೆ ಇನ್ನೂ ಪ್ರಪಂಚಕ್ಕೆ ನೇರ್ಪಿನಲ್ಲಿ ಗೊತ್ತಾಗಿಲ್ಲ ಎನಿಸಿಬಿಡುತ್ತದೆ.**

ಈಶ್ವರ ದೈತೋಟ

ನಮ್ಮ ಕರ್ನಾಟಕಕ್ಕೊಂದು ಹೆಮ್ಮೆ ಇದೆ. ಏನೆಂದರೆ, ದೇಶದ ಅಡಿಕೆ ಬೆಳೆಗಾರಿಕೆಯಲ್ಲಿ ನಮ್ಮ ರಾಜ್ಯ ಅತಿದೊಡ್ಡ ಕೊಡುಗೆ ನೀಡುತ್ತಲಿದೆ. ಅಸ್ಸಾಮಿನಿಂದ ತೊಡಗಿ, ದಕ್ಷಿಣ ಭಾರತದ ಇತರ ರಾಜ್ಯಗಳಲ್ಲಿಯೂ ಬೆಳೆಯುತ್ತದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಜಿಲ್ಲೆಗಳ ಪ್ರಮುಖ ವಾಣಿಜ್ಯ ಬೆಳೆಯಾಗಿರುವುದಲ್ಲದೆ, ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ತುಮಕೂರು, ಚಿತ್ರದುರ್ಗ, ದಾವಣಗೆರೆಗಳಲ್ಲಿಯೂ ಅಡಿಕೆ ಫಲ ಕೊಡುತ್ತಾ ಬಂದಿದೆ. ಮೊದಲಿಗೆ ಹಸಿರು, ಬಳಿಕ ಕೆಂಪು ಹಾಗೂ ಕೊನೆಗೆ ಮಾಸಲು ಕರಿಬಣ್ಣಕ್ಕೆ ಬದಲಾಗುವ ಮೈಪೊರೆ ಇರುವ ಈ ಫಲ ದೈವೀ ಕಾರ್ಯಗಳಿಗಾಗಿ ಈಗ ಅಮೆರಿಕಾದ ದೇವಲಯಗಳಲ್ಲಿಯೂ ಗೌರವವನ್ನು ಗಳಿಸುತ್ತಿದೆ.

ಇನ್ನೊಂದು ವೈಶಿಷ್ಟ್ಯವೆಂದರೆ ಉದ್ದನೆಯ ಮರದಲ್ಲಿ ಗೊಂಚಲು ಹೂವಿನಂತೆ ಮೂಡಿ ಹಸಿರು ಕಾಯಿಯಾಗಿ, ಬಲಿತಾಗ ಕೆಂಪನೆಯ ಮೈಯೊಂದಿಗೆ ಆಕರ್ಷಿಸುವ ವಿಶೇಷ ಗುಣವೂ ಅಡಿಕೆಗೆ ಇದೆ. ಹಸಿರಾಗಿ ನೀರಿನಲ್ಲಿ ಕುದಿಸಿಕೊಂಡು ಸಿದ್ಧವಾಗುವುದಲ್ಲದೆ, ಕೆಂಪನೆಯ ಕಾಯಿ ಬಿಸಿಲಲ್ಲಿ ಒಣಗಿ ಮೈಹೊದಿಕೆಯನ್ನು ಕಳಚಿಕೊಂಡು ಗೋಲಿಯಂತೆ ಉರುಟುರಟಾಗಿ ಮಾರಾಟಕ್ಕೆ ಸಿದ್ಧಗೊಳ್ಳುತ್ತದೆ. ಈ ಫಲದ ಮೈಸಿಪ್ಪೆ ತೆಗೆಯುವುದೊಂದು ಸೂಕ್ಷ್ಮ ಕಾರ್ಮಿಕತನವಾಗಿ ಬೆಳೆದು ಬಂದಿದೆ. ಈಗ ಇದಕ್ಕೆ ಯಂತ್ರ ತಂತ್ರಜ್ಞಾನವೂ ಮೈಗೂಡಿದೆ. ಶಾಸ್ತ್ರ, ಪೂಜೆ, ಮಂಗಳ ಕಾರ್ಯಗಳಲ್ಲದೆ ರೋಗ ಪರಿಹರಿಸುವ ಮದ್ದಿನ ಗುಣವೂ ಇದಕ್ಕುಂಟು. ಮಂಗಳ ಕಾರ್ಯಗಳ ಸಂದರ್ಭದಲ್ಲಿ ಭೋಜನವಾದ ಬಳಿಕ ಸುಣ್ಣದೊಂದಿಗೆ ಎಲೆ ಅಡಿಕೆಯನ್ನು ಬಾಯಲ್ಲಿಟ್ಟು ಜಗಿಯುವ ಮಜಾವಂತೂ ಇದ್ದೇ ಇದೆ. ಜೀರ್ಣಕ್ರಿಯೆಗೆ ಇದು ಸಹಕಾರಿ ಎಂದು ಹೇಳಲಾಗುತ್ತದೆ. ಹಾಗಾಗಿಯೇ ಹಿಂದಿನ ಕಾಲದಲ್ಲಿ ಮಕ್ಕಳ ಜೀರ್ಣಕ್ರಿಯೆಗೆ ಎಲೆಅಡಿಕೆ ಸಹಕಾರಿ ಎಂದು ಬಾಣಂತಿಯರಿಗೆ ಊಟದ ನಂತರ ಎಲೆಅಡಿಕೆಯನ್ನು ನೀಡುತ್ತಿದ್ದರು.





Download From : www.kpscvaani.com





**2010ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀಹರಿ ಎಂಬುವರು ಮಾಡಿದ ಅಧ್ಯಯನ ಕೂಡಾ ಅಡಿಕೆಯನ್ನು ಸವಿದರೆ ಆರೋಗ್ಯಕ್ಕೆ ಅನುಕೂಲವೇ ಆಗುತ್ತದೆಂದು ಹೇಳಿತ್ತು. ಅವರು ಸಂಶೋಧನೆಯಿಂದ ಕಂಡುಕೊಂಡ ಅನುಭವದಂತೆ ಅಡಿಕೆ ಸೇವನೆಯಿಂದ ಆರೋಗ್ಯಕ್ಕೆ ಒಳ್ಳೆಯದಾಗುತ್ತದೆ. ಎಲ್ಲಿಯೂ ಅಡಿಕೆ ಜಗಿತದಿಂದ ಕ್ಯಾನ್ಸರ್ ಬಂದಿರುವ, ಇಲ್ಲವೇ ಕ್ಯಾನ್ಸರ್ ಬರುವ ಮುಂಚಿನ ಲಕ್ಷಣಗಳಿರುವ ಯಾವುದೇ ಪ್ರಕರಣ ಈ ಜಿಲ್ಲೆಯಲ್ಲಿ ಕಂಡು ಬಂದಿರುವುದಿಲ್ಲ ಎಂಬುದು ದಾಖಲಾಗಿದೆ.**

ಪದೇ ಪದೇ ಅಡಿಕೆ ಬೆಳೆಗಾರರನ್ನು ಕಂಗಾಲು ಗೊಳಿಸುತ್ತಿರುವುದು ಅಡಿಕೆ ಜಗಿತ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬ ಆಧಾರ ರಹಿತ ಅಪಪ್ರಚಾರ. 2018 ರಲ್ಲಿ ಇಂಡಿಯನ್ ಸೆಂಟರ್ ಆಫ್ ಅರೆಕನಟ್ ರೀಸರ್ಚ್, ಸೆಂಟ್ರಲ್ ಪ್ಲಾಂಟೇಶನ್ ರೀಸರ್ಚ್ ಸೆಂಟರ್ ಆಫ್ ಇಂಡಿಯಾ ಜೊತೆಯಲ್ಲಿ ದಿ ಅರೆಕನಟ್ ರೀಸರ್ಚ್ ಆಂಡ್ ಡೆವಲ್ಪಮೆಂಟ್ ಫೌಂಡೇಶನ್ ಅಡಿಕೆ ಪ್ರಿಯರ ಮೇಲೆ ನಡೆಸಿದ ಪ್ರಯೋಗ ಸಂಶೋಧನೆಗಳಿಂದ ಅಡಿಕೆ ಆರೋಗ್ಯಕ್ಕೆ ಸರ್ವಶ್ರೇಷ್ಠವೆಂದು ನಂಬಿಕೆ ತರಿಸಬಲ್ಲುದು ಎನ್ನಬಹುದು. ಆದರೆ, ಈ ಮಾಹಿತಿಯನ್ನು ಬಳಕೆದಾರರ ಮನ ಮುಟ್ಟಿಸುವಲ್ಲಿ ನಾವು ಸಫಲವಾಗಿಲ್ಲ ಎಂಬುದು ಗಮನಿಸಬೇಕಾದ ವಿಚಾರ. ಸಾಂಪ್ರದಾಯಿಕವಾಗಿ ಎಲೆಯಡಿಕೆ ಸವಿಯುವುದು ಮಾನವ ಜನಾಂಗದ ಆರೋಗ್ಯಕ್ಕೆ ಒಳ್ಳೆಯದೆಂದು ಅರಿವು ಮೂಡಿಸುವ ಪ್ರಯತ್ನಗಳೂ ನಡೆದಿವೆ.

ಅಡಿಕೆ ಬೆಳೆಗೆ ಭಾರತ ದೇಶ ಹೆಸರಾಗಿದೆ. ಜೊತೆಗೆ ಇಂಡೋನೇಷ್ಯಾ, ಚೀನಾ, ಮಯನ್ಮಾರ್, ಬಾಂಗ್ಲಾದೇಶ, ಶ್ರೀಲಂಕಾ, ಥಾಯ್ಲಾಂಡ್, ಭೂತಾನ್ ಮಲೇಷ್ಯಾ ದೇಶಗಳೂ ಅಡಿಕೆ ಬೆಳೆಯಲ್ಲಿ ತಮ್ಮನ್ನು ಗುರುತಿಸಿಕೊಂಡಿವೆ. ಜಾಗತಿಕ ಆರೋಗ್ಯ ಸಂಸ್ಥೆ ಲೆಕ್ಕಾಚಾರದಂತೆ ಸುಮಾರು 60 ಕೋಟಿ ಅಡಿಕೆ ಬೆಳೆ ಬೆಂಬಲಿಗರಿದ್ದಾರಂತೆ. ಹಾಗೆಯೇ ಎಲೆಅಡಿಕೆ ಸವಿಯುವುದು ಸಾವಿರಾರು ವರ್ಷಗಳಿಂದ ಈ ಪ್ರದೇಶದಲ್ಲಿ ನಡೆದುಕೊಂಡು ಬಂದಿರುವ ಸಂಪ್ರದಾಯ ಕೂಡಾ ಹೌದು. ಸುಣ್ಣ ಬಳಿದ ಎಲೆಯೊಂದಿಗೆ ಅಡಿಕೆ ಇಟ್ಟು ಬಾಯಿ ತುಂಬಾ ಜಗಿದು ಸವಿಯುವುದರ ಮಜಾ, ಬಳಕೆದಾರರಿಗೆ ಚೆನ್ನಾಗಿ ಗೊತ್ತು. ಅದರ ಹೆಸರೇ ವೀಳ್ಯದೆಲೆ- ಸವಿದು ಸಾಮಾಜಿಕವಾಗಿ ಸಂಭ್ರಮಿಸುವುದೆಂದು ಈ ರುಚಿಗೆ ಕಾರ್ಡಮಮ್, ಲವಂಗ, ಮೆಂಥಾಲ್, ತೆಂಗಿನತುರಿ, ಸಾಫ್ರನ್ ಇತ್ಯಾದಿ ಲವಲವಿಕೆಯ ಸೇರ್ಪಡೆಗಳೂ ಇವೆಯಂತೆ.

ಸಾಮಾಜಿಕ ಸಮಾರಂಭಗಳಲ್ಲಿ, ಮನೆಗೆ ಯಾರಾದರೂ ಅತಿಥಿ ಅಭ್ಯಾಗತರು ಬಂದಾಗ ಸಂಭ್ರಮಿಸುವುದರಲ್ಲಿ ಎಲೆಅಡಿಕೆಗೆ ಮರ್ಯಾದೆ ಪಟ್ಟವೂ ಸೇರಿದೆ. ಮಕ್ಕಳು ತಿನ್ನಬಾರದೆಂದು ಹಿರಿಯರು ಎಚ್ಚರಿಸಿದರೂ ಎಳೆಯರೂ ಸವಿಯುತ್ತಾರೆಂದು ಎಲ್ಲಾ ಮನೆಗಳ ಅಜ್ಜಮ್ಮಂದಿರುಗಳಿಗೆ ಚೆನ್ನಾಗಿ ಗೊತ್ತಿರುತ್ತದೆ.

ಇಷ್ಟೆಲ್ಲಾ ಸಕಾರಾತ್ಮಕ ಮಾಹಿತಿಗಳ ಭಂಡಾರವಿದ್ದರೂ, ಕೆಲವು ಸಂಶೋಧಕರು ಅಡಿಕೆಯಿಂದಲೇ ರೋಗಕಾಟವಿದೆ ಎಂದು ಹೇಳುತ್ತಾ ಬಂದಿರುವುದು ಆತಂಕಕಾರಿ ಸಮಾಚಾರ. ಕ್ಯಾನ್ಸರ್ ನಂತಹ ರೋಗಮಾರಿ



Download From : www.kpscvaani.com



> ಎಲೆಯೊಂದಿಗೆ ಅಡಿಕೆಯನ್ನು ಜಗಿಯುವುದರಿಂದ ಅಥವಾ ಮೆಲ್ಲುವುದರಿಂದ ಮನಷ್ಯರಿಗೆ ಏನೂ ಅನಾರೋಗ್ಯವುಂಟಾಗುವುದಿಲ್ಲ. ಬದಲಿಗೆ ಎಲೆಅಡಿಕೆ ಜೊತೆಗೆ ಸೊಗೆಸೊಪ್ಪಿನಂತಹ ಇತರೆ ವಸ್ತುಗಳನ್ನು ಸೇರಿಸಿ ಸೇವನೆ ಮಾಡಿದರೆ ಆರೋಗ್ಯಕ್ಕೆ ಹಾನಿಕಾರವಾಗುವ ಸಾಧ್ಯತೆಗಳಿರುತ್ತದೆ ಎಂದು ಅಧ್ಯಯನಗಳು ಸ್ಪಷ್ಟವಾಗಿ ಹೇಳುತ್ತವೆ.

ಇದರಿಂದಲೇ ಬರುವುದೆಂಬ ದೋಷಾರೋಪಣೆ ಮಾಡಲಾಗುತ್ತಿರುವುದು ದುರ್ದೈವ ಎಂದು ಅಡಿಕೆ ಸಂಸ್ಕೃತಿ, ಹಿನ್ನೆಲೆ ಗೊತ್ತಿರುವವರು ನೊಂದು ನುಡಿಯುತ್ತಾರೆ. ಪಾನ್ ಮಸಾಲಾ, ಗುಟ್ಕಾ ಇತ್ಯಾದಿ ಅದೇನೇನೋ ವಸ್ತುಗಳನ್ನು ಹಾಕಿ ಅದರೊಂದಿಗಿಷ್ಟು ಅಡಿಕೆಯನ್ನೂ ಬೆರೆಸಿಕೊಂಡು, ಅಡಿಕೆಯಿಂದಲೇ ಕ್ಯಾನ್ಸರ್ ಬರುತ್ತದೆಂದು ಬೆದರಿಸುವುದರಿಂದಾಗಿ ಸಾಂಪ್ರದಾಯಿಕ ಅಡಿಕೆ ಬೆಳೆಗಾರರು-ಅಡಿಕೆ ವಹಿವಾಟನ್ನು ನಂಬಿ ಬದುಕುವವರು ಹಾಗೂ ಆರೋಗ್ಯ ಪೂರ್ಣ ಬದುಕಿಗಾಗಿ ಅಡಿಕೆಯನ್ನೂ ಸೇವಿಸುವವರು ಆತಂಕಕ್ಕೊಳಗಾಗುತ್ತಲಿದ್ದಾರೆ.

**"ಅಡಿಕೆ ಬೆಳೆಗಾರಿಕೆಯನ್ನು ನಂಬಿರುವವರು ಸದಾ ಮುಂದೇನಾಗುತ್ತದಪ್ಪಾ ಎಂದು ತತ್ತರಿಸುವಂತ್ತಾಗಿದೆ ಎಂದು ನಮ್ಮ ಸಂಘಟನೆಗಳು ಆತಂಕದಲ್ಲೇ ಬದುಕುವಂತ್ತಾಗಿದೆ"**ಎನ್ನುತ್ತಾರೆ ಅಡಿಕೆ ಕೃಷಿ ಉದ್ದಿಮೆಯನ್ನು ನಂಬಿ ಬಾಳುತ್ತಿರುವ ಬೆಳೆಗಾರರು, ಮತ್ತು ಅವರ ನೆರವಿಗೆ ನಿಂತು ವ್ಯಾಪಾರ ವಹಿವಾಟು ನಡೆಸುತ್ತಲಿರುವ ಸಹಕಾರದ ಸಂಘ ಸಂಸ್ಥೆಗಳು. ಈ ಸತ್ಯ ಮೀರಿದ ವಿಕೃತ ಮಾಹಿತಿಯಿಂದಾಗಿ ಅರಿತವರು ನೊಂದು ಕೊಂಡಿದ್ದಾರೆ.

ಇದರಲ್ಲಿನ ವಸ್ತು ವಿಶೇಷ ಹಾಗೂ ಮಾಹಿತಿ ನಂಬಲರ್ಹತೆಯನ್ನು ಪರಿಶೀಲಿಸಿ, ಸಂಶೋಧಿಸಿ ಅಧ್ಯಯನ ಮಾಡಿರುವ ಅಧಿಕೃತ ಸಂಘಟನೆಗಳ ಮಾಹಿತಿಯಂತೂ ಕ್ಯಾನ್ಸರಿಗೂ ಅಡಿಕೆ ಸವಿಯುವುದಕ್ಕೂ ಯಾವುದೇ ಸಂಬಂಧ ಇಲ್ಲವೆಂದು ಸಂಶೋಧಿತ ಆಧಾರದ ಸಮೇತ ಹೇಳುತ್ತಲಿವೆ. ಅಂತಹದೊಂದು ಅಧ್ಯಯನ 2018 ರಲ್ಲಿ ನಡೆಯಿತು. ಅಧ್ಯಯನದ ಉದ್ದೇಶವಿದ್ದುದು ಅಡಿಕೆ ಸವಿಯುವುದು ಮಾನವಾರೋಗ್ಯಕ್ಕೆ ಅದೇನೇನು ಕಂಟಕವೊಡ್ಡಿದೆ ಎಂಬುದರ ಸಮಗ್ರ ಪರಿಶೀಲನೆ ನಡೆಸುವುದು. ಕೇರಳದ ಕಾಸರಗೋಡು ಮತ್ತು ದಕ್ಷಿಣಕನ್ನಡದ ಜಿಲ್ಲೆಗಳಲ್ಲಿ ಅಧ್ಯಯನ ನಡೆಯಿತು ಎಂದು ಸಂಬಂಧಪಟ್ಟವರು ಪ್ರಬಂಧಗಳಲ್ಲಿ, ಪ್ರಕಟಣೆಗಳಲ್ಲಿ ದಾಖಲಿಸಿದ್ದಾರೆ.

ಅಂತಹ ಅಧ್ಯಯನದ ಸೂಕ್ಷ್ಮ ಹೀಗಿದೆ, **"ದಿ ಸ್ಟಡಿಕ್ಲಿಯರ್ಲ್ಲಿ ಶೋನ್‌ದ್ಯಾಟ್ ಚ್ಯೂಯಿಂಗ್ ಅರೆಕನಟ್ ಆರ್ ಬೀಟಲ್ ಕ್ವಿಡ್ ವಿದೌಟ್ ಟೊಬಾಕೋ ಆರ್ ಬೆನಿಫೀಶಿಯಲ್ ಅಂಡ್ ನಾಟ್ ಹಾರ್ಮ್‌ಫುಲ್ ಏಸ್ ಫಾರ್ ಏಸ್ ದೆಯರ್ ಹೆಲ್ತ್‌ಎಫೆಕ್ಟ್ಸ್‌ಆನ್ ಹ್ಯೂಮನ್ ಬೀಯಿಂಗ್ಸ್ ಆರ್ ಕನ್ಸರ್ನ್‌ಡ್".** ಅಡಿಕೆಯಿಂದ ಅರ್ಬುದ ಉಂಟಾಗುವುದಿಲ್ಲ ಎಂಬ ಮಾಹಿತಿಯನ್ನು ಇನ್ನೂ ಹಲವು ವರದಿಗಳು ಪುಷ್ಟೀಕರಿಸುತ್ತವೆ.

2010 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀಹರಿ ಎಂಬುವರು ಮಾಡಿದ ಅಧ್ಯಯನ ಕೂಡಾ ಅಡಿಕೆಯನ್ನು ಸವಿದರೆ ಆರೋಗ್ಯಕ್ಕೆ ಅನುಕೂಲವೇ ಆಗುತ್ತದೆಂದು ಹೇಳಿತ್ತು. ಅವರು ಸಂಶೋಧನೆಯಿಂದ ಕಂಡುಕೊಂಡ ಅನುಭವದಂತೆ ಅಡಿಕೆ ಸೇವನೆಯಿಂದ ಆರೋಗ್ಯಕ್ಕೊಳ್ಳೆಯದಾಗುತ್ತದೆ. ಎಲ್ಲಿಯೂ ಅಡಿಕೆ ಜಗಿತದಿಂದಾಗಿ ಕ್ಯಾನ್ಸರ್ ಬಂದಿರುವ, ಇಲ್ಲವೇ ಕ್ಯಾನ್ಸರ್ ಬರುವ ಮುಂಚಿನ ಲಕ್ಷಣಗಳಿರುವ ಯಾವುದೇ ಪ್ರಕರಣ ಈ ಜಿಲ್ಲೆಯಲ್ಲಿ ಕಂಡು ಬಂದಿಲ್ಲವೆಂದು ಹೇಳಿರುವುದು ದಾಖಲಾಗಿದೆ.


ಬೆಂಗಳೂರಿನ ಸಂಶೋಧಕರೊಬ್ಬರ ಮತ್ತೊಂದು ಸಂಶೋಧನೆಯಲ್ಲಿ ಪಾನ್ ಚೂಯಿಂಗ್‌ನಿಂದ ಬಾಯಿ ಅರ್ಬುದ ಬರುವ ಉದಾಹರಣೆಗಳು ನಗಣ್ಯವೆಂದೇ ದಾಖಲಿಸಿದ್ದಾರೆ. ಗರ್ಭಿಣಿ ಸ್ತ್ರೀಯರಿಗೆ ಹೊಗೆಸೊಪ್ಪಿನಿಂದಾಗಿ ಯಾವುದಾದರೂ ತೊಂದರೆಯುಂಟಾಗುತ್ತದೆಯೇ ಎಂದು7685 ಮಹಿಳೆಯರಲ್ಲಿ ನಡೆಸಿದ ಅಧ್ಯಯನವೊಂದರಲ್ಲಿ ದಾಖಲಿಸಿರುವಂತೆ ಅಡಿಕೆಯನ್ನು ಸವಿಯುವುದರಿಂದ ಹುಟ್ಟುವ ಶಿಶುವಿನ ತೂಕದ ಮೇಲೆಯೂ ಯಾವುದೇ ಸಕಾರಾತ್ಮಕ ಪರಿಣಾಮ ಬೀರಿರುವುದು ಕಂಡು ಬಂದಿಲ್ಲವಂತೆ.

ಕರ್ನಾಟಕ ಮತ್ತು ಕೇರಳಗಳಲ್ಲಿನ ಸಾಂಪ್ರದಾಯಿಕವಾಗಿ ಅಡಿಕೆ ಮೆಲ್ಲುವವರ ಅಧ್ಯಯನ ಮಾಡುವಾಗ ಆಯ್ಕೆ ಮಾಡಿಕೊಂಡವರಲ್ಲಿ ಅಡಿಕೆ ಮೆಲ್ಲುವವರಲ್ಲದೆ, ಹೊಗೆಸೊಪ್ಪು ಜಗಿಯುವವರನ್ನು, ಇವರೆಡೂ ಚಟವಿಲ್ಲದವರನ್ನೂ ಪ್ರಶ್ನಿಸಲಾಗಿತ್ತು. ಅವರಲ್ಲಿ ಬಹುವಾದ ಆರೋಗ್ಯ ಏರುಪೇರುಗಳೇನೂ ಕಂಡು ಬಂದಿರಲಿಲ್ಲವಂತೆ. ಅಡಿಕೆ ಮೆಲ್ಲುವವರಲ್ಲಿ ಇಲ್ಲದ ಹಲ್ಲು ನೋವಿನ ಸಮಸ್ಯೆಯೊಂದು ಇತರ ಕೆಲವರಲ್ಲಿ ಗಮನಕ್ಕೆ ಬಂದಿತ್ತಂತೆ.

ಅಧ್ಯಯನದ ಅಂತಿಮ ಸೂಚನೆಯಂತೆ ಸಾಂಪ್ರದಾಯಿಕವಾಗಿ ಸೇವಿಸುವಂತೆ ಅಡಿಕೆಯನ್ನು ಸೇವಿಸಿದರೆ ಅಥವಾ ಮೆಲ್ಲುವುದರಿಂದ ಅಂದರೆ ಹೊಗೆಸೊಪ್ಪಿನಂತಹ ಯಾವುದೇ ಇತರ ವಸ್ತುಗಳ ಸೇರ್ಪಡೆಯನ್ನು ಮಾಡದೆ ಜಗಿದರೆ ಮನುಷ್ಯರಿಗೆ ಏನೂ ಅನಾರೋಗ್ಯವುಂಟಾಗುವುದು ಎಂದು ಅಧ್ಯಯನ ಸ್ಪಷ್ಟವಾಗಿ ಹೇಳಿದೆ. ಅಡಿಕೆ ಸವಿಯುವವರ ಹಾಗೂ ಸವಿಯದವರ ನಡುವೆ ಆರೋಗ್ಯದಲ್ಲೇನೂ ವ್ಯತ್ಯಾಸ ಕಂಡು ಬರುವುದಿಲ್ಲವೆಂದೂ ಸಂಶೋಧಕರು ಸ್ಪಷ್ಟೀಕರಿಸಿದ್ದಾರೆ ಎಂದು ದಾಖಲೆಯಲ್ಲಿದೆ. ಇವೆಲ್ಲವೂ ಅಡಿಕೆ ರುಚಿಗೆ ಮಾತ್ರವಲ್ಲ ಆರೋಗ್ಯಕ್ಕೂ ಒಳ್ಳೆಯದು ಎಂಬುದನ್ನು ಸಾಬೀತುಪಡಿಸುತ್ತವೆ. ■



Download From : www.kpscvaani.com







# ಕರುನಾಡಿನಲ್ಲಿ ಪಸರಿಸಿದ ಪದ್ಮಗಳು

**ಈ ಸಾಲಿನ ಪದ್ಮ ಪ್ರಶಸ್ತಿಗಳಿಗೆ ಭಾಜನರಾದ ಕರುನಾಡಿನ ಹೆಮ್ಮೆಯ ಸಾಧಕರಿಗೆ ಗೌರವ ಸಂದಿರುವುದು ಚಾರಣಿಗನಿಗೆ ಝುರಿ ಸಿಕ್ಕಷ್ಟು ಸಂತೋಷ ತಂದಿದೆ.**

● ಸುಧಾ

ನಮ್ಮ ಹಿರಿಯರ ಮಾತೊಂದಿತ್ತು. ಗೌರವ ಎನ್ನುವುದು ನಾವು ಕೇಳಿ ಪಡೆಯುವಂಥದ್ದಲ್ಲ ; ಅದಾಗಿಯೇ ಬರುವಂಥದ್ದು.

ಶ್ರೀ ಕೃಷ್ಣನೂ ಸಹ ಭಗವದ್ಗೀತೆಯಲ್ಲಿ ಇದನ್ನೇ ವಿಭಿನ್ನವಾಗಿ ಹೇಳಿದ್ದಾನೆ. ನಿನ್ನ ಕೆಲಸ ಮಾಡು, ಫಲಾಪೇಕ್ಷೆಯನ್ನು ಮಾಡಬೇಡ. ಉಳಿದೆಲ್ಲವೂ ನನಗೆ ಬಿಟ್ಟು ಬಿಡು ಎಂದು.

ಕಾಲದ ಓಟದಲ್ಲಿ ಸವಕಳಿಯಾಗುವುದಕ್ಕೆ ಬಹಳ ತಡವಿಲ್ಲ. ನಮ್ಮ ಒಂದು ವರ್ತನೆ ಅಥವಾ ನಡವಳಿಕೆ ತತ್‌ಕ್ಷಣದ ಸವಕಳಿಗೆ ಕಾರಣವಾಗಬಹುದು.

ಈ ಮಾತನ್ನು ವೈಯಕ್ತಿಕ ನೆಲೆಯಲ್ಲೂ ಅನ್ವಯಿಸಿಕೊಂಡರೆ, ನಾವು ಬದುಕುವುದು ಮುಂದಿನ ತಲೆಮಾರಿಗಾಗಿಯೇ ಹೊರತು ಇಂದಿಗಲ್ಲ ಎಂಬುದು ಹೆಚ್ಚು ದಿಟ.

ಇಷ್ಟೂ ಪೀಠಿಕೆಗೆ ಒಂದೇ ಒಂದು ಕಾರಣ. ಈ ವರ್ತಮಾನದಲ್ಲಿ ಪ್ರಶಸ್ತಿಗಳು ಬಿಕರಿಗೆ ಇರುವುದು ನಿಜ. ಯಾರು ಬೇಕಾದರೂ ತಮ್ಮ ಹಣ ಮತ್ತು ಅಂತಸ್ತಿನಿಂದ ಪ್ರಶಸ್ತಿ, ಗೌರವಗಳನ್ನು ಪಡೆಯಬಲ್ಲರು ಎಂಬ ನಂಬಿಕೆಯೊಂದು ದಿನೇದಿನೇ ದೃಢವಾಗುತ್ತಿದೆ.

ಇಂತಹುದರ ನಡುವೆ ಎಲ್ಲೋ ಒಮ್ಮೊಮ್ಮೆ ಬೆಳ್ಳಿಗೆರೆ ಕಾಣುವುದುಂಟು. ಅಂತಹ ಹೊತ್ತಿನಲ್ಲಿ ಕೊಂಚ ಸಮಾಧಾನವಾಗುತ್ತದೆ, ಬದುಕಿನ ಮೇಲಿನ ವಿಶ್ವಾಸ ಹೆಚ್ಚಲೂ ಬಹುದು.

ಇಂತಹುದೊಂದು ಬೆಳವಣಿಗೆ ಗುಡ್ಡ ಹತ್ತುತ್ತಿರುವ ಚಾರಣಿಗ ಬಾಯಾರಿರುತ್ತಾನೆ. ಇನ್ನಷ್ಟು ಮೇಲಕ್ಕೆ ಹೋದರಾದರೂ ನೀರು ದೊರೆಯಬಹುದೆಂದು ಆಶಿಸಿರುತ್ತಾನೆ. ಅಂತಹುದರ ನಡುವೆ ಸಣ್ಣದೊಂದು ಝುರಿಯ ನಾದ ಕಿವಿಗೆ ಬೀಳುತ್ತದೆ. ಚುರುಕಾಗುತ್ತಾನೆ. ಅದರ ಅನ್ವೇಷಣೆಯಲ್ಲಿ ಕಳೆದು ಹೋಗುತ್ತಾನೆ. ಕೊನೆಗೆ ನೀರಿನ ಝುರಿ ಎದುರು ನಿಂತಾಗ ಆಗುವ ಖುಷಿ ಬಹಳ ದೊಡ್ಡದು.

ಈ ಸಾಲಿನ ಪದ್ಮ ಪ್ರಶಸ್ತಿಗಳ ಪ್ರಕಟಣೆ ಚಾರಣಿಗನಿಗೆ ಝುರಿ ಸಿಕ್ಕಷ್ಟೇ ಸಂತೋಷ ತಂದಿದೆ.

ಇಡೀ ದೇಶದಲ್ಲಿನ ಪ್ರಶಸ್ತಿಗಳ ಬಗ್ಗೆ ಇಲ್ಲಿ ಉಲ್ಲೇಖಿಸುತ್ತಿಲ್ಲ. ಕರುನಾಡಿನ ಹಾಗೂ ಕನ್ನಡ ಭಾಷೆಗೆ ಸೇವೆ ಸಲ್ಲಿಸಿದ ಪ್ರಶಸ್ತಿ ಪುರಸ್ಕೃತರ ಕುರಿತು ಏನಾದರೂ ಹೇಳಬಹುದಾದರೆ, ಸಾಧಕರಿಗೆ ಗೌರವ ಸಂದಿದೆ ಎನ್ನಬಹುದು. ಇದು ತೀರಾ ತುಟಿಯ ಮೇಲಿನ ಮಾತಲ್ಲ.

ವೈದ್ಯರತ್ನ ಡಾ. ಬಿ.ಎಂ. ಹೆಗ್ಡೆ, ಮೇರು ಗಾಯಕ ಡಾ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರಿಗೆ ಪದ್ಮವಿಭೂಷಣ, ಸಾಹಿತಿ ನಾಟಕಕಾರ ಡಾ ಚಂದ್ರಶೇಖರ ಕಂಬಾರ



Download From : www.kpscvaani.com

ಅವರಿಗೆ ಪದ್ಮಭೂಷಣ, ಜಾನಪದ ಜಗತ್ತಿಗೆ ಕೊಡುಗೆ ಕೊಟ್ಟ ಮಂಜಮ್ಮ ಜೋಗತಿ, ಅಧ್ಯಾತ್ಮ ನೆಲೆಯ ಪ್ರಪಂಚಕ್ಕೆ ಹೊಸ ಆಯಾಮ ಕಲ್ಪಿಸಿದ ಆರ್.ಎಲ್. ಕಶ್ಯಪ್ ಹಾಗೂ ಕ್ರೀಡಾರತ್ನ ಕೆ.ವೈ. ವೆಂಕಟೇಶ್ ಅವರಿಗೆ ಪದ್ಮಶ್ರೀ ಪ್ರಶಸ್ತಿಗಳು ಪ್ರಕಟವಾಗಿವೆ.

ಹಲವು ಬಾರಿ ಎಡವಿ ಬಿಡುವುದು ಆಯ್ಕೆಯಲ್ಲಲ್ಲ ; ಅನಂತರದ ನಾನಾ ಬಗೆಯ ಒತ್ತಡದ ಮೇಲೆ. ಆಳುವವರ ಮೇಲೆ ಬರುವ ಒತ್ತಡವೂ ಸಣ್ಣದಲ್ಲ. ಆದರೂ ಒತ್ತಡದ ಬುಗ್ಗೆಯನ್ನು ಕಾಲಲ್ಲಿ ಒತ್ತಿ ಹಿಡಿದು, ನಗುವುದು ಸಣ್ಣ ಕೆಲಸವೂ ಅಲ್ಲ. ಅದು ಈ ಬಾರಿ ಸಾಧ್ಯವಾಗಿದೆ.

ಈ ಬಾರಿಯ ಸಾಧಕರ ಪಟ್ಟಿ ನೋಡಿದರೆ, ಇವರಿಗೆ ಕೊಡಬೇಕಿತ್ತೇ ಎಂಬ ಪ್ರಶ್ನೆ ಉದ್ಭವಿಸದು. ಪ್ರತಿಯೊಬ್ಬರೂ ತಮ್ಮ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವಂತಹವರೇ.

ಈ ಮಾತು ಮತ್ತೆ ಕ್ಲೀಷೆ ಎನಿಸಬಹುದು. ಆದರೆ, ಪ್ರಚಾರದ ಪ್ರಖರ ಬೆಳಕಿನಿಂದ ದೂರವಿದ್ದು, ಕತ್ತಲೆಯಲ್ಲೇ ಒಂದಾಗಿ ಕೆಲಸ ಮಾಡುವುದು ನಿಜವಾದ ಕಾಯಕ. ಅದು ತೀರಾ ಕಷ್ಟ. ಕತ್ತಲೆಯನ್ನು ಇಲ್ಲಿ ಏಕೆ ಉಲ್ಲೇಖಿಸಲಾಗಿದೆ ಎಂದರೆ ಬೆಳಕು ಹಾಗೂ ಕತ್ತಲೆಗೆ ಇರುವ ಏಕೈಕ ಸಾಮ್ಯ ಗುಣವೆಂದರೆ, ತನ್ನ ಹತ್ತಿರ ಬಂದವರನ್ನು ಆವರಿಸಿಕೊಳ್ಳುವುದು.

ಈ ಆವರಿಸುವಿಕೆಯಲ್ಲಿ ಆಗುವ ದೊಡ್ಡ ಸ್ಥಿತ್ಯಂತರವೆಂದರೆ, ಹತ್ತಿರಕ್ಕೆ ಬಂದ ವಸ್ತು ಅಥವಾ ವ್ಯಕ್ತಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ. ಅಥವಾ ಅದರಲ್ಲಿ ಒಂದಾಗಿ ಬಿಡುತ್ತಾನೆ. ಹಾಗಾಗಿ ತನ್ನ ಸ್ವಂತಿಕೆಯನ್ನು ಉಳಿಸಿಕೊಳ್ಳುವ ಎಚ್ಚರದಿಂದಲೇ ಸಖ್ಯವನ್ನು ಸಂಪಾದಿಸಬೇಕು. ಇದು ಕಷ್ಟ.

ಆ ದೃಷ್ಟಿಯಲ್ಲಿ ಹೇಳುವುದಾದರೆ ಈ ಬಾರಿಯ ಸಾಧಕರು ತೆರೆಯ ಮರೆಯಲ್ಲಿದ್ದುಕೊಂಡು ಕೆಲಸ ಮಾಡಿದವರು. ರಂಗದ ಮೇಲಿನ ನಟನ ಅಭಿನಯಕ್ಕೆ ಮತ್ತು ಭಾವನೆಯನ್ನು ಯಶಸ್ವಿಯಾಗಿ ಪ್ರೇಕ್ಷಕನಿಗೆ ತನ್ನ ಬೆಳಕಿನ ಪರಿಣಾಮಗಳಿಂದ ತಲುಪಿಸುವ ಬೆಳಕುಗಾರ (ಬೆಳಕಿನ ವಿನ್ಯಾಸಕ ಅಥವಾ ಬೆಳಕು ವಿನ್ಯಾಸ ನಿರ್ದೇಶಕ) ಒಳಗೊಳಗೆ ಖುಷಿ ಪಡುವುದು ಪ್ರೇಕ್ಷಕ ತಟ್ಟುವ ಚಪ್ಪಾಳೆ ಕೇಳಿದಾಗ.

ಅದೇ ಮತ್ತೊಂದು ಪ್ರಯೋಗ ಹಾಗೂ ಪ್ರಯತ್ನಕ್ಕೆ ಪ್ರೇರಣೆ.

ಡಾ. ಮೋನಪ್ಪ ಹೆಗ್ಡೆ ಹೃದ್ರೋಗ ಪರಿಣಿತರಾಗಿ ಪ್ರಸಿದ್ಧಿ. ಆಲೋಪತಿ ವೈದ್ಯರು. ಆದರೆ ಅವರು ಹೆಚ್ಚು ಪ್ರಸಿದ್ಧರಾಗಿದ್ದು ಮನಸ್ಸು ಮತ್ತು ದೇಹಕ್ಕೆ ನೀಡುವ ಚಿಕಿತ್ಸೆಯಿಂದ. ಔಷಧ ಎನ್ನುವುದು ತಾತ್ಕಾಲಿಕ. ಜೀವನಶೈಲಿಯೇ ಪರಮೌಷಧ ಮತ್ತು ಶಾಶ್ವತ ಪರಿಹಾರವೆಂದೂ ಪ್ರತಿಪಾದಿಸಿದವರು.

ಆರೋಗ್ಯದಲ್ಲಿ ಅಧ್ಯಾತ್ಮದ ಮಹತ್ವ, ಅದರ ವೈಜ್ಞಾನಿಕ ನೆಲೆಗಳು, ನಮ್ಮ ಹಳೆಯ ಬದುಕಿನ ಕ್ರಮವನ್ನೆಲ್ಲಾ ವಿವರಿಸಿದವರು. ಅದರ ಅಗತ್ಯವನ್ನು ಇಂದಿಗೆ ಅರ್ಥ ಮಾಡಿಕೊಟ್ಟವರು.

ದೇಶ ವಿದೇಶಗಳಲ್ಲೆಲ್ಲಾ ಆರೋಗ್ಯಕ್ಕೂ ಹಾಗೂ ಬದುಕಿನ ಶೈಲಿಗೂ ಇರುವ ಅವಿನಾಭಾವ ಸಂಬಂಧವನ್ನು ಪರಿಚಯಿಸಿದವರು 83 ವರ್ಷದ ಡಾ. ಬಿ.ಎಂ. ಹೆಗ್ಡೆ.

ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಬಗ್ಗೆ ಹೇಳುವುದೇನೂ ಇಲ್ಲ, ಬರೀ ಕೇಳಬೇಕು.

ಕನ್ನಡದ ಗೀತೆಗಳಿಗೆ ದನಿ ತುಂಬಿ ಸಿನಿಪ್ರಿಯರ, ಸಂಗೀತ ಪ್ರಿಯರ ಹೃದಯಕ್ಕೆ ತಲುಪಿಸಿದವರು.

ಕವಿಯ ಕಾವ್ಯದ ಸಾಲಿನಲ್ಲಿ ವಿದ್ಯುಚ್ಛಕ್ತಿ ಹರಿಯುವ ಸಾಧ್ಯತೆ ಇರುತ್ತದೆ. ಹಾಗೆಯೇ ಸಂಗೀತ ನಿರ್ದೇಶಕನ ಸಂಗೀತ ಸಂಯೋಜನೆಯಲ್ಲೂ ಅದೇ ಶಕ್ತಿ ಅಡಕವಾಗಿರುತ್ತದೆ.

ಆದರೆ ಆ ವಿದ್ಯುತ್ ಪ್ರವಾಹ ಹರಿಯುವುದು ಯಾವಾಗವೆಂದರೆ, ಗಾಯಕನೊಬ್ಬ ತನ್ನ ದನಿಯ ಮೂಲಕ ಇಂಪಿನ ಸೊಂಪಿನ ಸೊಗಸನ್ನು ಹೊರಹೊಮ್ಮಿಸಿದಾಗ. ಆಗ ಕೇಳುಗರಿಗೆ ಖುಷಿಯಾಗುತ್ತದೆ. ಶ್ರೋತೃಗಳೆಲ್ಲರಲ್ಲೂ ರೋಮಾಂಚನ ಮೂಡಿಸುತ್ತದೆ. ಅದನ್ನೇ ಡಾ ಎಸ್. ಪಿ. ಬಾಲಸುಬ್ರಹ್ಮಣ್ಯಂ ಅವರು ಕನ್ನಡದಲ್ಲಿ ಮಾಡಿದ್ದು.ಇಂದಿಗೂ ಅವರ ಗೀತೆಗಳು ನಮ್ಮೊಳಗೆ ಮಾರ್ದನಿಸುವುದು ಸುಳ್ಳಲ್ಲ.

ಡಾ ಚಂದ್ರಶೇಖರ ಕಂಬಾರ ಅವರ ಬಗ್ಗೆ ಒಂದೇ ಸಾಲಿನಲ್ಲಿ ಎರಡೇ ಪದಗಳಲ್ಲಿ ಹೇಳಬಹುದಾದರೆ ಅವರೊಬ್ಬ ವಿಶಿಷ್ಟ ಬರಹಗಾರರು !

ಕಥನ ಅವರ ದುಡಿಮೆ. ಹಾಗೆಯೇ ಗ್ರಾಮೀಣ ನೆಲೆಯನ್ನು, ಜಾನಪದ ಎಳೆಯನ್ನು ಶಿಷ್ಟ ನೆಲೆಗೆ ಹೊಂದಿಸುತ್ತಲೇ ಜಾನಪದ ಪರಿಮಳ ಎಲ್ಲೂ ಕರಗಿ ಹೋಗದ ಹಾಗೆ ನೋಡಿಕೊಳ್ಳುವ, ನಿರ್ವಹಿಸುವ ವಿಶೇಷ ನೈಪುಣ್ಯವನ್ನು ಹೊಂದಿರುವ ಅಪರೂಪದ ನಾಟಕಕಾರ ಡಾ ಚಂದ್ರಶೇಖರ ಕಂಬಾರ.

ಹಲವು ಕಾದಂಬರಿಗಳ ಮೂಲಕ ಅವರು ಪರಿಚಯವಾದರೂ ತತ್‌ಕ್ಷಣ ನೆನಪಿಗೆ ಬರುವುದು ಒಬ್ಬ ನಾಟಕಕಾರನಂತೆಯೇ. ಅವರ ಕೃತಿಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದೆ.

ಕನ್ನಡ ಜಾನಪದ ಅಕಾಡೆಮಿ ಅಧ್ಯಕ್ಷೆಯಾಗಿರುವ ಬಳ್ಳಾರಿಯ ಮಂಜಮ್ಮ ಜೋಗತಿ ವಿಶಿಷ್ಟ ಸಾಧಕರು.

ಸಮಾಜದ ಮುಖ್ಯ ವಾಹಿನಿಯಲ್ಲಿ ಇದ್ದುಕೊಂಡು ಮಾಡುವ ಸಾಧನೆ ಗೌಣವಲ್ಲ, ಅದಕ್ಕೆ ಬೇರೆ ಮಾನದಂಡವಿದೆ. ಆದರೆ, ಮುಖ್ಯವಾಹಿನಿಗೆ ಬರುವುದೇ ಒಂದು ಸಾಧನೆಯಾಗುವುದೂ ಇದೆ.

ತೃತೀಯ ಲಿಂಗಿ ಆಗಿ ರೂಪಾಂತರಗೊಂಡ ಮಂಜಮ್ಮ ಜೋಗತಿ ಅಂತಹ ಸಾಧಕರಲ್ಲಿ ಒಬ್ಬರು.

ಸಂಪೂರ್ಣವಾಗಿ ಮುಖ್ಯವಾಹಿನಿಯಿಂದ ಕಡೆಗಣಿಸಲ್ಪಟ್ಟ ಗುಂಪಿಗೆ ಸೇರಿ, ಆ ಬಳಿಕ ತಮ್ಮದೇ ಸ್ವಪ್ರಯತ್ನ ಹಾಗೂ ನಿರ್ಧಾರಗಳ ಮೂಲಕ ಮುಖ್ಯವಾಹಿನಿಗೆ ಸೇರ್ಪಡೆಯಾದವರು. ಜೋಗತಿ ಸಂಪ್ರದಾಯವನ್ನೇ ಸ್ವೀಕರಿಸಿ, ನೂರಾರು ಪ್ರದರ್ಶನ ನೀಡಿ ಖ್ಯಾತಿಯಾದವರು.

ಪಾರಿಜಾತ ಎಂಬುದು ವಿಶಿಷ್ಟವಾದ ಪುಷ್ಪ. ಮಂಜಿಗೆ ತೊಟ್ಟು ಕಳಚಿಕೊಂಡು ಕೆಳಗೆ ಬೀಳುತ್ತದೆ.

ಮಂಜಿನದ್ದೂ ತಪ್ಪಲ್ಲ, ಹೂವಿನ ತೊಟ್ಟಿನದೂ ತಪ್ಪಲ್ಲ. ಅಂದ ಮಾತ್ರಕ್ಕೆ ದೇವರಿಗೆ ಅರ್ಪಣೆಯಾಗಲಿಕ್ಕೆ ಅಡ್ಡಿಯೇನೂ ಇಲ್ಲ. ಇದಕ್ಕೆ ಸಾಕ್ಷ್ಯವಾದವರು ಮಂಜಮ್ಮ ಜೋಗತಿ.

ಇಲ್ಲಿ ದೇವರು ಎನ್ನುವ ಉದಾಹರಣೆಯನ್ನು ಬಳಸಿರುವುದು ಧಾರ್ಮಿಕ ನೆಲೆಯಲ್ಲಲ್ಲ, ಬದಲಾಗಿ ಮಾನ್ಯದ ನೆಲೆಯಲ್ಲಿ.

ಧರ್ಮಗ್ರಂಥಗಳು, ಸಂಸ್ಕೃತದ ಮೇಲಿನ ಸಂಶೋಧನೆಗಳೇನೂ ಹೊಸತಲ್ಲ ನಮಗೆ. ಆದರೆ, ತಾಂತ್ರಿಕ ನೆಲೆಯಿಂದ, ತಾಂತ್ರಿಕ ಶೈಕ್ಷಣಿಕ ನೆಲೆಯಿಂದ ಬಂದವರು



Download From : www.kpscvaani.com

ಸಂಸ್ಕೃತ ಹಾಗೂ ವೇದಗಳನ್ನು ನೋಡುವ ಬಗೆ ಯಾವಾಗಲೂ ಭಿನ್ನ. ರಂಗಸ್ವಾಮಿ ಲಕ್ಷ್ಮೀನಾರಾಯಣ ಕಶ್ಯಪ್ ಮುಖ್ಯವಾಗಿ ಗುರುತಿಸಲ್ಪಡುವುದು ಒಂದೇ ಉದ್ದೇಶದಿಂದ. ಅದು ಸಂಕೀರ್ಣತೆಯನ್ನು ಸರಳಗೊಳಿಸಿದ್ದಕ್ಕಾಗಿ.

ವೇದಗಳಲ್ಲಿನ ತಿಳಿಸಾರವನ್ನು ಸಾಮಾನ್ಯ ಜನರಿಗೆ ತಮ್ಮ ಸಂಸ್ಥೆಯ ಮುಖೇನ ಹಲವಾರು ಗ್ರಂಥಗಳ ಪ್ರಕಟಣೆ ಮೂಲಕ ತಲುಪಿಸುವ ಪ್ರಯತ್ನ ನಡೆಸಿದರು.

ಅಮೆರಿಕ ವಿಶ್ವವಿದ್ಯಾಲಯದಲ್ಲಿ ತಂತ್ರಜ್ಞಾನ ವಿಷಯವನ್ನು ಬೋಧಿಸಿಕೊಂಡು, ವೇದಾಧ್ಯಯನವನ್ನು ಮಾಡುತ್ತಾ, ವೇದಗಳನ್ನು ಇಂಗ್ಲಿಷ್‌ಗೆ ಭಾಷಾಂತರ ಮಾಡಿದವರು. ಅದರ ಮುಖೇನ ಭಾರತೀಯ ಪರಂಪರೆ ಹಾಗೂ ಶ್ರೇಷ್ಠತೆಯನ್ನು ಜಗತ್ತಿಗೆ ತೋರಿಸುವ ಪ್ರಯತ್ನ ಮಾಡಿದ್ದಾರೆ.

ಈ ಸಾಧನೆಯೇನೂ ಕಡಿಮೆಯಲ್ಲ.

ಕೆ.ವೈ.ವೆಂಕಟೇಶ್ ತೀರಾ ಅಪರೂಪದ ಕ್ರೀಡಾಪಟು. ಪೊಲೀಯೊ ಪೀಡಿತ ಮಹಿಳೆ ಸಿ.ಎನ್. ಜಾನಕಿ ತನ್ನ ವೈಕಲ್ಯವನ್ನೂ ಬದಿಗೊತ್ತಿ ಇಂಗ್ಲಿಷ್ ಕಡಲ್ಗಾಲುವೆ ಈಜಿದ್ದನ್ನು ಕಂಡು ಪುಳಕಿತರಾದ ವೆಂಕಟೇಶ್, ಸಾಧನೆಯತ್ತ ಮುಖ ಮಾಡಿದರು. ಕ್ರೀಡಾ ಕ್ಷೇತ್ರದಲ್ಲಿ ಅನುಪಮವಾದ ಸಾಧನೆ ಮಾಡಿ, ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡರು.

ವಿಶ್ವ ಕುಬ್ಜರ ಕ್ರೀಡೆಯಲ್ಲಿ ಪಾಲ್ಗೊಂಡು ಪದಕ ಗಳಿಸಿದ್ದರು. ಕ್ರೀಡೆಯ ಒಂದು ವಿಭಾಗವಲ್ಲ, ಹಲವು ವಿಭಾಗಗಳಲ್ಲಿ ಸಾಧನೆ ತೋರಿ ಪದಕ ಪಡೆದಿರುವುದು ನಿಜಕ್ಕೂ ಅಭಿನಂದಿಸಲೇಬೇಕಾದ ಸಂಗತಿ. ಶಾಟ್ಪುಟ್. ಡಿಸ್ಕಸ್, ಜಾವೆಲಿನ್ ಸೇರಿ ಎಲ್ಲ ವಿಭಾಗಳನ್ನೂ ಪ್ರತಿನಿಧಿಸಿದವರು.

ಬ್ಯಾಂಡ್ಮಿಟನ್. ಹಾಕಿ, ಫುಟ್ಬಾಲ್ ನಲ್ಲೂ ಪದಕ ಪಡೆದು, ಲಿಮ್ಕಾ ದಾಖಲೆಯಲ್ಲಿ ತಮ್ಮ ಹೆಸರನ್ನು ದಾಖಲಿಸಿದ್ದಾರೆ.ಎಲ್ಲಾ ಲಭ್ಯತೆಗಳಿದ್ದಾಗ್ಯೂ ಕುಂಟು ನೆವಗಳನ್ನು ನೀಡಿ ಸಾಧನೆಯಿಂದ ಹಿಮ್ಮುಖವಾಗಿ ನಡೆಯುವ ತಲೆಮಾರಿನ ಮಧ್ಯೆ ಕೆ.ವೈ. ವೆಂಕಟೇಶ್ ಭಿನ್ನವಾಗಿ ಕಾಣುತ್ತಾರೆ.

ಇಷ್ಟೂ ಸಾಧಕರ ಬಗೆಗಿನ ಎರಡೆರಡು ಸಾಲುಗಳು ಓದಿದಾಗ ಖುಷಿ, ಸಮಾಧಾನ ಆಗುವುದು ಇದ್ದೇ ಇದೆ. ಆದರೆ ಎಲ್ಲರಲ್ಲೂ ಸಾಮಾನ್ಯವಾಗಿ ಕಂಡು ಬರುವ ಅಂಶ ಒಂದೇ. ಅದು 'ನನ್ನ ಸಾಧನೆ ನನ್ನ ಆತ್ಮ ತೃಪ್ತಿಗಾಗಿ. ಪ್ರಚಾರದ ಬೆಳಕು ಬೇಕಿಲ್ಲ ಸಾಧನೆಯೆಂಬ ವಜ್ರ ಹೊಳೆಯಲಿಕ್ಕೆ. ಯಾಕೆಂದರೆ ಸಾಧನೆಯೇ ಸ್ವಯಂ ಪ್ರಭೆಯುಳ್ಳದ್ದು'.

ಈ ಆತ್ಮವಿಶ್ವಾಸದ ಪ್ರಭಾವಳಿಯನ್ನು ಹೊಂದಿರುವ ಸಾಧಕರನ್ನು ಹುಡುಕಿ ಪದ್ಮ ಪ್ರಶಸ್ತಿ ಹಾರವನ್ನು ತೊಡಿಸಿರುವುದೂ ಅರ್ಥಪೂರ್ಣ. ಈ ಪರಂಪರೆ ಹೀಗೆಯೇ ಮುಂದುವರಿಯಲಿ.

## STATEMENT ABOUT OWNERSHIP AND OTHER PARTICULARS ABOUT VARTHA JANAPADA

### FORM IV Rule 8

| | | |
|---|---|---|
| 1. Place of Publication | : | Bengaluru |
| 2. Periodicity of Publication | : | Monthly |
| 3. Printer Name | : | T. Venkatesh |
| Nationality | : | Indian |
| Address | : | M/s Abhimaani Publications Pvt. Ltd. #2/4, Dr Rajkumar Road, Rajajinagar, Benglauru - 560 010 |
| 4. Publishers Name | : | Dr. P.S. Harsha |
| Nationality | : | Indian |
| Address | : | Dept. of Information & Public Relations #17, Mahaveer Road, (Infantry Rd) Bengaluru - 560 001. |
| 5. Editor's Name | : | Dr. P.S. Harsha |
| Nationality | : | Indian |
| Address | : | Dept. of Information & Public Relations #17, Mahaveer Road, (Infantry Rd) Bengaluru - 560 001. |

6. License No. - Regd. No.
**PMG/BG/WPP/365/2021-23**

I, **Dr P S Harsha** hereby declare that the particulars given above are true to the best of my knowledge and belief.

Bengaluru
01.03.2021

Sd.
Commissioner
Signature of the Publisher





Download From : www.kpscvaani.com



# ರಾಜ್ಯಪಾಲರ ಜಂಟಿ ಅಧಿವೇಶನದ ಭಾಷಣದ ಮುಖ್ಯಾಂಶಗಳು

ಬಿ. ಜಿ. ಪೂರ್ಣಿಮ

**"ಕರ್ನಾಟಕದ ಜನತೆಗೆ ಸೇವೆ ಸಲ್ಲಿಸುವ ಅವಕಾಶ ಒದಗಿರುವುದಕ್ಕೆ ತುಂಬಾ ಹೆಮ್ಮೆ ಅನಿಸುತ್ತದೆ"**... ಹೀಗೆ ಹೇಳಿದವರು ಬೇರೆ ಯಾರೂ ಅಲ್ಲ, ನಮ್ಮ ರಾಜ್ಯದ ರಾಜ್ಯಪಾಲರಾರದ ವಜೂಭಾಯಿ ವಾಲಾ ಅವರು.

ಅವರು ಜನವರಿ 28 ರಂದು 2021 ನೇ ಸಾಲಿನ 15 ನೇ ವಿಧಾನಸಭೆಯ 9ನೇ ಜಂಟಿ ಅಧಿವೇಶನವನ್ನು ಉದ್ದೇಶಿ ಮಾಡಿದ ಭಾಷಣದಲ್ಲಿ ಹೀಗೆ ಹೇಳುವ ಮೂಲಕ ಕರ್ನಾಟಕದ ಜನರ ಮನಸ್ಸನ್ನು ಗೆದ್ದರು.

ವರ್ಷದ ಮೊದಲ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುವುದು ಸಂಪ್ರದಾಯವಾಗಿ ಮುಂದುವರೆದುಕೊಂಡು ಬಂದಿದೆ. ರಾಜ್ಯಪಾಲರು ಈ ಸಂದರ್ಭದಲ್ಲಿ ತಮ್ಮ ಭಾಷಣದ ಮೂಲಕ ಸರ್ಕಾರ ಮಾಡಿರುವ ಉತ್ತಮ ಕೆಲಸಗಳನ್ನು ಗುರುತಿಸಿ ಪ್ರಶಂಸೆ ಮಾಡುವ ಜೊತೆಗೆ ಸರ್ಕಾರ ಕೈಗೊಂಡಿರುವ ಜನಪರ ಯೋಜನೆಗಳ ಮೇಲೆ ಬೆಳಕು ಚೆಲ್ಲುವ ಕೆಲಸವನ್ನು ಮಾಡುತ್ತಾರೆ.

**ವರ್ಷದ ಮೊದಲ ಅಧಿವೇಶನವನ್ನು ರಾಜ್ಯಪಾಲರ ಭಾಷಣದ ಮೂಲಕ ಪ್ರಾರಂಭಿಸುವ ಸಂಪ್ರದಾಯ ನಮ್ಮ ಸಂವಿಧಾನದಲ್ಲಿ ನಡೆದುಕೊಂಡು ಬಂದಿದೆ. ಅದರಂತೆ 2021ನೇ ಸಾಲಿನ ಅಧಿವೇಶನದಲ್ಲಿ ರಾಜ್ಯಪಾಲರಾದ ವಜೂಭಾಯಿ ವಾಲಾ ಅವರು ಮಾಡಿದ ಭಾಷಣದ ಮುಖ್ಯಾಂಶಗಳು ಇಂತಿದೆ.**



Download From : www.kpscvaani.com



**ನಿರುದ್ಯೋಗ ಸಮಸ್ಯೆಗೆ ಸರ್ಕಾರವು ಹೆಚ್ಚಿನ ಒತ್ತು ನೀಡಿದ್ದು, 53,295 ಕೋಟಿ ರೂಪಾಯಿಗಳ ಹೂಡಿಕೆಯೊಂದಿಗೆ 1.54 ಲಕ್ಷ ಉದ್ಯೋಗವನ್ನು ಸೃಜಿಸುವ 366 ಯೋಜನೆಗಳಿಗೆ ಈಗಾಲೇ ಅನುಮೋದನೆ ನೀಡಲಾಗಿದೆ. ಹಾಗೆಯೇ ಪ್ರಧಾನಮಂತ್ರಿ ಉದ್ಯೋಗ ಸೃಜನೆ ಕಾರ್ಯಕ್ರಮದ ಅಡಿಯಲ್ಲಿ 1,763 ಕೈಗಾರಿಕೆ/ಸೇವಾ ಘಟಕಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ ಕೈಗಾರಿಕೆಗಳಿಗೆ ಸುಲಭವಾಗಿ ಭೂಮಿಯನ್ನು ದೊರೆಯುವಂತೆ ಮಾಡಲು ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961 ಕ್ಕೆ ತಿದ್ದುಪಡಿ ಮಾಡಲಾಗಿದೆ. ಹಾಗಾಗಿ ಸರ್ಕಾರದ ಈ ಎಲ್ಲಾ ಯೋಜನೆಗಳಿಂದ ನಿರುದ್ಯೋಗ ಸಮಸ್ಯೆಗೆ ಪರಿಹಾರ ದೊರಕಲಿದೆ.**



ಈ ವರ್ಷ ನಮ್ಮ ರಾಜ್ಯ ಮಾತ್ರವಲ್ಲ ಇಡೀ ಪ್ರಪಂಚದಾದ್ಯಂತ ಹರಡಿದ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಸಾಕಷ್ಟು ಸವಾಲುಗಳು ಮತ್ತು ಸಂಕಷ್ಟಗಳು ಎದುರಾದವು. ಇಂತಹ ಸಮಯದಲ್ಲಿ ಕೂಡ ರಾಜ್ಯ ಸರ್ಕಾರವು ಗಣನೀಯ ಸಾಧನೆಯನ್ನು ಮಾಡಿದೆ. ಕೋವಿಡ್-19 ವಿರುದ್ಧ ಜನರ ಆರೈಕೆಯಲ್ಲಿ ಅವಿರತವಾಗಿ ವೈದ್ಯರು, ನರ್ಸ್, ಪೊಲೀಸ್, ಮತ್ತು ಇತರರು ಹಗಲು-ರಾತ್ರಿ ಸೇವೆಯನ್ನು ಮಾಡಿದ್ದಾರೆ. ಹಾಗೆಯೇ ಕರ್ತವ್ಯದಲ್ಲಿದ್ದು, ಕೋವಿಡ್-19 ಸೇವೆ ನಿರ್ವಹಿಸುತ್ತಾ, ಮರಣ ಹೊಂದಿದ ಸರ್ಕಾರಿ ನೌಕರರಿಗೆ ಅತಿ ಹೆಚ್ಚಿನ ಪರಿಹಾರ ಮೊತ್ತ 30 ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರವು ಘೋಷಿಸಿರುವುದಕ್ಕೆ ರಾಜ್ಯಪಾಲರು ಸರ್ಕಾರವನ್ನು ಅಭಿನಂದಿಸಿದರು.

ಸರ್ಕಾರವು 248 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ 1.36 ಲಕ್ಷ ಕೋವಿಡ್ ರೋಗಿಗಳಿಗೆ ಉಚಿತ ಚಿಕಿತ್ಸೆಯನ್ನು ಒದಗಿಸಿದೆ. ಲಾಕ್‌ಡೌನ್ ಕಾರಣದಿಂದ ಆರ್ಥಿಕ ನಷ್ಟವನ್ನು ಅನುಭವಿಸಿದ ರೈತರು, ಅಸಂಘಟಿತ ವಲಯದ ಕಾರ್ಮಿಕರು, ಆಟೋ ಚಾಲಕರು, ಮಡಿವಾಳರು, ನೇಕಾರರು, ಕ್ಷೌರಿಕರನ್ನೂ ಒಳಗೊಂಡಂತೆ 63,59,000 ಫಲಾನುಭವಿಗಳಿಗೆ 5,372 ಕೋಟಿ ರೂಪಾಯಿಗಳ ಮೌಲ್ಯದ ಹಣಕಾಸು ನೆರವನ್ನು ಒದಗಿಸಿದೆ. ಅದೇ ರೀತಿಯಲ್ಲಿ ಸಂಕಷ್ಟದಲ್ಲಿದ್ದ 11,770 ಚರ್ಮ ಕುಶಲಕರ್ಮಿಗಳಿಗೆ ತಲಾ 5,000 ರೂಪಾಯಿಗಳಂತೆ ಧನ ಸಹಾಯವನ್ನು ಮತ್ತು ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿಯಲ್ಲಿ 51 ಲಕ್ಷ ರೈತರಿಗೆ ತಲಾ 2,000 ರೂಪಾಯಿಗಳ ಹೆಚ್ಚುವರಿ ಮೊತ್ತದೊಂದಿಗೆ 1,020 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ. ಒಟ್ಟಿನಲ್ಲಿ ಕೋವಿಡ್‌ನಿಂದ ಉದ್ಯೋಗವನ್ನು ಕಳೆದುಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದವರಿಗೆ ರಾಜ್ಯ ಸರ್ಕಾರವು ಅಗತ್ಯ ನೆರವನ್ನು ಸಕಾಲದಲ್ಲಿ ನೀಡುವ ಮೂಲಕ ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದೆ ಎಂದು ರಾಜ್ಯಪಾಲರು ತಿಳಿಸಿದರು.

ಲಾಕ್‌ಡೌನ್‌ನಿಂದಾಗಿ ತಮ್ಮ ಗ್ರಾಮಗಳಿಗೆ ಮರಳಿದವರಿಗೆ ಉದ್ಯೋಗ ನೀಡುವ ನಿಟ್ಟಿನಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ 4,540 ಕೋಟಿ ರೂಪಾಯಿಗಳ ಮೊತ್ತದ ಹಣಕಾಸು ಪ್ರಗತಿಯೊಂದಿಗೆ 1,194 ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ. ಹಾಗೂ ಭತ್ತ, ರಾಗಿ ಮತ್ತು ಜೋಳಕ್ಕೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿ ಮಾಡಿ ಖರೀದಿ ಮಾಡುವ ಮೂಲಕ ರೈತರಿಗೆ ಸರ್ಕಾರ ನೆರವಾಗಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿಯವರ ದೂರದರ್ಶಿತ್ವದ "ಆತ್ಮ ನಿರ್ಭರ್ ಭಾರತ್" ಕಾರ್ಯಕ್ರಮದಡಿಯಲ್ಲಿ ಆರೋಗ್ಯದ ಮೂಲಸೌಕರ್ಯಗಳಾದ ಪಿ.ಪಿ.ಇ. ಕಿಟ್, ವೆಂಟಿಲೇಟರ್ ಮುಂತಾದ ಉತ್ಪಾದನೆಯನ್ನು ಹೆಚ್ಚಿಸಿಕೊಂಡಿದ್ದಕ್ಕೆ ರಾಜ್ಯಪಾಲರು ಸರ್ಕಾರವನ್ನು ಶ್ಲಾಘಿಸಿದರು.

ನನ್ನ ಸರ್ಕಾರವು ದೇಶದಲ್ಲೇ ಪ್ರಪ್ರಥಮ ಬಾರಿಗೆ ಹಸಿರು ಸೂಚ್ಯಂಕ



Download From : www.kpscvaani.com

ಸಾಧನ ಕಿಟ್ ಅನ್ನು ಅಭಿವೃದ್ಧಿಪಡಿಸಿರುವುದಲ್ಲದೆ ನವೀಕರಿಸಬಹುದಾದ ಇಂಧನ ವಲಯದಲ್ಲಿ ರಾಷ್ಟ್ರದಲ್ಲಿಯೇ ಮೊದಲನೆಯ ಸ್ಥಾನ ಪಡೆದಿರುವುದನ್ನು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು. ಅರಣ್ಯ ಮತ್ತು ಜೀವಿ ಪರಿಸರವು ನಾವು ನಮ್ಮ ಮುಂದಿನ ಪೀಳಿಗೆಗೆ ಬಿಟ್ಟು ಹೋಗುವ ಕೊಡುಗೆಯಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಹಸಿರು ಸೂಚ್ಯಾಂಕ ಸಾಧನ ಕಿಟ್ ಅನ್ನು ಅಭಿವೃದ್ಧಿಪಡಿಸುವ ಮೂಲಕ ಪರಿಸರ ಸಂರಕ್ಷಣೆಗೆ ಕ್ರಮಕೈಗೊಂಡಿರುವುದಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು.

ಸರ್ಕಾರವು ಕೋವಿಡ್ ಸಂಕಷ್ಟವನ್ನು ಸಮರ್ಥವಾಗಿ ನಿಭಾಯಿಸಿದಂತೆಯೇ ಪ್ರವಾಹ ಸಂಕಷ್ಟವನ್ನು ಅಷ್ಟೇ ಸಮರ್ಥವಾಗಿ ನಿಭಾಯಿಸಿತು. ಸುಮಾರು 9,22,605 ಪ್ರವಾಹ ಪೀಡಿತ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ 710 ಕೋಟಿ ರೂಪಾಯಿಗಳ ಹುಟ್ಟುವಳಿ ಸಹಾಯಧನವನ್ನು ವಿತರಿಸಿತಲ್ಲದೆ, ಪ್ರವಾಹದಿಂದ ಹಾಳಾಗಿದ್ದ ರಸ್ತೆಗಳು, ಶಾಲೆಗಳು, ಅಂಗನವಾಡಿಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿಗಾಗಿ 423 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅಡಿಯಲ್ಲಿ 46,378 ಮಳೆ ನೀರು ಕೊಯ್ಲು ರಚನೆಗಳನ್ನು ನಿರ್ಮಿಸಿ, 1.88 ಲಕ್ಷ ಹೆಕ್ಟೇರ್ ಜಮೀನನ್ನು ಸಂರಕ್ಷಿತ ನೀರಾವರಿಯಡಿಯಲ್ಲಿ ತಂದು ಮಳೆಯಾಶ್ರಿತ ಪ್ರದೇಶದಲ್ಲಿನ 2.76 ಲಕ್ಷ ರೈತರಿಗೆ ಅನುಕೂಲ ಕಲ್ಪಿಸಿದೆ. ಹಾಗೂ ಪುನರ್ ರಚಿತ ಹವಾಮಾನ ಆಧಾರಿತ ಬೆಳೆ ವಿಮೆಯಡಿಯಲ್ಲಿ 2.4 ಲಕ್ಷ ಪ್ರಕರಣಗಳನ್ನು ದಾಖಲಿಸಿ 1.4 ಲಕ್ಷ ರೈತರಿಗೆ 311 ಕೋಟಿ ರೂಪಾಯಿಗಳ ಪೈಕಿ 296 ಕೋಟಿ ರೂಪಾಯಿಗಳ ಕ್ಲೇಮ್ ಅನ್ನು ಸಂಬಂಧಪಟ್ಟ ವಿಮಾ ಕಂಪನಿಗಳಿಂದ ಇತ್ಯರ್ಥಪಡಿಸಿದೆ. 32,878 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕಾ ಬೆಳೆಗಳ ಕ್ಷೇತ್ರವನ್ನು ವಿಸ್ತರಿಸಲು ಸರ್ಕಾರ ಕ್ರಮಕೈಗೊಂಡಿದೆ ಎಂದು ಹೇಳಿದರು.

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿದ ಅವರು ಕಲ್ಬುರ್ಗಿಯಲ್ಲಿ ಶ್ರೀ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ 300 ಹಾಸಿಗೆ ಸಾಮರ್ಥ್ಯವುಳ್ಳ ಆಸ್ಪತ್ರೆಯನ್ನು ನಿರ್ಮಿಸುವ ಕಾರ್ಯ ಆರಂಭಿಸಿರುವುದರಿಂದ ಆ ಭಾಗದ ಜನರಿಗೆ ಇದರಿಂದ ಅನುಕೂಲವಾಗಲಿದೆ ಎಂದರು.

2020–21 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 1,132 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಅಲ್ಲದೆ ಈ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ 300 ಕೋಟಿ ರೂಪಾಯಿಗಳ ಹಣಕಾಸು ನೆರವಿನೊಂದಿಗೆ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘವನ್ನು ಸ್ಥಾಪಿಸಲಾಗಿದೆ. ಈ ಪೈಕಿ 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು. ಇನ್ನು ಅಂತರರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಮತ್ತು ಪಾರಂಪರಿಕ ಕೇಂದ್ರವನ್ನಾಗಿ ಬಸವ ಕಲ್ಯಾಣದ ಅನುಭವ ಮಂಟಪವನ್ನು ಅಭಿವೃದ್ಧಿಗೊಳಿಸಲು 600 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು, ಈಗಾಗಲೇ 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಈಗಾಗಲೇ ಬೀದರ್ ವಿಮಾನ ನಿಲ್ದಾಣವು ಕಾರ್ಯಾರಂಭಗೊಂಡಿದ್ದು, 220 ಕೋಟಿ ರೂಪಾಯಿ ವೆಚ್ಚದಲ್ಲಿ ವಿಜಯಪುರ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಅನುಮೋದನೆ ನೀಡಿದೆ ಎಂದು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಗಾಗಿಯೂ ಸರ್ಕಾರವು ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದ್ದು, 17,863 ಕೋಟಿ ರೂಪಾಯಿಗಳನ್ನು ಪರಿಶಿಷ್ಟ ಜಾತಿ ಹಾಗೂ 7,754 ಕೋಟಿ ರೂಪಾಯಿಗಳನ್ನು ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ನೀಡಿದೆ. ಹಾಗೆಯೇ ವಿವಿಧ ನಿಗಮಗಳ ಮೂಲಕ 15,837 ಜನರಿಗೆ ವಿವಿಧ ಆರ್ಥಿಕ ಸೌಲಭ್ಯಗಳನ್ನು ಒದಗಿಸಲಾಗಿದೆ. ಭೂ ಒಡೆತನ ಯೋಜನೆಯಡಿಯಲ್ಲಿ 3,061 ಎಕರೆ ಭೂಮಿಯನ್ನು ಖರೀದಿಸಿ ಫಲಾನುಭವಿಗಳಿಗೆ ನೀಡಲಾಗಿದೆ.

ಸರ್ಕಾರವು ಮೂಲಭೂತ ಸೌಕರ್ಯವನ್ನು ಒದಗಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಯೋಜನೆಗಳ ಮೇಲೆ ತಮ್ಮ ಭಾಷಣದಲ್ಲಿ ಬೆಳಕು ಚೆಲ್ಲಿದ ರಾಜ್ಯಪಾಲರು, ಪ್ರಗತಿಯಲ್ಲಿರುವ ಸ್ಮಾರ್ಟ್ ಸಿಟಿ ಯೋಜನೆ, ಬಿಡದಿಯಲ್ಲಿ ರೂ 210 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುವ ತ್ಯಾಜ್ಯ ಇಂಧನ ಘಟಕ, ಜನವರಿ 16 ರಂದು ಪ್ರಾರಂಭಿಸಲಾದ ಪೊಲೀಸ್ ಗೃಹ–2025 ಯೋಜನೆ, ನಾವಿನ್ಯತೆಯನ್ನು ಸಂಯೋಜಿಸಲು ಮತ್ತು ಹೂಡಿಕೆಯನ್ನು ಉತ್ತೇಜಿಸುವುದಕ್ಕಾಗಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅನ್ನು ಆರಂಭಿಸಿರುವುದು, ಬೆಂಗಳೂರು ಟೆಕ್ ಶೃಂಗ ಸಭೆಯನ್ನು ಯಶಸ್ವಿಯಾಗಿ ಆಯೋಜಿಸಿರುವುದು, ಇವೇ ಮುಂತಾದ ಸರ್ಕಾರದ ಹಲವು ಉತ್ತಮ ಯೋಜನೆಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ, ಸರ್ಕಾರದ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಮತ್ತು ರಾಜ್ಯದ ಅಭಿವೃದ್ಧಿಗಾಗಿ ಸರ್ಕಾರವು **"ಹೊಸ ಕೈಗಾರಿಕಾ ನೀತಿ 2020–25", "ಹೊಸ ಮರಳು ನೀತಿ–2020", "ಹೊಸ ಪ್ರವಾಸೋದ್ಯಮ ನೀತಿ 2020–25"** ಇವೇ ಮುಂತಾದ ಹೊಸತು ನೀತಿ ರೂಪಿಸಿರುವುದನ್ನು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು.

ಈ ವರ್ಷ ಕೋವಿಡ್–19 ಸಂಕಷ್ಟವಿದ್ದರೂ, ವಾಣಿಜ್ಯ ತೆರಿಗೆಗಳ ಇಲಾಖೆಯು 30,467 ಕೋಟಿ ರೂಪಾಯಿಗಳ ತೆರಿಗೆಯನ್ನು ಸಂಗ್ರಹಿಸಿದ್ದರೆ, ಅಬಕಾರಿ ಇಲಾಖೆಯು 16,788 ಕೋಟಿ ರೂಪಾಯಿಗಳ ರಾಜಸ್ವವನ್ನು ಸಂಗ್ರಹಿಸಿದೆ. ಇದರಿಂದ ರಾಜ್ಯದ ಅಭಿವೃದ್ಧಿ ಕಾಮಗಾರಿಗಳು ಸುಗಮವಾಗಿ ಮುಂದುವರೆಸಲು ಅನುಕೂಲವಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯವನ್ನು ಎಲ್ಲಾ ಕ್ಷೇತ್ರಗಳಲ್ಲೂ ದೇಶದಲ್ಲಿ ಮೊದಲನೇ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ತಮ್ಮ ವಿಚಾರ ವಿಮರ್ಶೆ ಮತ್ತು ಚರ್ಚೆಗಳ ಮೂಲಕ ಪ್ರಸ್ತುತ ಸಂಕಷ್ಟಗಳನ್ನು ಎದುರಿಸಲು ವಿನೂತನವಾದ ಕ್ರಮಗಳನ್ನು ಕೈಗೊಳ್ಳುವಂತೆ ಅವರು ಎಲ್ಲಾ ಸದಸ್ಯರನ್ನು ಕೋರುವ ಮೂಲಕ ತಮ್ಮ ಭಾಷಣವನ್ನು ಪೂರ್ಣಗೊಳಿಸಿದರು.



Download From : www.kpscvaani.com

ಮಾತು ಮಂಥನ

**ಮಾರ್ಚ್ 8 ರಂದು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ನಿಮಿತ್ತ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಲ್ಲಿ ಮಹಿಳೆಯರಿಗಾಗಿ ಏನೇನು ಯೋಜನೆಗಳಿವೆ, ಮತ್ತು ನಿಗಮದ ಅಧ್ಯಕ್ಷರಾದ ನಂತರ ಯಾವೆಲ್ಲಾ ಚಟುವಟಿಕೆಗಳನ್ನು ನಿಗಮದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ ಎಂಬುದನ್ನು ತಿಳಿಯಲು ನಿಗಮದ ಅಧ್ಯಕ್ಷರೊಂದಿಗೆ ಸಂದರ್ಶನ ನಡೆಸಲಾಗಿದೆ.**



# ಈ ನಿಗಮುವನ್ನು ನಿಮ್ಮ ತಾಯಿಮನಿ ಅಂದ್ಕೊಂಡ್ ಬರ್ರೀ

ಚಂದ್ರಮುಖಿ

**ಈ ನಿಗಮುವನ್ನು ನಿಮ್ಮ ತಾಯಿಮನಿ ಅಂದ್ಕೊಂಡ್ ಬರ್ರೀ ಎಂದು ಹೇಳಿರುವವರು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಶಿಕಲಾ ಎ. ಟೆಂಗಳಿ ಅವರು.**

ಗುಲ್ಬರ್ಗ ಜಿಲ್ಲೆಯ ಶಹಬಾದ್ ಸಮೀಪದ ಕೆ. ಗೋಳಾ ಎಂಬ ಪುಟ್ಟ ಹಳ್ಳಿಯ ಸಾಮಾನ್ಯ ರೈತ ಕುಟುಂಬದ ಹಿನ್ನೆಲೆಯಿಂದ ಬಂದ ಶಶಿಕಲಾ ಎ. ಟೆಂಗಳಿ ಅವರು ಈಗ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷರು. ರಾಜ್ಯ ಮಟ್ಟದಲ್ಲಿ ಬಹುದೊಡ್ಡ ಜವಾಬ್ದಾರಿ. ಕ್ಯಾಬಿನೆಟ್ ದರ್ಜೆ ಸ್ಥಾನಮಾನವನ್ನು ಹೊಂದಿರುವ ಟೆಂಗಳಿ ಅವರು ಕಳೆದ ಒಂದು ವರ್ಷದ ಅವಧಿಯಲ್ಲಿ ಮಹಿಳೆಯರ ಅದರಲ್ಲೂ ಮುಖ್ಯವಾಗಿ ದಮನಿತರ ದನಿಯನ್ನು ಆಲಿಸುವ ಹಾಗೂ ಅವರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈಗಾಗಲೇ 22 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಮಹಿಳೆಯರ ಅಹವಾಲುಗಳಿಗೆ ಕಿವಿಯಾಗಿರುವ ಟೆಂಗಳಿ ಅವರೊಂದಿಗೆ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ:

**ಸುಮಾರು ಮೂರೂವರೆ ದಶಕದ ಇತಿಹಾಸ ಇರುವ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಈವರೆಗೆ ಹೈದರಾಬಾದ್ ಕರ್ನಾಟಕ ಭಾಗದ ಮಹಿಳೆಯ ನೇಮಕವಾಗಿಲ್ಲ. ಇಂತಹ ಒಂದು ಅವಕಾಶವನ್ನು ಹೇಗೆ ಸದುಪಯೋಗ ಮಾಡಿಕೊಳ್ಳಬಲ್ಲಿರಿ?**

ನಿಜ. 1987ರಿಂದ ಈವರೆಗೆ ಹೈದರಾಬಾದ್ ಕರ್ನಾಟಕ ಭಾಗದ ಯಾರೂ ಅಧ್ಯಕ್ಷರಾಗಿಲ್ಲ. ಹೋಗಲಿ ಬಳ್ಳಾರಿ ಭಾಗದವರೂ ಆಗಿಲ್ಲ. ಈಗ ನನಗೆ ದೊರಕಿರುವ ಉತ್ತಮ ಅವಕಾಶವಿದು. ಈ ರಾಜ್ಯದ ಎಲ್ಲ ಭಾಗಗಳಿಗೆ ಪ್ರವಾಸ ಕೈಗೊಂಡು ದಮನಿತ, ತಳ ಸಮುದಾಯದ ಮಹಿಳೆಯರ ಅಹವಾಲುಗಳನ್ನು ಕೇಳಬೇಕು ಎಂದು ಆವತ್ತೇ ನಿರ್ಧಾರ ಮಾಡಿದೆ. ನಿಗಮದಿಂದ ಸಾಧ್ಯವಾದಷ್ಟು ಮಹಿಳೆಯರಿಗೆ ಆಸರೆಯಾಗಿ ನಿಲ್ಲುವ ಕೆಲಸ ಮಾಡಬೇಕು ಎಂಬ ಸಂಕಲ್ಪ ಮಾಡಿದೆ. ಅಂತಹ ಯೋಚನೆಯ ಫಲವಾಗಿ ಕಳೆದ ಒಂದೇ ವರ್ಷದಲ್ಲಿ ರಾಜ್ಯದ 22 ಜಿಲ್ಲೆಗಳಿಗೆ ಪ್ರವಾಸ ಮಾಡಿದ್ದೇನೆ.



Download From : www.kpscvaani.com

ಕಾರ್ಯಾಗಾರ ಮಾಡಿದ್ದೇನೆ, ಸಂವಾದ ನಡೆಸಿದ್ದೇನೆ. ಅಸಹಾಯಕ ಸ್ಥಿತಿಯಲ್ಲಿದ್ದ ಸಾವಿರಾರು ಮಹಿಳೆಯರನ್ನು ಕಂಡು ಅವರ ಕಣ್ಣೀರು ಒರೆಸುವ ಪ್ರಯತ್ನದಲ್ಲಿ ತೊಡಗಿಸಿಕೊಂಡಿದ್ದೇನೆ.

**ಎಲ್ಲಕ್ಕಿಂತ ಮುಖ್ಯವಾಗಿ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಮಹಿಳೆಯರ ಪರಿಸ್ಥಿತಿ ಎಷ್ಟು ಭಿನ್ನವಾಗಿದೆ ಎಂದು ನಿಮಗೆ ಅನಿಸುತ್ತದೆ?**

ನಿಜಕ್ಕೂ ತುಂಬಾ ಶೋಚನೀಯವಾಗಿದೆ. ಈ ಒಂದು ವರ್ಷದಲ್ಲಿ ಅದನ್ನು ನಾನು ಕಣ್ಣಾರೆ ಕಂಡಿದ್ದೇನೆ. ನಿಗಮದ ಅಧ್ಯಕ್ಷೆಯಾದ ತಕ್ಷಣ ಕಡತಗಳನ್ನು ತೆಗೆದು ನೋಡಿದೆ. ನಮ್ಮ ವ್ಯಾಪ್ತಿಗೆ ಬರುವ ದೇವದಾಸಿ ಮಹಿಳೆಯರು, ದಮನಿತ ಮಹಿಳೆಯರು, ಲಿಂಗತ್ವ ಮಹಿಳೆಯರ ಬಹುದೊಡ್ಡ ಸಮುದಾಯವೇ ಇರುವುದು ಗಮನಕ್ಕೆ ಬಂತು. ಮೊದಲು ನಾನು ಗಮನ ಹರಿಸಿದ್ದು ದೇವದಾಸಿ ಮಹಿಳೆಯರ ಬಗ್ಗೆ. ಸುಮಾರು 14 ಜಿಲ್ಲೆಗಳಲ್ಲಿ ಸದ್ಯ ಇಂತಹ 29 ಸಾವಿರಕ್ಕೂ ಅಧಿಕ ಮಹಿಳೆಯರಿದ್ದಾರೆ. ಅವರ ಪರಿಸ್ಥಿತಿ ನಿಜಕ್ಕೂ ಶೋಚನೀಯವಾಗಿದೆ. ಅವರ ಮುಂದಿನ ತಲೆಮಾರು ಅಭಿವೃದ್ಧಿಯತ್ತ ಸಾಗಬೇಕು ಎಂಬ ಕಾರಣಕ್ಕೆ ಹೊಸ ಯೋಜನೆಯನ್ನು ಆರಂಭಿಸಿದ್ದೇನೆ. ದೇವದಾಸಿಯರ ಮಕ್ಕಳಿಗೆ ಹೊಲಿಗೆ, ಕಂಪ್ಯೂಟರ್ ತರಬೇತಿ ನೀಡುವ ಕೆಲಸ ಈಗಾಗಲೇ ಆರಂಭವಾಗಿದೆ. ಈ ಮಕ್ಕಳು ಕೈಲಾಗದೇ ಕುಂತಿರುವ ಅವ್ವಂದಿರ ನೆರವಿಗೆ ಬರಬೇಕು ಎಂಬುದು ನಮ್ಮ ಕಾಳಜಿಯಾಗಿದೆ. ಅದು ಈಗ ಸಾಧ್ಯವಾಗುತ್ತಿದೆ. ಮೂರು ಜಿಲ್ಲೆಗಳಲ್ಲಿ ಅದು ಕಾರ್ಯರೂಪಕ್ಕೆ ಬಂದಿದೆ. ಕೊಪ್ಪಳದಲ್ಲಿಯೂ ಚಾಲನೆ ಕೊಟ್ಟಿದ್ದೇನೆ.

**ಅದೇ ರೀತಿ ದಮನಿತ ಮಹಿಳೆಯರು, ಲೈಂಗಿಕ ಕಾರ್ಯಕರ್ತರು, ಹೆಚ್ಐವಿ ಪೀಡಿತ ಮಹಿಳೆಯರು ಕೂಡ ಸಾಕಷ್ಟು ಸಂಖ್ಯೆಯಲ್ಲಿದ್ದು ಅಸಹಾಯಕ ಸ್ಥಿತಿಯಲ್ಲಿದ್ದಾರೆ ಅಲ್ಲವೆ?**

ಹೌದು, ರಾಜ್ಯದಲ್ಲಿ ಸುಮಾರು 89 ಸಾವಿರ ಲೈಂಗಿಕ ಕಾರ್ಯಕರ್ತರಿದ್ದಾರೆ ಎಂದರೆ ನೀವು ನಂಬಲಾರಿರಿ. ಹೆಚ್ಐವಿ ಪೀಡಿತರ ಸಂಖ್ಯೆ 81,000. ಇದನ್ನು ಕೇಳಿದರೇ ಮೈ ಜುಂ ಅನ್ನುತ್ತೆ ನಂಗೆ. ಕೊಪ್ಪಳ, ರಾಯಚೂರು, ಬಳ್ಳಾರಿ ಸೇರಿ ಅನೇಕ ಜಿಲ್ಲೆಗಳಲ್ಲಿ 2-3ಸಾವಿರ ತನಕ ಇವರ ಸಂಖ್ಯೆ ಇದೆ. ಇವರನ್ನೆಲ್ಲ ನೋಡಿದಾಗ ಇಡೀ ಜೀವನ ಅವರು ಇದನ್ನೇ ಮಾಡಬೇಕಾ ಎಂಬ ಚಿಂತೆ ಕಾಡಿತು. ಬದಲಾದ ಭಾರತದಲ್ಲಿ ನಾವಿದ್ದೇವೆ, ಹೆಚ್ಚು ಹೆಚ್ಚು ಶಿಕ್ಷಿತರಾಗಿದ್ದೇವೆ. ಹೆಚ್ಚು ಸೌಕರ್ಯಗಳು ಸಿಗುತ್ತಿವೆ. ಅಂಥದ್ದರಲ್ಲಿ ಇವರು ಈ ಸ್ಥಿತಿಯಲ್ಲಿ ಇರಬೇಕಾ ಎಂಬ ಯೋಚನೆ ನನ್ನದು. ಅವರೆಲ್ಲರ ಮನಪರಿವರ್ತನೆ ಮಾಡುವ ಕೆಲಸ ಆಗಬೇಕಾಗಿದೆ. ರಾಜ್ಯದಾದ್ಯಂತ ಸಂವಾದ ಕಾರ್ಯಕ್ರಮ ಮಾಡುವ ಮೂಲಕ ಅದನ್ನು ಕಾರ್ಯರೂಪಕ್ಕೆ ತರುತ್ತಿದ್ದೇನೆ.



## ಬಳ್ಳಾರಿ ಜಿಲ್ಲೆಯಲ್ಲಿ ದೇವದಾಸಿಯರ ಚಿಕ್ಕಿ ಘಟಕ

ಈ ಹಿಂದೆ ದೇವದಾಸಿ ವೃತ್ತಿಯಲ್ಲಿ ತೊಡಗಿದ್ದ ಮಹಿಳೆಯರು ಸ್ವಾವಲಂಬನೆಯಿಂದ ಬದುಕಬೇಕು ಎಂಬ ಕಾರಣಕ್ಕೆ ಮಹಿಳಾ ಅಭಿವೃದ್ಧಿ ನಿಗಮ ಅವರಿಗೆ ಬೆಂಬಲವಾಗಿ ನಿಂತಿದೆ. ಇದರ ಪರಿಣಾಮವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಈಗ ಮಾಜಿ ದೇವದಾಸಿ ಮಹಿಳೆಯರೇ ಸೇರಿಕೊಂಡು ಬೃಹತ್ ಚಿಕ್ಕಿ ಘಟಕ (ಶೇಂಗಾ ಮಿಠಾಯಿ ಘಟಕ)ವನ್ನು ಆರಂಭಿಸಿದ್ದಾರೆ. ಅದಕ್ಕಾಗಿ ನಿಗಮದ ವತಿಯಿಂದ ಹದಿನೈದು ಲಕ್ಷ ರೂ. ಸಾಲ ಸವಲತ್ತು ನೀಡಲಾಗಿದೆ. ಇದರಲ್ಲಿ 7.5 ಲಕ್ಷ ಸಾಲ ಮತ್ತು 7.5 ಲಕ್ಷ ಸಹಾಯಧನ. ಈ ಚಿಕ್ಕಿ ಘಟಕ ಈಗ ದಿನದಿಂದ ದಿನಕ್ಕೆ ಯಶಸ್ವಿನತ್ತ ಸಾಗುತ್ತಿದೆ. ಉತ್ಪಾದನೆಯೂ ಜೋರಾಗಿದೆ. ಮಾಜಿ ದೇವದಾಸಿ ಮಹಿಳೆಯರೇ ಸೇರಿಕೊಂಡು ನಿರ್ವಹಿಸುವ ಈ ಘಟಕ ವಿಸ್ತಾರವಾಗುತ್ತ ಸಾಗಿದೆ.

ಇಲ್ಲಿ ತಯಾರಾದ ಶೇಂಗಾ ಚಿಕ್ಕಿಯನ್ನು ಅಂಗನವಾಡಿ ಕೇಂದ್ರದಲ್ಲಿ ಮಾರಾಟ ಮಾಡುವ ವ್ಯವಸ್ಥೆಯೂ ಆಗಿದೆ. ಅದಕ್ಕೆ ಅಲ್ಲಿನ ಜಿಲ್ಲಾಡಳಿತ, ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳು ಪೂರ್ಣ ಸಹಕಾರ ನೀಡುತ್ತಿದ್ದಾರೆ ಎಂದು ನಿಗಮದ ಅಧ್ಯಕ್ಷೆ ಶಶಿಕಲಾ ಟೆಂಗಳಿ ಹೆಮ್ಮೆಯಿಂದ ತಿಳಿಸುತ್ತಾರೆ.

ಇಷ್ಟು ಮಾತ್ರವಲ್ಲದೆ ಬಳ್ಳಾರಿಯಲ್ಲಿ ದೇವದಾಸಿ ಮಹಿಳೆಯರೇ ಅಗರಬತ್ತಿ ಘಟಕವನ್ನು ನಡೆಸುತ್ತಿದ್ದಾರೆ. ಈ ಘಟಕಕ್ಕೂ ಹದಿನೈದು ಲಕ್ಷ ಬಜೆಟ್. ಅಂದರೆ ಎರಡೂ ಘಟಕವನ್ನು ಹದಿನೈದು ಮಂದಿ ಮಹಿಳೆಯರು ಸೇರಿಕೊಂಡು ಮಾಡುತ್ತಾರೆ. ಪ್ರತಿಯೊಬ್ಬರಿಗೂ ಒಂದೊಂದು ಲಕ್ಷ ಸಾಲ ದೊರೆಯುತ್ತದೆ. ಅದರಲ್ಲಿ 50,000 ಸಬ್ಸಿಡಿ ಎಂದು ಅವರು ವಿವರಿಸಿದರು.



Download From : www.kpscvaani.com

## ಅನುಕಂಪ ಬೇಡ, ಅವಕಾಶ ಬೇಕು!

ದಾವಣಗೆರೆಯಲ್ಲಿ ನಿಗಮದ ವತಿಯಿಂದ ಒಂದು ಸಂವಾದ ಕಾರ್ಯಕ್ರಮ ಏರ್ಪಡಿಸಿದ್ದೆವು. ಅಲ್ಲಿ ಮಾಜಿ ದೇವದಾಸಿ ಮಹಿಳೆಯೊಬ್ಬಾಕೆ ಎದ್ದು ನಿಂತು ಕಣ್ಣೀರು ಹಾಕುತ್ತಾ, "ನಾನೂ ನನ್ನ ಮಗನೂ ಈಗ ಜೀವನ ಮಾಡುತ್ತಿದ್ದೇವೆ. ಆದರೆ ಮಗ ನನ್ನ ತಂದೆ ಯಾರು ಎಂದು ಕೇಳಿದರೆ ಹೇಳಲಾರದ ಪರಿಸ್ಥಿತಿಯಲ್ಲಿ ನಾನಿದ್ದೇನೆ. ಇದು ಯಾರಿಗೂ ಬರಬಾರದು. ನನಗೆ ಅನುಕಂಪ ಬೇಡ. ಅವಕಾಶ ಬೇಕು. ಅದಕ್ಕೆ ಮಹಿಳಾ ಅಭಿವೃದ್ಧಿ ನಿಗಮ ಬೆಂಬಲವಾಗಿ ನಿಂತಿದೆ. ಈಗ ಮಗನಿಗೆ ಹೆಚ್ಚಿನ ಶಿಕ್ಷಣ ನೀಡಬೇಕು ಎನ್ನುವ ಕನಸನ್ನು ಈಡೇರಿಸುವ ದಾರಿಯಲ್ಲಿ ನಾನಿದ್ದೇನೆ" ಎಂದು ಹೇಳಿದರು. ನಿಗಮ ಹೀಗೆ ಮಹಿಳೆಯರಿಗೆ ನೆರವಾಗುವ ಅವರ ಕೈಹಿಡಿದು ನಡೆಸುವ ಕೆಲಸ ಮಾಡಬೇಕಾಗಿದೆ ಎಂದು ಟೆಂಗಳೆ ಅವರು ತಿಳಿಸಿದರು.

ಮಾಜಿ ದೇವದಾಸಿ ಮಹಿಳೆಯರನ್ನು ಮದುವೆಯಾಗಲು ಮುಂದೆ ಬರುವವರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಮೂರು ಲಕ್ಷ ಸಹಾಯಧನವನ್ನೂ ನೀಡಲಾಗುತ್ತಿದೆ. ಇತ್ತೀಚೆಗಷ್ಟೇ ಜಾರಿಗೆ ಬಂದಿರುವ ಈ ಸೌಲಭ್ಯವನ್ನು ಕೆಲವರು ಬಳಸಿಕೊಂಡಿದ್ದಾರೆ ಕೂಡ.

"ಕೊರೊನಾ ಸಂದರ್ಭದಲ್ಲಿ ಎಷ್ಟೊಂದು ಜನರಿಗೆ ತೊಂದರೆಯಾಗಿದೆ. ಆದರೆ ನಿಜಕ್ಕೂ ಬಹಳಷ್ಟು ತಾಯಂದಿರಿಗೆ ತೊಂದರೆಯಾಗಿದೆ. ಗಂಡ ಕೆಲಸ ಇಲ್ಲದೆ ಕುಂತಾನ, ಮಕ್ಕು ಶಾಲೆ ಬಿಟ್ ಕುಂತಾವಾ. ಮನೆಯಲ್ಲಿ ಯಾವುದೇ ಉತ್ಪಾದನೆ ಇಲ್ಲ, ತರಕಾರಿ ಮಾರಲು ಹೋದಾಕಿಗೂ ವ್ಯಾಪಾರ ಇಲ್ಲ. ಈ ಅವಧಿಯಲ್ಲಿ ಸಮೃದ್ಧಿ ಯೋಜನೆ ಅಡಿಯಲ್ಲಿ 24172 ಮಹಿಳೆಯರಿಗೆ ತಲಾ 10,000 ರೂ. ಅನ್ನು ನೇರವಾಗಿ ಅವರ ಖಾತೆಗೇ ಹಾಕಿದ್ದೇವೆ."

"ಬಳ್ಳಾರಿ ಜಿಲ್ಲೆಯಲ್ಲಿ ಒಬ್ಬಾಕಿ ಹುಲ್ಲಿನ ಬಣವೆ ಹಾಕ್ಕೊಂಡು ಬಹಳ ಕಾಲದಿಂದ ಜೀವನ ಮಾಡ್ತಿದ್ದಾಳೆ. ಆಕಿಗೆ ನಿಗಮದಿಂದ ಒಂದು ರೊಟ್ಟಿ ಮಾಡುವ ಯಂತ್ರ ಕೊಡ್ಸಿದ್ದೀವಿ. ಆಕಿ ಅದರಲ್ಲೇ ಜೀವನ ಮಾಡುತ್ತಾ ತನ್ನ ಇಬ್ಬರು ಮಕ್ಕಳನ್ನು ಎಂಜಿನಿಯರಿಂಗ್ ಓದ್ಸಲಿಕ್ ಹತ್ತಾಳ. ಇದಕ್ಕಿಂತ ಶ್ರೇಷ್ಠ ಇನ್ನೇನಿದೆ.

ಮಹಿಳಾ ಅಭಿವೃದ್ಧಿ ನಿಗಮ ಸಮರ್ಪಕವಾಗಿ ಕಾರ್ಯನಿರ್ವಹಣೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದಿಂದ ಮುಖ್ಯಮಂತ್ರಿ ರತ್ನ ಪ್ರಶಸ್ತಿಯನ್ನು ಕೂಡ ಪಡೆದುಕೊಂಡಿದೆ. ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಕೊಟ್ಟರೆ ರಾಜ್ಯಾದ್ಯಂತ ಮಹಿಳೆಯರಿಗೆ ತರಬೇತಿ ಕೇಂದ್ರಗಳನ್ನು ಇನ್ನಷ್ಟು ಸಂಖ್ಯೆಯಲ್ಲಿ ಮಾಡಿ ಮಹಿಳೆಯರನ್ನು ಸಬಲರನ್ನಾಗಿ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ಶಶಿಕಲಾ ಎ. ಟೆಂಗಳಿ ಅವರು ಹೇಳುತ್ತಾರೆ. ಅವರ ಆಶಯದಂತೆ ನಿಗಮಕ್ಕೆ ಹೆಚ್ಚಿನ ಅನುದಾನ ದೊರಕಿ, ಇನ್ನೂ ಹೆಚ್ಚಿನ ಮಹಿಳೆಯರಿಗೆ ನಿಗಮದಿಂದ ಅನುಕೂಲವಾಗಲಿ.

**ರಾಜ್ಯದ ಬಹುತೇಕ ಭಾಗಗಳಲ್ಲಿ ದೇವದಾಸಿಯರಿಗೆ ಸೂಕ್ತವಾದ ಆಸರೆ, ಆಶ್ರಯವಿಲ್ಲ. ಅವರಿಗೊಂದು ಸೂರು ಕಲ್ಪಿಸುವ ಕೆಲಸ?**

ಈಗ ಅದನ್ನೂ ಕೈಗೆತ್ತಿಕೊಂಡಿದ್ದೇವೆ. ರಾಯಚೂರು, ಬಳ್ಳಾರಿ ಮುಂತಾದ ಕಡೆ ಅವರಿಗೆ ವಸತಿ ವ್ಯವಸ್ಥೆ ಮಾಡಲು ಭೂಮಿ ಖರೀದಿ ಮಾಡಿದ್ದೇವೆ. ಒಟ್ಟು 13 ಎಕರೆ ಜಮೀನು ಖರೀದಿ ಆಗಿದೆ. ಅದು ನಿಗಮದಿಂದ ಆಗಿರುವುದಲ್ಲ. ಆಯಾ ಜಿಲ್ಲಾಡಳಿತ ಖರೀದಿ ಮಾಡಿದೆ. ಆ ಯೋಜನೆಗೆ ನಿಗಮ ಬೆಂಬಲವಾಗಿ ನಿಂತಿದೆ. ಅಲ್ಲಿ ಬೆಟ್ಟ-ಗುಡ್ಡಗಳನ್ನು ನೆಲಸಮ ಮಾಡಿ ಮುಂದಿನ ಯೋಜನೆಯನ್ನು ರೂಪಿಸುತ್ತಿದ್ದೇವೆ. ನಿಗಮದಿಂದಲೂ ಬಜೆಟ್ ನೀಡಿದ್ದೇವೆ. ಎಲ್ಲಿ ದೇವದಾಸಿಯರ ಸಂಖ್ಯೆ ಹೆಚ್ಚಿದೆಯೋ ಅಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿದ್ದೇವೆ. ಅಲ್ಲಿ ಅವರಿಗೆಲ್ಲ ಮನೆಗಳನ್ನು ಕಟ್ಟಿಕೊಡಲಿದ್ದೇವೆ. ದೇವದಾಸಿ ಮಹಿಳೆಯರು ಸ್ವ-ಉದ್ಯೋಗ ಕೈಗೊಳ್ಳಲು ಒಂದು ಲಕ್ಷ ಸಾಲ ಕೊಡುತ್ತಿದ್ದೇವೆ. ಅದರಲ್ಲಿ 50,000 ರೂ ಸಹಾಯಧನ. ಇದಕ್ಕೆ ಯಾವುದೇ ಬಡ್ಡಿ ಇರುವುದಿಲ್ಲ. ಒಂದೆಲ್ಲಾ ಐದು-ಹತ್ತು ಸಾವಿರ ರೂ ಸಾಲ ಕೊಡಲಾಗುತ್ತಿತ್ತು. ಅವು ಅವರಿಗೆ ಸಾಕಾಗುತ್ತಿರಲಿಲ್ಲ. ಈಗ ಆ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಿದ್ದೇವೆ.

**ಲಿಂಗತ್ವ ಅಲ್ಪಸಂಖ್ಯಾತರು ಕೂಡ ಭಿಕ್ಷೆ ಬೇಡಿ ಜೀವನ ನಿರ್ವಹಣೆ ಮಾಡುವುದು ತಪ್ಪಬೇಕು.**

ಬೆಂಗಳೂರಿನ ಅನೇಕ ಕಡೆಗಳಲ್ಲಿ ಲಿಂಗತ್ವ ಮಹಿಳೆಯರು ಸಿಗ್ನಲ್‌ಗಳಲ್ಲಿ ಭಿಕ್ಷೆ ಬೇಡುತ್ತ ಹೊಟ್ಟೆ ತುಂಬಿಕೊಳ್ಳುತ್ತಿರುವುದು ನೋಡಿ ಹೊಟ್ಟೆ ಚುರ್ ಅನ್ನುತ್ತದೆ. ಅವರನ್ನು ಸ್ವಾವಲಂಬಿಯಾಗಿ ಮಾಡುವ ಕಾರ್ಯವನ್ನೂ ನಿಗಮ ಕೈಗೆತ್ತಿಕೊಂಡಿದೆ. ಹೊಸಪೇಟೆಯಲ್ಲಿ ಮಣ್ಣಿನ ಘಟಕವನ್ನು ಹದಿನೈದು ಮಂದಿ ಲಿಂಗತ್ವ ಮಹಿಳೆಯರೇ ಆರಂಭ ಮಾಡಿದ್ದಾರೆ. ಅವರಿಗೆ ನಿಗಮದಿಂದ ಹದಿನೈದು ಲಕ್ಷ ಸಾಲ ನೀಡಲಾಗಿದೆ. ಇವರಿಗೂ ಶೇ.50ರಷ್ಟು ಸಬ್ಸಿಡಿ ಸಿಗುತ್ತಿದೆ. ಅವರೊಂದಿಗೆ ಸದಾ ಸಂಪರ್ಕದಲ್ಲಿದ್ದೇವೆ. ಅದು ನಿಜಕ್ಕೂ ಯಶಸ್ವಿಯಾಗಿ ನಡೆಯುತ್ತಿದೆ. ಅವರೂ ಈಗ ಖುಷಿಯಿಂದ ಬದುಕು ನಡೆಸುತ್ತಿದ್ದಾರೆ, ಯಾವುದೇ ಭಿಕ್ಷೆ ಬೇಡದೆ ಬಿಜಾಪುರ, ಬಾಗಲಕೋಟೆಯಲ್ಲಿಯೂ ಕುರಿ, ಕೋಳಿ ಸಾಕಾಣಿಕೆಗೂ ಅವರಿಗೆ ಸಹಾಯ ಮಾಡುತ್ತಿದ್ದೇವೆ. ಕುರಿ ಸಾಕಾಣಿಕೆ ಮಾಡಲು ಬೇಕಾದ ಬೇಲಿ ರೆಡಿ ಮಾಡಲೂ ಸಾಲ ಕೊಟ್ಟಿದ್ದೇವೆ. ಲಿಂಗತ್ವ ಮಹಿಳೆಯರು ಈಗ ಜೀವನ ನಡೆಸುವ ದಾರಿ ಬದಲಾಗುತ್ತಿರುವುದು ಖುಷಿಯ ಸಂಗತಿ. ಕೆಲವರು ಡಾಬಾ ನಡೆಸುತ್ತಿದ್ದಾರೆ, ಬಟ್ಟೆ ಅಂಗಡಿ, ಇಸ್ತ್ರಿ ಅಂಗಡಿ ಮಾಡಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಇವರೆಲ್ಲಾ ಸೇರಿ ಹೈನುಗಾರಿಕೆ ಮಾಡುತ್ತಿದ್ದಾರೆ. ಅಲ್ಲಿಗೆ ಭೇಟಿ ನೀಡಿದ್ದೇನೆ. ಅಲ್ಲಿಯ ಜಿಲ್ಲಾಡಳಿತ ಅವರಿಗೆ ಹುಲ್ಲು ಬೆಳೆಯುವ ಸಲುವಾಗಿ ಎರಡು ಎಕರೆ ಜಮೀನು ನೀಡಿದೆ.



Download From : www.kpscvaani.com





**ಹೀಗೆ ನಾನಾ ಜಿಲ್ಲೆಗಳಿಗೆ ಭೇಟಿ ನೀಡಿದಾಗ ನಿಮ್ಮ ಅನುಭವಕ್ಕೆ ಬಂದ ಮನ ಕಲಕುವಂತಹ ಸನ್ನಿವೇಶ?**

ತುಮಕೂರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಇಂತಹ ಒಂದು ಸನ್ನಿವೇಶಕ್ಕೆ ನಾನು ಸಾಕ್ಷಿಯಾದೆ. ಆಕೆ ಲೈಂಗಿಕ ಕಾರ್ಯಕರ್ತೆ, ಹೆಚ್‌ಐವಿ ಪೀಡಿತೆ. ಆಕೆಯನ್ನು ಊರಿನಿಂದ ಎಷ್ಟೋ ದೂರ ಇಟ್ಟಿದ್ದಾರೆ. ಆಕೆಯನ್ನು ಕಾಣುವ ಸಲುವಾಗಿ ನಾವು ಬಹಳಷ್ಟು ದೂರ ಹೊಲಗಳನ್ನೆಲ್ಲ ದಾಟಿ ಹೋದೆವು. ಅಷ್ಟು ದೂರದಲ್ಲಿ ಒಬ್ಬಾಕಿನೇ ಜೀವನ ಮಾಡುತ್ತಿದ್ದಾಳೆ. ಆಕೆ ನಮ್ಮ ನಿಗಮದಿಂದ ಒಂದು ಲಕ್ಷ ರೂ. ಸಾಲ ತೆಗೆದುಕೊಂಡು ಪಗ್ ನಾಯಿಗಳ ಸಾಕಣೆ ಮಾಡಿ ಅವುಗಳನ್ನು ಮಾರಾಟ ಮಾಡಿಕೊಂಡು ಜೀವನ ಮಾಡುತ್ತಿದ್ದಾಳೆ. ಆಕೆಯ ಬಗ್ಗೆ ನಿಜಕ್ಕೂ ನನಗೆ ಹೆಮ್ಮೆ ಅನಿಸಿತು. ನನ್ನ ಮಟ್ಟಿಗೆ ಆಕೆಯದ್ದು ಯಶೋಗಾಥೆಯೇ ಆಗಿದೆ.

**ಹೆಚ್‌ಐವಿ ಪೀಡಿತರಿಗೆ ವೈದ್ಯಕೀಯ ಸವಲತ್ತುಗಳನ್ನು ಒದಗಿಸುವ ಬಗ್ಗೆ ನಿಗಮ ಯಾವ ಕ್ರಮಗಳನ್ನು ಕೈಗೊಂಡಿದೆ?**

ನಿಗಮದಿಂದ ಆ ಕೆಲಸವೂ ಆಗುತ್ತಿದೆ. ಅವರಿಗಾಗಿಯೇ ಜೀವನ ಜ್ಯೋತಿ ಎನ್ನುವ ಸಂಸ್ಥೆ ಇದೆ. ಅದು ಪ್ರತಿ ಜಿಲ್ಲೆಯಲ್ಲಿಯೂ ಕೆಲಸ ಮಾಡುತ್ತದೆ. ಹೆಚ್‌ಐವಿ ಪೀಡಿತ ಮಹಿಳೆಯರು ಜೀವನ ಜ್ಯೋತಿ ಸಂಸ್ಥೆಯ ಜೊತೆಗೇ ಇರುತ್ತಾರೆ. ಅಲ್ಲಿ ಅವರಿಗೆ ಬೇಕಾದ ವ್ಯವಸ್ಥೆಗಳನ್ನು ಮಾಡಲಾಗುತ್ತದೆ. ಅವರಿಗೂ ಯಾಕೆ ತರಬೇತಿ ಕೊಡಬಾರದು ಎಂಬ ಯೋಚನೆ ನನಗೆ ಬಂದು ಈಗ ಅದನ್ನು ಕಾರ್ಯರೂಪಕ್ಕೆ ತಂದಿದ್ದೇವೆ. 'ದಮನಿತ ಮಹಿಳೆಯರಿಗೆ ತರಬೇತಿ' ಎಂಬ ಕಾರ್ಯಕ್ರಮವನ್ನು ಆರಂಭಿಸಿದ್ದೇವೆ. ಕೌಶಲ್ಯ ತರಬೇತಿ ನೀಡಿ ಅವರನ್ನು ಗಟ್ಟಿಗೊಳಿಸುವ ಕೆಲಸ ಆಗುತ್ತಿದೆ. ಆ ಬಳಿಕ ಅವರು ಸಾಲಕ್ಕಾಗಿ ನಮ್ಮಲ್ಲಿಗೆ ಬರುತ್ತಾರೆ. ನಾನಾ ಜಿಲ್ಲೆಗಳಿಂದ ಈ ಬಗ್ಗೆ ಪ್ರಸ್ತಾವನೆಗಳನ್ನು ತರಿಸಿಕೊಂಡಿದ್ದೇನೆ.

**ಮಹಿಳೆಯರು ಉತ್ಪಾದನೆ ಮಾಡಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಕೆಲಸ?**

ಪ್ರತಿ ವರ್ಷ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ರಾಜ್ಯ ಮಟ್ಟದಲ್ಲಿ ಸ್ಟಾಲ್‌ಗಳನ್ನು ಹಾಕುತ್ತೇವೆ. ಅಲ್ಲಿ ರಾಜ್ಯದ ನಾನಾ ಕಡೆಯಿಂದ ಬರುವ ಮಹಿಳಾ ಉದ್ಯಮಿಗಳು, ಕರಕುಶಲಕರ್ಮಿಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬಹುದಾಗಿದೆ. ಜೊತೆಗೆ ಸವದತ್ತಿ ಎಲ್ಲಮ್ಮ ದೇವಸ್ಥಾನದ ಸಮೀಪ ಮಾರಾಟ ಮಳಿಗೆಯನ್ನು ತೆರೆಯುವ ಯೋಜನೆ ಇದೆ. ಅದಕ್ಕೆ ಹತ್ತು ಕೋಟಿ ರೂ. ಬಜೆಟ್ ಸಿದ್ಧಪಡಿಸಿದ್ದೇವೆ. ಈ ಯೋಜನೆ ಪೂರ್ಣಗೊಂಡರೆ ಮಹಿಳೆಯರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅನುಕೂಲವಾಗುತ್ತದೆ.

**ಈ ನಿಗಮವನ್ನು ಮಹಿಳಾ ಸ್ನೇಹಿಯಾಗಿ ಮಾಡಲು ನಿಮ್ಮ ಯೋಜನೆ, ಕನಸು ಏನು?**

ಈ ಪ್ರಶ್ನೆ ಕೇಳಿದಾಗ ಬಾಗಲಕೋಟೆಯ ಒಂದು ಘಟನೆ ನನಗೆ ನೆನಪಿಗೆ ಬರುತ್ತದೆ. ಅಲ್ಲೊಂದು ಹಳ್ಳಿಗೆ ಭೇಟಿ ಕೊಟ್ಟಾಗ ಅಲ್ಲಿಯ ಮಹಿಳೆಯರೆಲ್ಲ ಸೇರಿ, ಮನೆ ಮುಂದೆ ಸಾರಿಸಿ, ಗುಡಿಸಿ, ಸೆಗಣಿ ಹಾಕಿ ರಂಗೋಲಿ ಬರೆದು ನನ್ನನ್ನು ಮನೆಮಗಳಂತೆ ಸ್ವಾಗತಿಸಿದರು. ಅದನ್ನು ನೋಡಿ ನನಗೆ ಕಣ್ಣಲ್ಲಿ ನೀರು ಬಂತು. ಎಲ್ಲ ಸೇರಿ ಅದ್ದೂರಿಯಾಗಿ ಸನ್ಮಾನ ಮಾಡಿದರು. ಆಗ ಒಂದು ಮಾತು ಹೇಳಿದೆ. 'ಈ ನಿಗಮ ಎನ್ನುವುದು ನಿಮ್ಮ ತಾಯಿ ಮನಿ ಇದ್ದಂಗ. ನೀವು ಬರ್ರಿ, ಯಾವಾಗಾದರೂ ಬರ್ರೀ, ನಿಮಗಾಗಿ ನಾವಿದ್ದೇವೆ' ಎಂದು ಹೇಳಿದೆ. ಆ ಮಾತಿಗೆ ಈಗಲೂ ನಾನು ಬದ್ಧಳಿದ್ದೇನೆ. ಆ ನಿಟ್ಟಿನಲ್ಲಿಯೇ ಕೆಲಸ ಮಾಡುತ್ತೇನೆ. ಕಣ್ಣೀರು ಹಾಕ್ಕೊಂಡು ಬರುವ ಯಾವ ತಾಯಂದಿರಿಗೂ ನಾನು ಹಿಂದಕ್ಕೆ ಕಳಿಸುವುದಿಲ್ಲ. ಅವರ ಕಣ್ಣೀರು ಒರೆಸುವ ಕೆಲಸ ಮಾಡುತ್ತೇನೆ.

ಬಾಗಲಕೋಟೆ, ಬಿಜಾಪುರದಲ್ಲಿ ಹದಿಮೂರು ಮಂದಿ ಮಾಜಿ ದೇವದಾಸಿ ಮಹಿಳೆಯರು ಗ್ರಾಮ ಪಂಚಾಯ್ತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಮಸ್ಕಿಯಲ್ಲಿ ಲಿಂಗತ್ವ ಮಹಿಳೆ ಆಯ್ಕೆಯಾಗಿದ್ದಾಳೆ. ಇದಕ್ಕಿಂತ ಒಳ್ಳೆಯ ಸುದ್ದಿ, ಸಾಧನೆ ಏನಿದೆ? ಉಳಿದ ಮೂರು ವರ್ಷಗಳ ಅವಧಿಯಲ್ಲಿ ಪಾರದರ್ಶಕವಾಗಿ ಮಹಿಳೆಯರ ಎಲ್ಲ ಕಷ್ಟಕ್ಕೆ ಸ್ಪಂದಿಸುವ ಕೆಲಸ ಮಾಡುತ್ತೇನೆ. ಮಹಿಳಾ ಅಭಿವೃದ್ಧಿ ನಿಗಮಕ್ಕೆ ಸ್ವಂತ ಕಟ್ಟಡ ನಿರ್ಮಾಣ ಮಾಡಬೇಕು ಎಂಬ ಸಂಕಲ್ಪ ಹೊತ್ತಿದ್ದೇನೆ. ■



Download From : www.kpscvaani.com



# ಕಟ್ಟಕಡೆಯ ಮಹಿಳೆಗೂ ಆಸರೆ ಸಿಗಬೇಕು:

## ಇದು ನಿಗಮದ ಉದ್ದೇಶ

**ಈ ಸಮಾಜದ ತಳಸಮುದಾಯದ ಹಾಗೂ ಅಸಹಾಯಕ ಹೆಣ್ಣುಮಕ್ಕಳಿಗೆ ಊರುಗೋಲಾಗಿ ಕೆಲಸ ಮಾಡಲಿಕ್ಕೆ ಒಂದು ಸಂಸ್ಥೆ ಅಗತ್ಯವಿದೆ ಎಂಬುದನ್ನು ಮನಗಂಡು ಸ್ಥಾಪನೆಯಾಗಿದ್ದು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ.**

ಶುಭಾ ಮಂಜುನಾಥ್

ಮೂವತ್ತನಾಲ್ಕು ವರ್ಷಗಳ ಸುದೀರ್ಘ ಹಿನ್ನೆಲೆಯನ್ನು ಹೊಂದಿರುವ ನಿಗಮ ಲಕ್ಷಾಂತರ ಮಂದಿ ಮಹಿಳೆಯರನ್ನು ಆರ್ಥಿಕವಾಗಿ ಸಶಕ್ತಗೊಳಿಸುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ರಾಜ್ಯದ ಅನೇಕ ಭಾಗಗಳಲ್ಲಿ ಇನ್ನೂ ಕೂಡ ಸಾಕಷ್ಟು ಸಂಖ್ಯೆಯ ಮಹಿಳೆಯರು ಸದೃಢವಾದ ಬದುಕನ್ನು ಕಟ್ಟಿಕೊಳ್ಳಲು ನಿರಂತರ ಶ್ರಮಪಡುತ್ತಿದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಅಂತವರನ್ನು ಗುರುತಿಸಲು ಮತ್ತು ಅಂತಹ ಮಹಿಳೆಯರು ಎದುರು ನೋಡಬಹುದಾದ ಒಂದು ಸಂಸ್ಥೆ ರಾಜ್ಯದಲ್ಲಿ ಕೆಲಸ ಮಾಡುತ್ತಿದೆ ಎಂಬುದು ಮುಖ್ಯ.

ದೇವದಾಸಿ ಮಹಿಳೆಯರಿರಬಹುದು, ಲಿಂಗತ್ವ ಅಲ್ಪಸಂಖ್ಯಾತರು, ದಮನಿತ ಮಹಿಳೆಯರು, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಯಾವುದೇ ಮಧ್ಯವರ್ತಿಯ ಪ್ರಭಾವವಿಲ್ಲದೆ ಪಾರದರ್ಶಕ ರೀತಿಯಲ್ಲಿ ನಿಗಮದಿಂದ ಸಹಾಯ ಪಡೆದುಕೊಳ್ಳುವ ಕೆಲಸ ಆಗುತ್ತಿದೆ. ಒಬ್ಬ ಕಟ್ಟಕಡೆಯ ಮಹಿಳೆಗೂ ಸಹಾಯವಾಗಬೇಕು ಎಂಬ ಉದ್ದೇಶದಿಂದಲೇ ರೂಪುಗೊಂಡಿರುವ ನಿಗಮ ಆ ಕೆಲಸಗಳನ್ನು ಅನೂಚಾನವಾಗಿ ಮಾಡಿಕೊಂಡು ಬರುತ್ತಿದೆ. ಇಂತಹ ಕೆಲಸಗಳು ಯಾವುದು ಎಂಬುದರ ಕಡೆಗೊಂದು ದೃಷ್ಟಿ ಹಾಯಿಸೋಣ.

**ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು 1987ರಲ್ಲಿ ಕಂಪನಿಯ ಅಧಿನಿಯಮ 1956ರ ಅಡಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಸಮಾಜದ ದುರ್ಬಲ, ಶೋಷಿತ ಹಾಗೂ ಅಸಹಾಯಕ ಮಹಿಳೆಯರನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಸದೃಢರನ್ನಾಗಿಸುವ ನಿಟ್ಟಿನಲ್ಲಿ ನಿಗಮದ ವತಿಯಿಂದ ಮಹಿಳೆಯರಿಗೆ ವೈಯಕ್ತಿಕ ಸಾಲ ಯೋಜನೆ, ಸ್ವ-ಸಹಾಯ ಗುಂಪುಗಳಿಗೆ ಕಿರುಸಾಲ ಯೋಜನೆ, ವೃತ್ತಿಪರ ತರಬೇತಿಗಳನ್ನು ನೀಡಲಾಗುತ್ತಿದೆ.**



Download From : www.kpscvaani.com

ಮಹಿಳೆಯೊಬ್ಬಳು ದುಡಿದರೆ ಒಂದು ಸಂಸಾರ, ಒಂದು ಕುಟುಂಬ ಮಾತ್ರ ಬದಲಾವಣೆಯತ್ತ, ಶ್ರೇಯೋಭಿವೃದ್ಧಿಯತ್ತ ಸಾಗುವುದಿಲ್ಲ ಬದಲಾಗಿ, ಇಡೀ ಸಮಾಜ ಪರಿವರ್ತನೆಯತ್ತ ಮುನ್ನಡೆಯುತ್ತದೆ. ಆ ನಂಬಿಕೆಯಲ್ಲಿಯೇ ನಿಗಮ ಅನೇಕ ಯೋಜನೆಗಳನ್ನು ರೂಪಿಸಿದೆ ಮತ್ತು ಕಾರ್ಯರೂಪಕ್ಕೆ ತಂದಿದೆ.

### ಸುಪ್ತ ಪ್ರತಿಭೆ ಗುರುತಿಸುವ ಕಾರ್ಯ

ಮಹಿಳೆಯರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಗಟ್ಟಿಗೊಳಿಸುವುದು ಮಾತ್ರವಲ್ಲದೆ ಅವರಲ್ಲಿ ಅಡಗಿರುವ ಅನೇಕ ಕೌಶಲ್ಯಗಳಿಗೆ ನೀರೆರೆಯುವ ಕೆಲಸಗಳು ಆಗಬೇಕು. ಗ್ರಾಮ ಮಟ್ಟದಲ್ಲಿ ಅದರಲ್ಲೂ ಮುಖ್ಯವಾಗಿ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕದಂತಹ ಪ್ರದೇಶಗಳಲ್ಲಿ ಮಹಿಳೆಯರಲ್ಲಿ ಅನೇಕ ರೀತಿಯ ಕೌಶಲ್ಯಗಳು ಅಡಕವಾಗಿವೆ. ಅವುಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಪ್ರಯತ್ನ ನಿರಂತರವಾಗಿ ನಡೆಯಬೇಕಾಗಿದೆ. ಅದಕ್ಕಾಗಿ ನಿಗಮ ಕೌಶಲ್ಯಾಭಿವೃದ್ಧಿ ಯೋಜನೆಯನ್ನು ಹಾಕಿಕೊಂಡಿದೆ. ಇಂತಹ ಯೋಜನೆಯ ಮೂಲಕ ಮಹಿಳೆಯರಲ್ಲಿರುವ ಉದ್ಯಮಶೀಲತೆಯನ್ನು ಬೆಳೆಸಲಾಗುತ್ತದೆ. ಈ ನಿಟ್ಟಿನಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವವರಿಗೆ, ವಿಧವೆಯರಿಗೆ, ನಿರ್ಗತಿಕರಿಗೆ ಮತ್ತು ವಿಕಲಚೇತನರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಮಹಿಳೆಯರಿಗೆ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತದೆ. ಆ ಮೂಲಕ ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸಲಾಗುತದೆ.

ಕಿರು ಉದ್ಯಮ ನಡೆಸುವ ಆಕಾಂಕ್ಷೆಯನ್ನು ಹೊಂದಿರುವ ಸಾಕಷ್ಟು ಮಹಿಳೆಯರಿಗೆ ಅದಕ್ಕೆ ಬೇಕಾದ ಮಾಹಿತಿ ಲಭ್ಯವಿರುವುದಿಲ್ಲ. ಜೊತೆಗೆ ಅನೇಕ ಪ್ರಕ್ರಿಯೆಗಳನ್ನು ದಾಟಬೇಕಾದ ಅನಿವಾರ್ಯವಿರುತ್ತದೆ. ಯೋಜನಾ ವರದಿಗಳನ್ನು ಸಿದ್ಧಪಡಿಸುವುದು, ಸಾಮಾನ್ಯ ಲೆಕ್ಕಪತ್ರಗಳನ್ನು ನಿರ್ವಹಣೆ ಮಾಡುವುದು, ಕಚ್ಚಾ ಸಾಮಗ್ರಿಗಳ ಪೂರೈಕೆ, ಮಾರಾಟ ವ್ಯವಸ್ಥೆ ಮುಂತಾದ ವಿಷಯಗಳಲ್ಲಿ ಮಹಿಳೆಯರಿಗೆ ಸೂಕ್ತವಾದ ತರಬೇತಿಯನ್ನು ನೀಡಲಾಗುತ್ತದೆ. ಜೊತೆಗೆ ಆಹಾರ ಸಂಸ್ಕರಣೆ, ಬ್ಯಾಗ್ ತಯಾರಿಕೆ, ಕಸೂತಿ, ಬ್ಯೂಟಿ ಕಲ್ಚರ್, ಗಾರ್ಮೆಂಟ್ಸ್, ಪ್ರಿಂಟಿಂಗ್, ಫ್ಯಾಶನ್ ಡಿಸೈನಿಂಗ್‌ನಲ್ಲಿ ಮಾರ್ಗದರ್ಶನ ನೀಡಲಾಗುತ್ತಿದೆ.

**ಹೆಚ್‌ಐವಿ ಸೋಂಕಿತರಿಗೆ ಬೆಂಗಾವಲಾಗಿ ನಿಲ್ಲುವ ಕೆಲಸವನ್ನೂ ನಿಗಮ ಕಳೆದ ಐದು ವರ್ಷಗಳಿಂದಲೂ ಮಾಡಿಕೊಂಡು ಬರುತ್ತಿದೆ. 'ಧನಶ್ರೀ' ಎಂಬ ಹೆಸರಿನ ಈ ಯೋಜನೆ ಅಂತಹ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಂಡು ಅಭಿವೃದ್ಧಿ ಹೊಂದಲು ನೆರವಾಗುತ್ತದೆ.**

ಮಾತ್ರವಲ್ಲದೆ ಇತ್ತೀಚಿನ ದಿನಗಳಲ್ಲಿ ಟ್ರೆಂಡ್ ಆಗಿರುವ, ಮಹಿಳೆಯರಿಗೆ ಸ್ವಾವಲಂಬನೆಗೆ ದಾರಿಯಾಗಿರುವ ಮೀಡಿಯಾ, ವಿಡಿಯೋಗ್ರಫಿ ವಿಚಾರದಲ್ಲಿಯೂ ತರಬೇತಿ ಕೊಡಲಾಗುತ್ತಿದೆ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಗಳಲ್ಲಿ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳ ತಜ್ಞರು ತರಬೇತಿ ನೀಡುತ್ತಿರುವುದು ವಿಶೇಷ.

### ಸಾಮಾಜಿಕ ಭದ್ರತೆಗೆ ಆದ್ಯತೆ

ಹೆಚ್‌ಐವಿ ಸೋಂಕಿತ ಮಹಿಳೆಯರು, ಮಾಜಿ ದೇವಸಾಸಿಯರು, ಬೀದಿಬದಿ ಮಹಿಳಾ ವ್ಯಾಪಾರಿಗಳು ತಮಗೆ ಯಾರಾದರೂ ಸಹಾಯ ಮಾಡಲಿ ಎಂದು ಎದುರು ನೋಡುತ್ತಿರುತ್ತಾರೆ. ಅಂತಹ ಮಹಿಳೆಯರಿಗೆ ನೆರವಾಗುವ ಕೆಲಸವನ್ನು ನಿಗಮ ಮಾಡುತ್ತಿದೆ.

ನಲವತ್ತೈದು ವರ್ಷ ಮೀರಿದ ಮಾಜಿ ದೇವದಾಸಿಯರಿಗೆ ಮಾಶಾಸನವನ್ನು ನೀಡಲಾಗುತ್ತಿದೆ. 1500 ರೂ.ವನ್ನು ನೇರವಾಗಿ ಅವರ ಖಾತೆಗೇ ಜಮಾ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಇದರಿಂದ ಅವರಿಗೆ ಕನಿಷ್ಠ ಮಟ್ಟದ ಜೀವನವನ್ನಾದರೂ ನಡೆಸಲು ಸಹಕಾರಿಯಾಗುತ್ತದೆ.

ನಿವೇಶನ ಹೊಂದಿದ ಮಾಜಿ ದೇವದಾಸಿಯರು ಸ್ವಂತ ಸೂರು ಹೊಂದಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಯೋಜನೆ ರೂಪಿಸಲಾಗಿದೆ. ಅದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ 1.75 ಲಕ್ಷ ಮತ್ತು ನಗರ ಪ್ರದೇಶದಲ್ಲಿ 2 ಲಕ್ಷ ರೂ. ವೆಚ್ಚದಲ್ಲಿ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಮಾಜಿ ದೇವದಾಸಿ ಮಹಿಳೆಯರನ್ನು ಆರ್ಥಿಕವಾಗಿ ಸದೃಢಗೊಳಿಸುವ ಕೆಲಸವೂ ಚಾಲ್ತಿಯಲ್ಲಿದೆ. ಅವರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವ ಚಟುವಟಿಕೆಗೆ ಲಕ್ಷ ರೂ. ತನಕವೂ ನೆರವನ್ನು ಪಡೆದುಕೊಳ್ಳಬಹುದು. ಅದಕ್ಕಾಗಿ ಇಡಿಪಿ ತರಬೇತಿಯೂ ಲಭ್ಯ.

ದೇವದಾಸಿ ಪದ್ಧತಿಯನ್ನೇ ನಿರ್ಮೂಲನ ಮಾಡುವ ದೃಷ್ಟಿಯಿಂದ ಬೀದಿ ನಾಟಕ, ಜಾಗೃತಿ ಜಾಥಾ, ಕಾರ್ಯಾಗಾರದ ಮೂಲಕ ಅರಿವು ಮೂಡಿಸಲಾಗುತ್ತಿದೆ. ಜೊತೆಗೆ ಅವರ ಆರೋಗ್ಯದ ಬಗೆಗೂ ಕಾಳಜಿ ವಹಿಸಿರುವ ಮಹಿಳಾ ಅಭಿವೃದ್ಧಿ ನಿಗಮವು ಆರೋಗ್ಯ ಶಿಬಿರಗಳನ್ನೂ ಏರ್ಪಡಿಸಿದೆ.

ಲಿಂಗತ್ವ ಅಲ್ಪಸಂಖ್ಯಾತರನ್ನು ಮುಖ್ಯವಾಹಿನಿಗೆ ತರಲು ಸತತ ಪ್ರಯತ್ನಗಳು ನಡೆಯುತ್ತಿವೆ. ತಮ್ಮದೇ ಆದ ಉತ್ಪನ್ನ ತಯಾರಿಕೆ ಮೂಲಕ ಜೀವನ ನಡೆಸಲು ನಿಗಮದಿಂದ 50 ಸಾವಿರ ರೂ. ನೆರವು ನೀಡಲಾಗುತ್ತದೆ. ತರಬೇತಿ ಸೌಲಭ್ಯವೂ ಇದೆ. 'ಉದ್ಯೋಗಿನಿ' ನಿಗಮದ ಇನ್ನೊಂದು ಮಹತ್ವಾಕಾಂಕ್ಷಿ ಯೋಜನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸ್ವ-ಉದ್ಯೋಗಿಗಳಾಗಲು ಘಟಕ ವೆಚ್ಚದ ಶೇ.70ರಷ್ಟು ಅಥವಾ ಗರಿಷ್ಠ 3.50 ಲಕ್ಷ ರೂ. ಸಾಲ ನೀಡಲಾಗುತ್ತದೆ. ಜೊತೆಗೆ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳಿಗೆ ಉದ್ಯೋಗ ಚಟುವಟಿಕೆ ಕೈಗೊಳ್ಳಲು ಕೆಎಸ್‌ಎಫ್‌ಸಿ ಮೂಲಕ 5 ಲಕ್ಷ ದಿಂದ 20 ಲಕ್ಷದ ತನಕವೂ ಸಾಲ ನೀಡಲಾಗುತ್ತದೆ ಮತ್ತು ಇದಕ್ಕೆ ನಿಗಮ ಶೇ.10ರ ಬಡ್ಡಿ ಸಹಾಯಧನ ನೀಡುತ್ತದೆ.

ಬೇರು ಮಟ್ಟದಲ್ಲಿ ಮಹಿಳೆಯರ ಕಷ್ಟಕ್ಕಾಗುವವರು, ಹೆಗಲು ನೀಡುವವರು ಸ್ತ್ರೀಶಕ್ತಿ ಸ್ವ-ಸಹಾಯ ಗುಂಪುಗಳು. ಇಂತಹ ಗುಂಪುಗಳಿಗೆ ನಿಗಮ ಕಿರುಸಾಲ ಯೋಜನೆಯನ್ನು ಜಾರಿಗೆ ತಂದಿದೆ. ಒಂದು ಲಕ್ಷದಿಂದ 2 ಲಕ್ಷ ರೂ. ತನಕ ಸಾಲವನ್ನು ನೀಡಲಾಗುತ್ತದೆ. ಇದು



Download From : www.kpscvaani.com



ಪರಿಶಿಷ್ಟ ಜಾತಿ ಹಾಗೂ ಪಂಗಡದ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ಐದು ಲಕ್ಷ ರೂ. ವರೆಗೂ ವಿಸ್ತರಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿ ವಿಧಿಸಲಾಗುವುದಿಲ್ಲ. ಸಂಘಗಳು ತಮ್ಮ ಸದಸ್ಯೆಯರಿಗೆ ಅವರ ಅಗತ್ಯಕ್ಕೆ ತಕ್ಕಂತೆ ಸಾಲ ಸೌಲಭ್ಯ ಕಲ್ಪಿಸಬಹುದು.

ಕಳೆದ ಐದು ವರ್ಷಗಳಿಂದ ನಿಗಮ ಸಮೃದ್ಧಿ ಎಂಬ ಯೋಜನೆಯನ್ನು ಜಾರಿಗೆ ತಂದಿದೆ. ಇದರ ಉದ್ದೇಶ ಬಡತನ ರೇಖೆಗಿಂತ ಕೆಳಗಿರುವ ಬೀದಿಬದಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುವ ಮಹಿಳೆಯರಿಗೆ ನೆರವಾಗುವುದು. 18 ರಿಂದ 60 ವರ್ಷ ವಯೋಮಾನದವರು ಇದಕ್ಕೆ ಅರ್ಹರು. ಈ ಯೋಜನೆ ಪ್ರಕಾರ ತಲಾ ಹತ್ತು ಸಾವಿರ ರೂ. ಪ್ರೋತ್ಸಾಹಧನ ನೀಡಲಾಗುತ್ತದೆ. ಬೀದಿಬದಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುವ ಮಹಿಳಾ ವ್ಯಾಪಾರಿಗಳು ಅಧಿಕ ಬಡ್ಡಿಗೆ ಸಾಲ ಪಡೆಯದಿರಲಿ ಎಂಬ ಸದುದ್ದೇಶದಿಂದ ಇದನ್ನು ಜಾರಿಗೆ ತರಲಾಗಿದೆ.

ಹೆಚ್‌ಐವಿ ಸೋಂಕಿತರಿಗೆ ಬೆಂಗಾವಲಾಗಿ ನಿಲ್ಲುವ ಕೆಲಸವನ್ನೂ ನಿಗಮ ಕಳೆದ ಐದು ವರ್ಷಗಳಿಂದಲೂ ಮಾಡಿಕೊಂಡು ಬರುತ್ತಿದೆ. 'ಧನಶ್ರೀ' ಎಂಬ ಹೆಸರಿನ ಈ ಯೋಜನೆ ಅಂತಹ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಂಡು ಅಭಿವೃದ್ಧಿ ಹೊಂದಲು ನೆರವಾಗುತ್ತದೆ. 18ರಿಂದ 60 ವರ್ಷ ವಯೋಮಾನದ ಹೆಚ್‌ಐವಿ ಸೋಂಕಿತ ಮಹಿಳೆಯರು 25,000 ರೂ. ನೇರ ಸಾಲವಾಗಿ ಮತ್ತು 25,000 ರೂ. ಪ್ರೋತ್ಸಾಹಧನವನ್ನು ಇಡಿಪಿ ತರಬೇತಿಯೊಂದಿಗೆ ನೀಡಲಾಗುತ್ತದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಮೇಲ್ವಿಚಾರಕಿಯರಿಗೆ ವಾಹನ ಖರೀದಿಸಲು ನಿಗಮದಿಂದ ಇಂದಿರಾ ಯೋಜನೆ ಅಡಿಯಲ್ಲಿ 50000 ರೂ. ತನಕ ಬಡ್ಡಿ ರಹಿತ ಸಾಲ ನೀಡಲಾಗುತ್ತದೆ.

ಒಟ್ಟಿನಲ್ಲಿ ಅನೇಕ ಸಂದರ್ಭಗಳಲ್ಲಿ ಆರ್ಥಿಕವಾಗಿ ಕಂಗೆಟ್ಟಿರುವ, ದಿಕ್ಕೇ ತೋಚದಿರುವ ಮಹಿಳೆಯರನ್ನು ಕೈ ಹಿಡಿದು ಮುನ್ನಡೆಸುವ ಕಾರ್ಯದಲ್ಲಿ ಮಹಿಳಾ ಅಭಿವೃದ್ಧಿ ನಿಗಮ ತನ್ನನ್ನು ತೊಡಗಿಸಿಕೊಂಡಿದೆ.

ನಿಗಮವು ಜಯನಗರದ ನಾಲ್ಕನೇ ಬ್ಲಾಕ್‌ನಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟಡದ 6 ನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇನ್ನೂ ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 080–26632792, 26542307 ಅಥವಾ ಇ ಮೇಲ್ md.kswdc@gmail.com ಮೂಲಕ ಸಂಪರ್ಕಿಸಬಹುದು.

## ಸ್ತ್ರೀ ಸಬಲತೆಯ ಉದ್ದೇಶಗಳು

- ಭವಿಷ್ಯದ ಮಹಿಳಾ ಉದ್ಯಮಿಗಳನ್ನು ರೂಪಿಸುವ ನಿಟ್ಟಿನಲ್ಲಿ ಅವರ ಆರ್ಥಿಕ ಅಭಿವೃದ್ಧಿಗೆ ಬೇಕಾದ ಯೋಜನೆಗಳನ್ನು ಸಿದ್ಧಪಡಿಸಿ ಬೆಂಬಲವಾಗಿ ನಿಲ್ಲುವುದು.
- ಮಹಿಳೆಯರಿಗೆ ಆದಾಯ ತರಬಲ್ಲ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಮಾರ್ಗದರ್ಶನ ಹಾಗೂ ತಾಂತ್ರಿಕ ಸಲಹೆಗಳನ್ನು ನೀಡುವುದು.
- ಕಿರು ಉದ್ಯಮಗಳನ್ನು ನಡೆಸುತ್ತಿರುವ ಮಹಿಳೆಯರ ಪಾಲಿಗೆ ಸವಾಲಾಗಿರುವ ಮಾರಾಟ ವ್ಯವಸ್ಥೆಗೆ ಬೇಕಾದ ಅನುಕೂಲಗಳನ್ನು ಮಾಡಿಕೊಡುವುದು.
- ಬ್ಯಾಂಕ್ ಹಾಗೂ ಇನ್ನಿತರ ಹಣಕಾಸು ಸಂಸ್ಥೆಗಳಲ್ಲಿ ಮಹಿಳೆಯರಿಗಾಗಿಯೇ ಇರುವ ಸಾಲ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಅದಕ್ಕೆ ಬೇಕಾದ ಸಹಾಯವನ್ನು ಮಾಡುವುದು.
- ಮಹಿಳೆಯರನ್ನು ಸ್ವಉದ್ಯೋಗಿಗಳಾಗಿ ಮಾಡಲು ಕೌಶಲ್ಯ ಅಭಿವೃದ್ಧಿ ತರಬೇತಿ ಒದಗಿಸುವುದು.
- ಗ್ರಾಮೀಣದಲ್ಲಿ ಮಹಿಳೆಯರಿಗೆ ಊರುಗೋಲಾಗಿರುವ ಸ್ತ್ರೀಶಕ್ತಿ ಮಹಿಳಾ ಸಂಘಗಳಿಗೆ ಪ್ರೋತ್ಸಾಹ ನೀಡುವ ಕೆಲಸ.



Download From : www.kpscvaani.com

# ಪೊಲೀಸ್ ಪಡೆಗೆ ಸೇರ್ಪಡೆಗೊಂಡ ದೇಸಿ ತಳಿ ಮುಧೋಳ

**ಬಾಗಲಕೋಟೆ ಜಿಲ್ಲೆಯ ಮುಧೋಳದ ದೇಶಿ ಶ್ವಾನ ಮುಧೋಳವು ಸೇನೆಗೆ ಸೇರುವ ಅವಕಾಶವನ್ನು ಪಡೆದುಕೊಳ್ಳುವ ಮೂಲಕ ಕರ್ನಾಟಕದ ಜನತೆಗೆ ಹೆಮ್ಮೆಯನ್ನು ತಂದುಕೊಟ್ಟಿದೆ.**

ಪಿ.ಎಸ್ ಪರ್ವತಿ

ನಾಯಿ ಎಲ್ಲರಿಗೂ ಚಿರಪರಿಚಿತ ಪ್ರಾಣಿ. ಅನಾದಿ ಕಾಲದಿಂದಿಲೂ ಅದು ಮನುಷ್ಯನ ಒಡನಾಡಿ. ಇಂದಿನ ನಾಗರಿಕ ಬದುಕಿನಲ್ಲಿ ನಾಯಿ ಸಾಕುವುದು ಗಣನೀಯವಾಗಿ ಹೆಚ್ಚಿರುವುದನ್ನು ಕಾಣುತ್ತೇವೆ. ಈ ನಂಬಿಗಸ್ಥ ಪ್ರಾಣಿಯನ್ನು ಕೆಲವರು ಹವ್ಯಾಸಕ್ಕಾಗಿ, ಹಲವರು ಕಾವಲಿಗಾಗಿ ಮತ್ತನೇಕರು ಮನೆಯ ಸದಸ್ಯನಂತೆ ಮುದ್ದು ಸಾಕು ಪ್ರಾಣಿಯಾಗಿ ಸಾಕುತ್ತಾರೆ. ಅವರವರ ಅಭಿರುಚಿಗೆ ತಕ್ಕಂತೆ ವಿದೇಶಿ ತಳಿಯ ನಾಯಿಗಳನ್ನು ಸಾಕುವವರು ನಮ್ಮ ಮಧ್ಯದಲ್ಲಿದ್ದಾರೆ.

ನಮ್ಮದೇ ನೆಲದ ಅಪ್ಪಟ ದೇಶಿ ತಳಿ **"ಮುಧೋಳ ನಾಯಿ"**ಯನ್ನು ಈಗ ರಾಜ್ಯ ಹಾಗೂ ಹೊರ ರಾಜ್ಯದ ನಾಗರಿಕರು ಇಷ್ಟಪಟ್ಟು ಖರೀದಿಸಿ, ಪೋಷಣೆ ಮಾಡಲು ಮುಂದಾಗಿದ್ದಾರೆ. ಕರ್ನಾಟಕದ ಈ ಹೆಮ್ಮೆಯ ಈ ಶ್ವಾನ ತಾನು ಕಾವಲಿಗೂ ಸೈ, ಬೇಟೆಗೂ ಸೈ ಎನ್ನುವುದನ್ನು ರುಜುವಾತು ಮಾಡಿದೆ. ಬಾಗಲಕೋಟೆ ಜಿಲ್ಲೆಯ ತಾಲ್ಲೂಕು ಕೇಂದ್ರವಾದ **"ಮುಧೋಳ"** ಕವಿಚಕ್ರವರ್ತಿ **'ರನ್ನ'**ನಿಗೆ ಜನ್ಮ ನೀಡಿದ ಪುಣ್ಯಭೂಮಿ. ಈ ಊರ ಹೆಸರಿನೊಂದಿಗೆ ಗುರುತಿಸುವ ಈ ಶ್ವಾನ ಇಂದು ದೇಶದ ಗಡಿ ಕಾಯುವ ಕಾಯಕಕ್ಕೆ ನಿಯುಕ್ತಿಗೊಂಡಿರುವುದು ಕರ್ನಾಟಕಕ್ಕೆ ಸಂದ ಗೌರವವಾಗಿದೆ.

ಕುಶಾಗ್ರಮತಿ ಹಾಗೂ ವಿಶಿಷ್ಟ ಬೇಟೆಯ ಈ ಶ್ವಾನದ ಕುರಿತು ದೇಶದ ಪ್ರಧಾನಿಗಳಾದ ನರೇಂದ್ರಮೋದಿ ಅವರು ತಮ್ಮ **"ಮನ್ ಕೀ ಬಾತ್"** ಕಾರ್ಯಕ್ರಮದಲ್ಲಿ, ಈ ದೇಶಿ ತಳಿ ನಾಯಿಯ ಮಹತ್ವವನ್ನು ಪ್ರಸ್ತಾಪಿಸಿ, ದೇಶವಾಸಿಗಳು ಅವುಗಳನ್ನು ಸಾಕಲು ಪ್ರೇರೇಪಿಸಿದ್ದನ್ನು ಇಲ್ಲಿ ಗಮನಿಸಬಹುದು.







Download From : www.kpscvaani.com



# ಮುಧೋಳ ತಳಿಯ ವಿಶೇಷತೆ

**ನಮ್ಮ ದೇಸಿ ತಳಿ ಮುಧೋಳವು ಅತಿ ಸೂಕ್ಷ್ಮ ಸಂವೇದನೆಗಳನ್ನು ಗ್ರಹಿಸುವ ಜೊತೆಗೆ ಮೂರು ಕಿ.ಮೀ ದೂರದಿಂದಲೇ ವಾಸನೆಯನ್ನು ಗ್ರಹಿಸಿ ಪತ್ತೆ ಮಾಡುವ ಗುಣವನ್ನು ಹೊಂದಿರುವುದರಿಂದ ಕಳ್ಳರನ್ನು ಸೆರೆಹಿಡಿಯಲು ಪೊಲೀಸರಿಗೆ ನೆರವಾಗಲಿದೆ.**

ಮುಧೋಳ ತಳಿಯ ಶ್ವಾನವು ತೆಳ್ಳಗೆ, ಉದ್ದ ಮತ್ತು ಅತ್ಯಂತ ಬಲಿಷ್ಠ ಸ್ನಾಯು ಹೊಂದಿರುತ್ತವೆ. ಓಟಕ್ಕೆ ಅನೂಕೂಲವಾಗುವ ದೇಹ ರಚನೆ, ಗಾಳಿ ಸೀಳಿಕೊಂಡು ಮುನ್ನುಗ್ಗಲು ಚಪ್ಪಟೆಯಾದ ಕಿವಿಗಳು, ಅಗಲವಾದ ತಲೆಬುರುಡೆ, ಉದ್ದನೆಯ ಚೂಪಾದ ಮೂಗು, ಗಟ್ಟಿಯಾದ ಒಸಡುಗಳಿಂದ ಕೂಡಿದ ಬಾಯಿ, ನೀಳವಾಗಿ ಚಾಚಿದ ನಾಲಿಗೆ, ಅಗಲವಾದ ಎದೆಗೂಡು, ದೇಹದಲ್ಲಿ ಪ್ರಧಾನವಾಗಿ ಕಾಣುವ ಉದ್ದನೆಯ ಕಾಲುಗಳನ್ನು ಹೊಂದಿದೆ. ಬಿಳಿ, ಕಪ್ಪು, ಕಂದು, ಬೂದು ಬಣ್ಣಗಳಿಂದ ಕೂಡಿದ ಈ ನಾಯಿ, ಸೂಕ್ಷ್ಮ ಸಂವೇದನೆಗಳನ್ನು ಗ್ರಹಿಸುವ ತಳಿಯಾಗಿದೆ. ಮೂರು ಕಿ.ಮೀ ದೂರದಿಂದಲೇ ವಾಸನೆ ಗ್ರಹಿಸಿ ಆಕ್ರಮಣಕಾರಿ ಧೋರಣೆಯಿಂದ ಓಡಿ, ಬೇಟೆಯನ್ನು ಕಚ್ಚಿ ತಂದು ಮಾಲಿಕನಿಗೆ ಒಪ್ಪಿಸುವ ನಿಯತ್ತು ಈ ತಳಿಯದು.

ಐದು ಅಡಿ ಉದ್ದದ ಈ ನಾಯಿಯ ದೇಹದಲ್ಲಿ ಅರ್ಧಭಾಗದಷ್ಟು ಬಾಲವೇ ಇರುತ್ತದೆ. ಮೈಮೇಲೆ ಕಡಿಮೆ ರೋಮ ಹೊಂದಿರುತ್ತದೆ. ರೇಷ್ಮೆಯಂತಹ ಮೃದು ಚರ್ಮ ಹೊಂದಿರುವುದರಿಂದ, ಸ್ವಚ್ಛತೆಗೆ ಬಹು ಅನುಕೂಲವಾಗಿರುತ್ತದೆ. ದೇಶದ ಎಲ್ಲ ಹವಾಮಾನಕ್ಕೆ ಹೊಂದಿಕೊಳ್ಳುವ ಈ ತಳಿಯು ಸಾಮಾನ್ಯವಾಗಿ 25 ರಿಂದ 35 ಕಿಲೋಗ್ರಾಂ ತೂಕವಿರುತ್ತವೆ. ಗಂಟೆಗೆ 60ಕಿ.ಮೀ. ಓಡುವ ಈ ನಾಯಿ ತಳಿಯನ್ನು ಓಟದಲ್ಲಂತೂ ಬೇರಾವ ನಾಯಿಗೂ ಮೀರಿಸುವುದಕ್ಕಾಗುವುದಿಲ್ಲ. ಇದು ಬೆನ್ನಟ್ಟಿದಲ್ಲಿ ಜಿಂಕೆ ಸಹ ತಪ್ಪಿಸಿಕೊಳ್ಳಲಾರದು ಎನ್ನುವ ಮಾತಿದೆ. ದಣಿವರಿಯದ ಈ ನಾಯಿ ಅಗಾಧ ನೆನಪಿನ ಶಕ್ತಿ ಹೊಂದಿದ್ದು, ಮನೆ ಸದಸ್ಯರೊಂದಿಗೆ ವಿಶ್ವಾಸದಿಂದ ವಿರುತ್ತದೆ. ಎಂಥ ಪ್ರವಾಹದಲ್ಲೂ ಈಜಿ ಪಾರಾಗಿ ಬರುವ ಚಾಕಚಕ್ಯತೆ ಹೊಂದಿರುವ ಈ ಶ್ವಾನವು ಸುಮಾರು ಹದಿನೈದು ವರ್ಷಗಳವರೆಗೆ ಬದುಕುತ್ತದೆ.

ತೀಕ್ಷ್ಣ ಕಣ್ಣು, ಚಿರತೆಯ ವೇಗ, ತೆಳವಾದ ಚಪ್ಪಟೆ ತಲೆ, ಅಗಲವಾದ ಕಾಲು, ಸಪೂರ ದೇಹದ ಮುಧೋಳ ದೇಶಿ ತಳಿಯ ನಾಯಿ ಈಗ ಭಾರತದ ಭದ್ರತಾ ಪಡೆಗಳಲ್ಲೂ ಕಂಡುಬರುತ್ತಿದೆ. ತನ್ನ ಚಾಕಚಕ್ಯತೆಯಿಂದ ಇಡೀ ದೇಶಕ್ಕೆ ಪರಿಚಯವಾಗಿರುವ ಕರ್ನಾಟಕದ ಈ ಶ್ವಾನಗಳಿಗೆ ತರಬೇತಿ ನೀಡಿ ದೇಶದ ರಕ್ಷಣಾ ಪಡೆಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಸೇನೆಯಲ್ಲಿ ಇದೇ ಮೊದಲ ಸಲ ಕರ್ನಾಟಕದ ಪ್ರಸಿದ್ಧ ಶ್ವಾನ ತಳಿಯೊಂದು ಸೇರಿ ಕೊಂಡಿರುವುದು ನಾಡಿನ ಹೆಮ್ಮೆಯ ವಿಷಯವಾಗಿದೆ. ಈ ಮೊದಲು ಭಾರತೀಯ ಸೇನೆಯು ಜರ್ಮನ್ ಶಫರ್ಡ್, ಲ್ಯಾಬ್ರೆಡಾರ್, ಪಾಶ್ಚಿಮಾತ್ಯ ನಾಯಿ ತಳಿಗಳನ್ನು ಬಳಸಿಕೊಳ್ಳುತ್ತಿದ್ದರು.

### ಹೊಕ್ಕಳ ಬಳ್ಳಿ

ಐತಿಹಾಸಿಕ ಪರಂಪರೆ ಹೊಂದಿರುವ ಈ ನಾಯಿಯು ಅತ್ಯಂತ ಚಲನಶೀಲ ನಾಯಿ ಎಂದೇ ಪ್ರಸಿದ್ಧವಾಗಿದೆ. ಕ್ರಿಪೂ 500 ರಲ್ಲಿಯೇ ಮುಧೋಳ ನಾಯಿಯು ಕರ್ನಾಟಕದವರಿಗೆ ಪರಿಚಯವಿತ್ತು. ತದನಂತರ ಭಾರತಕ್ಕೆ ಅನೇಕ ವಿದೇಶಿಗರು ವಿವಿಧ ಕಾರಣಕ್ಕಾಗಿ ಇಲ್ಲಿಗೆ ಲಗ್ಗೆ ಇಟ್ಟರು. ಹೀಗೆ ಬಂದವರು ತಮ್ಮ ಕಾವಲಿಗಾಗಿ, ಬೇಟೆಗಾಗಿ ಮತ್ತು ವೈರಿಗಳ ಚಲನವಲನ ಅರಿಯಲು ಸ್ಲೂಹಿ, ಸಾಲೂಕಿ, ಮತ್ತು ಗ್ರೇಹೌಂಡ್ ಶ್ವಾನಗಳನ್ನು ತಮ್ಮೊಂದಿಗೆ ಕರೆತಂದರು. ಹೀಗೆ ವಲಸೆ ಬಂದ ನಾಯಿಗಳು ಕಾಲ ಕ್ರಮೇಣ ಇಲ್ಲಿಯ ಪರಿಸರ, ವಾತಾವರಣಕ್ಕೆ ಹೊಂದಿಕೊಂಡು ಸ್ಥಳೀಯ ಶ್ವಾನಗಳೊಂದಿಗೆ ಸೇರಿ ವಂಶಾಭಿವೃದ್ಧಿ ಹೊಂದಿದವು. ಈ ಶ್ವಾನಗಳು ತಮ್ಮ ನೆಲೆಯ ಸ್ಥಳದ ಹೆಸರನ್ನೇ ಪಡೆದುಕೊಂಡವು.

ಹೀಗಾಗಿ ಮುಧೋಳ ಭಾಗದ ಈ ಶ್ವಾನಗಳಿಗೆ **"ಮುಧೋಳ"** ಹೆಸರು ಬಂದಿತು. ಹಿಂದಿನ ಮುಧೋಳ ಸಂಸ್ಥಾನದ ರಾಜಾ ಮಾಲೋಜಿರಾವ್ ಘೋರ್ಪಡೆ ಅವರು ಪರ್ಶಿಯನ್ ನಾಯಿಗಳು ಹಾಗೂ ಸ್ಥಳೀಯ ತಳಿ ನಾಯಿಯಾದ **"ಮುಧೋಳ ನಾಯಿ"** ಅಭಿವೃದ್ಧಿಗೆ ಒತ್ತು ನೀಡಿದ್ದು ಇತಿಹಾಸದಲ್ಲಿದೆ. ನಾಯಿಗಳನ್ನು ಪ್ರೀತಿಸುತ್ತಿದ್ದ ಅವರು ಬೇಟೆಗಾಗಿ, ಅರಮನೆ ಕಾವಲಿಗೆ ಹಾಗೂ ಸಮರಕ್ಕಾಗಿ ಇವುಗಳನ್ನು ಸಂವರ್ಧಿಸುವ ಮೂಲಕ ಈ ತಳಿಗೆ ಅಧಿಕೃತ ಮನ್ನಣೆ ತಂದುಕೊಟ್ಟರು.

ಅಂದಿನ ಕಾಲದಲ್ಲಿ ರಾಜಮಹಾರಾಜರು, ಗಣ್ಯರಿಗೆ ನಾಯಿಗಳನ್ನು ಉಡುಗೊರೆಯಾಗಿ ನೀಡುತ್ತಿದ್ದರು. ಮಾಲೋಜಿರಾವ್ ಮಹಾರಾಜರು ಪಂಚಮ ಜಾರ್ಜರನ್ನು ಭೇಟಿಯಾಗಲು ಹಡಗಿನಲ್ಲಿ ಲಂಡನ್ನಿಗೆ ಹೋದಾಗ, ತಮ್ಮೊಂದಿಗೆ ಬೇಟೆ ಮತ್ತು ಓಟದಲ್ಲಿ ಬಹು ಚಾಣಾಕ್ಷವಾದ ಈ **"ಮುಧೋಳ ಹೌಂಡ್"** ನಾಯಿಗಳನ್ನು ಒಯ್ದು ಅವರಿಗೆ



Download From : www.kpscvaani.com

**ಅಂಚೆಚೀಟಿ**

ಬ್ರಿಟಿಷ್‌ರು ಈ ನಾಯಿಯನ್ನು ಕಾರವಾನ್ ಎಂದು ಕರೆಯುತ್ತಿದ್ದರು. ಚೆನ್ನೈನಲ್ಲಿರುವ ಭಾರತ ಕೆನಲ್ ಕ್ಲಬ್ (KCI) ಇದನ್ನು ಕಾರವಾನ್ ಹೌಂಡ್ ಎಂದು ನೋಂದಾಯಿಸಿದ್ದು, ಮುಂಬೈನ ಭಾರತೀಯ ರಾಷ್ಟ್ರೀಯ ಕೆನಲ್ ಕ್ಲಬ್ (INKC) ಇದನ್ನು ಮುಧೋಳ ಹೌಂಡ್ ಎಂದು ಗುರುತಿಸುತ್ತದೆ.

ಭಾರತ ಸರ್ಕಾರ ಮುಧೋಳ ನಾಯಿಯನ್ನು ಗುರುತಿಸಿ 2005 ರಲ್ಲಿ ಮುಧೋಳ ಹೌಂಡ್ ಎಂಬ ಶೀರ್ಷಿಕೆಯಡಿ ಮುಧೋಳ ನಾಯಿ ಚಿತ್ರದ ಐದು ರೂ. ಮುಖ ಬೆಲೆಯ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದೆ.







ಕಾಣಿಕೆಯಾಗಿ ನೀಡಿರುವುದನ್ನು ಉಲ್ಲೇಖಿಸಲಾಗಿದೆ. ಭಾರತದ ವಿವಿಧ ರಕ್ಷಣಾ ಪಡೆಗಳಲ್ಲಿ ಸೇರ್ಪಡೆಯಾದ ಮುಧೋಳ ನಾಯಿಗಳು, ದಿಲ್ಲಿಯ ಕೆಂಪು ಕೋಟೆಯ ದೇಶದ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಮಿಂಚಿ, ಮುಧೋಳದ ಮಹತ್ವವನ್ನು ಜಗತ್ತಿಗೆ ಸಾರಿವೆ.

## ಮೈಕ್ರೋಚಿಪ್

ಮುಧೋಳ ನಾಯಿ ಒಂದು ಬಾರಿಗೆ ಹನ್ನೆರಡವರೆಗೆ ಮರಿ ಹಾಕುತ್ತದೆ ನಾಯಿಮರಿಗಳ ಸಂತತಿಯನ್ನು ಸುಲಭವಾಗಿ ಅರಿಯುವುದಕ್ಕಾಗಿ ಮರಿಗಳ ಬೆನ್ನಿಗೆ **"ಮೈಕ್ರೋಚಿಪ್"** ಅಳವಡಿಸಲಾಗುತ್ತದೆ. ಇದರಿಂದ ಶ್ವಾನದ ವಂಶಾವಳಿ ಗುರುತಿಸುವಿಕೆ ಸುಲಭವಾಗುತ್ತದೆ. ಅವು ಅದಲು ಬದಲಾದರೆ, ಇಲ್ಲವೇ ಕಳ್ಳತನವಾದರೆ ಅವುಗಳನ್ನು ಕಂಡುಹಿಡಿಯುವುದು ಸುಲಭವಾಗುತ್ತದೆ. ಚಿಪ್ಪಿನಲ್ಲಿ ಶ್ವಾನದ ವಿವರಗಳು ದಾಖಲಾಗಿರುತ್ತವೆ.

## ಸಂಶೋಧನಾ ಕೇಂದ್ರ:

ಮುಧೋಳ ತಳಿಯ ಅಭಿವೃದ್ಧಿಗಾಗಿಯೇ ರಾಜ್ಯ ಸರ್ಕಾರ ಮುಂದಾಗಿದ್ದು, 2009 ರಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ತಿಮ್ಮಾಪುರ ಗ್ರಾಮದ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ 40 ಎಕರೆ ಪ್ರದೇಶದಲ್ಲಿ **"ಶ್ವಾನ ಸಂಶೋಧನಾ ಹಾಗೂ ಮಾಹಿತಿ ಕೇಂದ್ರ"** ವನ್ನು ಸ್ಥಾಪಿಸಿದೆ. ಈ ಕೇಂದ್ರದಲ್ಲಿ ಈ ತಳಿಯ ನಾಯಿಗಳ ಸಂವರ್ಧನೆ ಹಾಗೂ ಮಾರಾಟ ಪ್ರಕ್ರಿಯೆ ನಡೆಯುತ್ತದೆ. ವಾರ್ಷಿಕ ಒಂದು ನೂರು ಆರೋಗ್ಯ ಪೂರ್ಣ ನಾಯಿ ಮರಿಗಳು ಈ ಕೇಂದ್ರದಲ್ಲಿ ಜನಿಸುತ್ತವೆ. ಅವುಗಳ ಪಾಲನೆ, ಪೋಷಣೆಯನ್ನು ಮಾಡುವುದರ ಜೊತೆಗೆ ಆಸಕ್ತರಿಗೆ ಅವುಗಳ ಆರೋಗ್ಯ, ಆರೈಕೆ ಬಗ್ಗೆ ಮಾಹಿತಿ ಹಾಗೂ ಸೂಚನೆಯನ್ನು ಈ ಕೇಂದ್ರ ನಿರ್ವಹಿಸುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಗೃಹ ಇಲಾಖೆಗೂ ಈ ಕೇಂದ್ರ ಬೇಡಿಕೆ ಅನುಸರಿಸಿ ಮುಧೋಳ ತಳಿಗಳನ್ನು ಪೂರೈಸುತ್ತಿದೆ.

ಮೊಟ್ಟಮೊದಲ ಬಾರಿಗೆ ಭಾರತದ ರಕ್ಷಣಾ ಇಲಾಖೆಯ ಸೇನಾ (Military) ಪಡೆಯಲ್ಲಿ, ರಾಷ್ಟ್ರೀಯ ಭದ್ರತಾ ಪಡೆಯಲ್ಲಿ (NSG) ನಮ್ಮ ಈ ದೇಶಿ ತಳಿ ಅವಕಾಶ ಪಡೆದಿರುವುದು ಅಭಿಮಾನದ ಸಂಗತಿ. ಈ ನಾಯಿಗಳು ತರಬೇತಿ ಪಡೆದು ಯಶಸ್ವಿಯಾಗಿ ಕಾರ್ಯೋನ್ಮುಖವಾಗಿವೆ. ಭಾರತೀಯ ವಾಯುಪಡೆಯ ಆಗ್ರಾ ಏರಪೋರ್ಟ್ ಕೇಂದ್ರಕ್ಕೆ ಮುಧೋಳ ಶ್ವಾನ ಸೇರ್ಪಡೆಗೊಳ್ಳಲಿವೆ ಎಂದು ಕೇಂದ್ರದ ಮುಖ್ಯಸ್ಥ ಡಾ.ಮಹೇಶ ಆಕಾಶಿ ತಿಳಿಸಿದ್ದರು. ಸಂಶಯಾಸ್ಪದ ವಸ್ತು, ವ್ಯಕ್ತಿಗಳ ಪತ್ತೆಗಾಗಿ ಭದ್ರತಾ ಪಡೆಗಳಲ್ಲಿ ಇವುಗಳನ್ನು ತರಬೇತುಗೊಳಿಸಿ ಬಳಸಿಕೊಳ್ಳಲಾಗುತ್ತಿದೆ. ಪಾಶ್ಚಿಮಾತ್ಯ ತಳಿಗಳ ಬದಲಾಗಿ ದೇಶಿ ತಳಿಗಳನ್ನು ಉಪಯೋಗಿಸುತ್ತಿರುವ ಹಿನ್ನೆಲೆಯಲ್ಲಿ ಗಡಿ ಭದ್ರತಾ ಪಡೆ, ಇಂಡೋ ಟಿಬೆಟ್ ಗಡಿ. ಭದ್ರತಾ ಪಡೆ, ಸಿ.ಆರ್.ಪಿ.ಎಫ್, ಹಾಗೂ ಬಂಡಿಪುರ ಹುಲಿಸಂರಕ್ಷಣಾ ಪ್ರದೇಶದ ಸೇವೆಗೂ ಈ ತಳಿಗಳನ್ನು ನೀಡಲಾಗಿದೆ. ಬಾಗಲಕೋಟೆ ಜಿಲ್ಲಾ ಪೊಲೀಸ್ ಇಲಾಖೆಗೆ ಗಣರಾಜ್ಯೋತ್ಸವದಂದು ಪ್ರಾಯೋಗಿಕವಾಗಿ ಮುಧೋಳನಾಯಿ ಸೇರ್ಪಡೆಯಾಗಿದೆ. ಸಚಿವರಾದ ಗೋವಿಂದ ಕಾರಜೋಳ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮುಧೋಳ ನಾಯಿಮರಿ ವಿತರಿಸಿದರು. ಇದರ ಫಲಶೃತಿ ಅನುಸರಿಸಿ ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪೋಲೀಸ್ ಪಡೆಗೆ ಈ ತಳಿಗಳನ್ನು ಒದಗಿಸುವ ಚಿಂತನೆ ಇದೆ ಎಂದು ಡಾ. ಮಹೇಶ ಅಭಿಪ್ರಾಯ ಪಡುತ್ತಾರೆ.

ಬಾಗಲಕೋಟೆ, ವಿಜಯಪುರ ಹಾಗೂ ನೆರೆಯ ಬೆಳಗಾವಿ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಜೀವನ ನಿರ್ವಹಣೆ ಮತ್ತು ಕುಟುಂಬದ ಆದಾಯಕ್ಕಾಗಿ ಈ ಪ್ರಸಿದ್ಧ ತಳಿಯನ್ನು ಸುಮಾರು ಏಳನೂರು ಕುಟುಂಬಗಳು ಖಾಸಗಿಯಾಗಿ ಅಭಿವೃದ್ಧಿ ಮಾಡಿ, ಮಾರಾಟ ಮಾಡುವ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ. ಕೇರಳ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಗೋವಾ ರಾಜ್ಯದಲ್ಲಿ ಈ ತಳಿಗಳಿಗೆ ಸಾಕಷ್ಟು ಬೇಡಿಕೆ ಇದೆ. ಜನ ಸಾಮಾನ್ಯರು ತೋಟ, ಹೊಲ, ಮನೆ, ಕುರಿಹಿಂಡು ಕಾಯಲು ಮತ್ತು ಭದ್ರತೆಗಾಗಿ ಸ್ವಾಮಿ ನಿಷ್ಠೆಯ ಹಾಗೂ ಕಡಿಮೆ ನಿರ್ವಹಣಾ ವೆಚ್ಚದ ಈ ಮುಧೋಳ ನಾಯಿಯನ್ನು ಖರೀದಿಸುತ್ತಾರೆ. ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ನಾಯಿಗಳಿಗಿಂತ ಭಿನ್ನವಾಗಿರುವ ಮುಧೋಳ ಶ್ವಾನಗಳನ್ನು ಕಾವಲಿಗಾಗಿ ಹಾಗೂ ಭದ್ರತೆಗಾಗಿ ಪ್ರೀತಿಯಿಂದ ಸಾಕುತ್ತಾರೆ. ಪ್ರತಿಯಾಗಿ ತನಗೆ ವಹಿಸಿದ ಹೊಲ, ತೋಟ, ಮನೆ ಕಾಯುವ ಜವಾಬ್ದಾರಿಯನ್ನು ಈ ನಾಯಿಗಳು ರಾತ್ರಿಯೆಲ್ಲ ಕಣ್ಣುಬಿಟ್ಟುಕೊಂಡು ಕಾಯುತ್ತವೆ. ಗಾಳಿಯವೇಗ, ಸಿಂಹದಶಕ್ತಿ, ಚಿರತೆಯ ದೇಹದ ಈ ಶ್ವಾನ, ಭಾರತೀಯ ಶ್ವಾನತಳಿಗಳಲ್ಲಿಯೇ ವಿಶಿಷ್ಟ ಸ್ಥಾನ ಪಡೆದಿದೆ. ಅಷ್ಟೇ ಅಲ್ಲದೆ ಹೊರದೇಶದ ತಳಿಗಳನ್ನು ಮೀರಿಸುವ ಸಾಮರ್ಥ್ಯವನ್ನು ಹೊಂದಿದೆ. ■



Download From : www.kpscvaani.com



## ಜಲ ಸಂಪನ್ಮೂಲ ರಕ್ಷಣೆ

# ನಮ್ಮೆಲ್ಲರ ಹೊಣೆ

**ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜಲ ಸಂಪನ್ಮೂಲವನ್ನು ಮಿತವಾಗಿ ಬಳಸುವ ಮೂಲಕ ಮುಂದಿನ ಪೀಳಿಗೆಯವರಿಗಾಗಿ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಬಹುಮುಖ್ಯ ಜವಾಬ್ದಾರಿಗಳಲ್ಲಿ ಒಂದು ಎಂಬುದನ್ನು ಮರೆಯಬಾರದು.**

ಡಾ. ಗುರಲಿಂಗಪ್ಪ ಅಂಕದ

ಈಗ ತಾನೇ ಬೇಸಿಗೆಗೆ ಕಾಲಿಟ್ಟಿದ್ದೇವೆ. ಇನ್ನು ಕೆಲವೇ ದಿನಗಳಲ್ಲಿ ಬಿಸಿಲಿನ ಧಗೆ ಹೆಚ್ಚಾಗಲಿದೆ. ಜೊತೆಗೆ ನೀರಿನ ಸಮಸ್ಯೆಯೂ ಕಾಡಲಿದೆ. ನಾವು ಈಗಿನಿಂದಲೇ ನೀರು ಉಳಿಸುವ ಬಗ್ಗೆ ಜಾಗೃತರಾಗದಿದ್ದರೆ ಮುಂದೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ. ಅದನ್ನೆಲ್ಲ ಸರ್ಕಾರ ನೋಡ್ಕೋತದೆ, ನಾವು ಏನು ತಾನೇ ಮಾಡಲು ಸಾಧ್ಯ? ಅನ್ನೋದು ನಿಮ್ಮ ಪ್ರಶ್ನೆನಾ?... ಹಾಗಾದರೆ ನೀವು ಈ ಲೇಖನವನ್ನು ಖಂಡಿತಾ ಓದಲೇಬೇಕು.

ಹಾಗೇ ಸುಮ್ಮನೆ ಕಲ್ಪಿಸಿಕೊಳ್ಳಿ, ಒಂದು ದಿನ ನೀರಿಲ್ಲದಿದ್ದರೆ ನಮ್ಮ ಜೀವನ ಹೇಗಿರಬಹುದು? ಬೆಳ್ಳಿಗ್ಗೆ ಮುಖ ತೊಳೆಯುವುದು ಹೇಗೆ? ಶೌಚ, ಸ್ನಾನಗಳಿಗೆ ಏನು ಮಾಡುವುದು? ಬಾಯಾರಿಕೆ ನೀಗಿಸಿಕೊಳ್ಳುವುದು ಹೇಗೆ? ಬಟ್ಟೆ, ಪಾತ್ರೆಗಳನ್ನು ಹೇಗೆ ತೊಳೆಯುವುದು? ಮನೆಯನ್ನು ಹೇಗೆ



Download From : www.kpscvaani.com

ಸ್ವಚ್ಛಗೊಳಿಸುವುದು?, ಅಲ್ಲದೆ ನೀರೇ ಇಲ್ಲ ಎಂದ ಮೇಲೆ ಅನ್ನ ಬೇಯಲು ಸಾಧ್ಯವೇ?, ಸಾರು ತಯಾರಾಗುತ್ತದೆಯೇ? ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿಕೊಳ್ಳೋಣ ಅಂದರೆ ಅದಕ್ಕೂ ನೀರು ಬೇಕಲ್ಲ.

ಅಬ್ಬಬ್ಬಾ, ನೀರಿಲ್ಲ ಎಂದರೆ ಎಷ್ಟೆಲ್ಲ ಪರದಾಡಬೇಕಲ್ಲವೇ? ಕಲ್ಪನೆಯೇ ಇಷ್ಟು ಭೀಕರವಾಗಿರುವಾಗ ಇದೇ ನಿಜವಾಗಿಬಿಟ್ಟರೆ? ಆದರೆ ಮುಂದೊಮ್ಮೆ ಇಂತಹ ಪರಿಸ್ಥಿತಿ ಎದುರಾಗಬಹುದು ಎಂದು ವಿಜ್ಞಾನಿಗಳು, ಪರಿಸರತಜ್ಞರು ಎಚ್ಚರಿಸುತ್ತಿದ್ದಾರೆ. ಇಂದು ನಾವು ನೀರನ್ನು ಮನಸೋ ಇಚ್ಛೆ ಬಳಸುತ್ತಿದ್ದರೆ, ಪೋಲು ಮಾಡುತ್ತಿದ್ದರೆ ಮುಂದೆ ಅದಕ್ಕಾಗಿ ದೊಡ್ಡ ಬೆಲೆಯನ್ನೇ ತೆರಬೇಕಾಗುತ್ತದೆ. ಹೀಗಾಗಿ ಈಗಿನಿಂದಲೇ ನಾವು ನೀರು ಉಳಿಸಲು ಅಗತ್ಯ ಕ್ರಮಗಳನ್ನು ಕೈಗೊಂಡರೆ ಅಂತಹ ಪರಿಸ್ಥಿತಿಯೇ ಎದುರಾಗದು.

ನೀರು ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದು. ಸಂರಕ್ಷಿತ ಮತ್ತು ಶುದ್ಧ ನೀರಿನ ಅಭಾವ ಇಂದು ಹಲವಾರು ದೇಶಗಳನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆಯಾಗಿದೆ. ವರ್ಲ್ಡ್ ವೈಲ್ಡ್ ಲೈಫ್ ನಡೆಸಿದ ಸಮೀಕ್ಷೆಯ ಪ್ರಕಾರ ವಿಶ್ವದಲ್ಲಿ ಅಂದಾಜು 100 ಕೋಟಿ ಜನರು ಸುರಕ್ಷಿತ ನೀರಿನಿಂದ ವಂಚಿತರಾಗಿದ್ದಾರೆ. ನೀರಿನ ನೈಸರ್ಗಿಕ ಮೂಲಗಳ ಅಸಮರ್ಪಕ ನಿರ್ವಹಣೆ, ಅಪವ್ಯಯ ಮತ್ತು ಹಲವಾರು ವಿಧಗಳಿಂದಾಗುವ ಜಲಮಾಲಿನ್ಯದಿಂದಾಗಿ ಜಾಗತಿಕವಾಗಿ ನೀರಿನ ಕೊರತೆ ಹೆಚ್ಚುತ್ತಿದೆ. ಹವಾಮಾನದಲ್ಲಾಗುವ ವೈಪರೀತ್ಯಗಳು ಕೂಡ ಜಲಸಂಪನ್ಮೂಲದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತಿವೆ. ಹಾಗಾಗಿ ಮುಂದಿನ ದಿನಗಳಲ್ಲಿ ಅದರ ದುಷ್ಪರಿಣಾಮಗಳನ್ನು ಎದುರಿಸಬೇಕಾದವರು ನಾವೇ.

**ನೀರಿನ ಜಾಗೃತಿಗಾಗಿಯೇ ಒಂದು ದಿನ:**

ನಿಮಗೆಲ್ಲ ಗೊತ್ತಿರುವ ಹಾಗೆ ಭೂಮಿಯ ಶೇ.70 ರಷ್ಟು ಭಾಗ ಜಲಾವೃತವಾಗಿದೆ. ಆದರೆ ಬಳಕೆಗೆ ಯೋಗ್ಯವಾದ ನೀರಿನ ಪ್ರಮಾಣ ಶೇ. 2.7 ರಷ್ಟು ಮಾತ್ರ. ಇದು ನದಿ, ಸರೋವರ ಮತ್ತು ಅಂತರ್ಜಲದ ಮೂಲಕ ದೊರೆಯುತ್ತಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ನಾನಾ ಕಾರಣಗಳಿಂದ ನಮ್ಮೆಲ್ಲರ ಜೀವನಕ್ಕೆ ಆಧಾರವಾಗಿರುವ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ.



## ನೀರುಳಿಸಲು ನಾವೇನು ಮಾಡಬಹುದು?

- ಹನಿ ಹನಿ ಕೂಡಿದರೆ ಹಳ್ಳ ಎಂಬಂತೆ, ನಲ್ಲಿಗಳಿಂದ ವೃಥಾ ನೀರು ಸೋರುವಿಕೆಯನ್ನು ತಡೆಯಿರಿ.
- ಹಲ್ಲು ಉಜ್ಜುವಾಗ, ಶೇವ್ ಮಾಡುವಾಗ ನಲ್ಲಿಯನ್ನು ಬಂದ್ ಮಾಡಿ.
- ಸ್ನಾನದ ನಂತರ ನಲ್ಲಿ ಬಂದ್ ಮಾಡುವುದನ್ನು ಮರೆಯಬೇಡಿ.
- ಷವರ್‌ಗಳನ್ನು ಆದಷ್ಟು ಕಡಿಮೆ ಬಳಸಿ.
- ವಾಹನ ಸ್ವಚ್ಛಗೊಳಿಸಲು ಪೈಪ್ ಬದಲು ಬಕೆಟನ್ನೇ ಬಳಸಿ.
- ಪಾತ್ರೆಗಳನ್ನು ನೇರವಾಗಿ ನಲ್ಲಿಯ ಅಡಿಯಲ್ಲಿಟ್ಟು ತೊಳೆಯಬೇಡಿ.
- ವಾಷಿಂಗ್ ಮಷಿನ್ ತುಂಬುವಷ್ಟು ಬಟ್ಟೆಗಳಿದ್ದರೆ ಮಾತ್ರ ಬಳಸಿ.
- ಶೌಚಕ್ಕೆ ದೇಶೀ ಪದ್ಧತಿ ವ್ಯವಸ್ಥೆ ಅಳವಡಿಸುವುದು ಸೂಕ್ತ. ಕಮೋಡ್‌ನಿಂದ ಹೆಚ್ಚು ನೀರು ಪೋಲಾಗುವುದು.
- ಮೂತ್ರ ವಿಸರ್ಜನೆ ಮಾಡಿದ ನಂತರ ಇಡೀ ಫ್ಲಷ್ ಅನ್ನು ಒತ್ತುವ ಬದಲು, ಫ್ಲಷ್ ಅನ್ನು ಒತ್ತಿ, ಕೂಡಲೇ ಮೇಲಕ್ಕೆ ಏರಿಸುವುದರಿಂದ ಕಡಿಮೆ ನೀರನ್ನು ಬಳಸಬಹುದು. ಮೂತ್ರ ವಿಸರ್ಜನೆಗೆ ಕನಿಷ್ಟ ಒಂದು ಮಗ್ ನೀರು ಸಾಕಾಗುತ್ತದೆ. ಆದರೆ ನಾವು ಇಡೀ ಫ್ಲಷ್ ಅನ್ನು ಒತ್ತಿ ಒಂದು ಬಕೆಟ್ ನೀರನ್ನು ಪೋಲು ಮಾಡುತ್ತೇವೆ.
- ಗಿಡಗಳಿಗೆ ಮೇಲಿಂದ ನೀರು ಸುರಿಯುವ ಬದಲು ಗಿಡದ ಬುಡಕ್ಕೆ ಸಾಯಂಕಾಲ ಅಥವಾ ಮುಂಜಾನೆಯೇ ನೀರು ಹಾಕಿ ಇದರಿಂದ ನೀರು ಆವಿಯಾಗುವುದು ತಪ್ಪುತ್ತದೆ.
- ಇನ್ನೂ ಕೆಲ ನಗರಗಳಲ್ಲಿ ನಲ್ಲಿಗಳಿಗೆ ಮೀಟರ್ ಅಳವಡಿಕೆಯೇ ಇಲ್ಲ, ಮತ್ತು ಕೆಲವರಂತೂ ನಲ್ಲಿಗಳನ್ನೇ ಅಳವಡಿಸಿಲ್ಲ. ಅಂದರೆ ನೀರು ಬಂದಾಗಿನಿಂದ ನಿಲ್ಲುವ ತನಕ ನೀರು ರಸ್ತೆ, ಚರಂಡಿಗಳಲ್ಲಿ ಹರಿಯುತ್ತಲೇ ಇರುತ್ತದೆ. ಮೀಟರ್ ಅಳವಡಿಸಿದರೆ ಕನಿಷ್ಟ ತಮಗೆ ಬೇಕಾದಷ್ಟು ನೀರು ತುಂಬಿಕೊಂಡು ನಲ್ಲಿಯನ್ನು ಬಂದ್ ಮಾಡುವರು.
- ಗಣೇಶ ಚತುರ್ಥಿ ಸಂದರ್ಭದಲ್ಲಿ ಗಣೇಶನ ವಿಗ್ರಹವನ್ನು ನದಿ-ಕೆರೆಗಳ ಬದಲಿಗೆ ಮನೆಯಲ್ಲೇ ಬಕೆಟ್ ಅಥವಾ ಟ್ಯಾಂಕ್‌ನಲ್ಲಿ ವಿಸರ್ಜಿಸಬೇಕು. ಇದರಿಂದ ದೊಡ್ಡ ಪ್ರಮಾಣದ ಜಲಮಾಲಿನ್ಯ ತಪ್ಪಿದಂತಾಗುತ್ತದೆ.
- ಮಳೆ ನೀರಿನ ಕೊಯ್ಲನ್ನು ನಿಮ್ಮ ಮನೆಗೆ ಅಳವಡಿಸಿಕೊಳ್ಳಿ.
- ಸ್ವಂತ ಜಮೀನಿದ್ದರೆ ಅಂತರ್ಜಲ ಹೆಚ್ಚಿಸಲು ಇಂಗುಗುಂಡಿಗಳನ್ನು ನಿರ್ಮಿಸುವುದು ಸೂಕ್ತ.



Download From : www.kpscvaani.com

ಆದ್ದರಿಂದ ವಿಶ್ವಸಂಸ್ಥೆಯು ಈ ವಿಷಯದ ಬಗ್ಗೆ ಚರ್ಚಿಸಲು 1992 ರಲ್ಲಿ ಬ್ರೆಜಿಲ್ ದೇಶದ ರಿಯೋ ಡಿ ಜನೈರೋ ನಗರದಲ್ಲಿ ಒಂದು ಸಭೆಯನ್ನು ಕರೆಯಿತು. ಅಂದು ನಡೆದ ಸಭೆಯಲ್ಲಿ ಪ್ರತಿವರ್ಷ ಮಾರ್ಚ್-22 'ವಿಶ್ವ ಜಲದಿನ'ವನ್ನಾಗಿ ಆಚರಿಸಬೇಕೆಂದು ನಿರ್ಣಯಿಸಲಾಯಿತು. ಹೀಗಾಗಿ ಜನರಲ್ಲಿ ನೀರಿನ ಬಗ್ಗೆ ಜಾಗೃತಿ ಮೂಡಿಸಲು 1993 ರಿಂದ ಪ್ರತಿವರ್ಷ ಮಾರ್ಚ್-22 ರಂದು ವಿಶ್ವ ಜಲದಿನವನ್ನು ಆಚರಿಸಲಾಗುತ್ತಿದೆ.

ಟಿವಿ ಹಾಗೂ ಯೂಟ್ಯೂಬ್‌ಗಳಲ್ಲಿ ನೀವು ಈ ದೃಶ್ಯವನ್ನು ನೋಡಿರಬಹುದು. ಗಿಡದ ಮೇಲೆ ಕುಳಿತ ಮಂಗವೊಂದು ನಲ್ಲಿಯಿಂದ ನೀರು ಸೋರುತ್ತಿರುವುದನ್ನು ನೋಡಿ, ತಟ್ಟನೆ ಜಿಗಿದು ಬರುತ್ತದೆ. ತನ್ನ ಬಾಯಾರಿಕೆ ನೀಗಿಸಿಕೊಂಡು ನಲ್ಲಿಯನ್ನು ಬಂದ್ ಮಾಡುತ್ತದೆ. ಆದರೆ ಅದೇ ರಸ್ತೆಯಲ್ಲಿ ಓಡಾಡುವ ಜನರಲ್ಲಿ ಒಬ್ಬರೂ ಆ ನಲ್ಲಿಯನ್ನು ಬಂದ್ ಮಾಡುವ ಗೋಜಿಗೆ ಹೋಗಿರಲಿಲ್ಲ. ಪ್ರಾಣಿಗಳನ್ನು ನೋಡಿಯಾದರೂ ನಾವು ಕಲಿತುಕೊಳ್ಳಬೇಕಲ್ಲವೇ?

ಒಂದು ಅಂಶವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು, ಕೇವಲ ನೀರಿನ ಸಂಗ್ರಹವೊಂದೇ ಜಲಸಂರಕ್ಷಣೆ ಆಗುವುದಿಲ್ಲ. ನಮ್ಮ ಮನೆಗಳಲ್ಲಿ ಬಳಸುವ ನೀರಿನ ಮಿತವ್ಯಯದ ಬಗ್ಗೆ ಗಮನ ಕೊಡುವುದು, ನೀರು ಪೋಲಾಗದಂತೆ ಎಚ್ಚರ ವಹಿಸುವುದು, ಸಾರ್ವಜನಿಕ ಜಲ ಸರಬರಾಜು ವ್ಯವಸ್ಥೆಗಳಲ್ಲಿ ನೀರು

> **ನೀರಿನ ಸಂರಕ್ಷಣೆಯನ್ನು ನಾವು ಒಂದು ದಿನಕ್ಕೆ ಮಾತ್ರ ಸೀಮಿತಗೊಳಿಸಬಾರದು. ವರ್ಷ ಪೂರ್ತಿ ನೀರಿನ ಬಗ್ಗೆ ಕಾಳಜಿ ವಹಿಸೋಣ. ಮುಂದಿನ ತಲೆಮಾರಿಗೆ ಈ ಅಮೂಲ್ಯ ನೈಸರ್ಗಿಕ ಸಂಪನ್ಮೂಲವನ್ನು ಉಳಿಸಿ ಹೋಗೋಣ.**



ವ್ಯರ್ಥವಾಗದಂತೆ ನೋಡಿಕೊಳ್ಳುವುದು, ನೀರು ಬಳಕೆಯ ಬಗ್ಗೆ ಜನಜಾಗೃತಿ ಮಾಡುವುದು ಇವೆಲ್ಲವೂ ಜಲಸಂರಕ್ಷಣೆಯ ವಿವಿಧ ಮಾರ್ಗಗಳು.

ಅಯ್ಯೋ, ಎಷ್ಟೆಲ್ಲಾ ಜನ ಪ್ರತಿದಿನ ನೀರು ವೇಸ್ಟ್ ಮಾಡಲ್ವಾ? ನಾನೊಬ್ನೆ/ಬ್ಬು ನೀರು ಉಳಿಸುವುದರಿಂದ ಏನು ಪ್ರಯೋಜನ ಅಂತ ನೀವು ಕೇಳಬಹುದು. **"ಹನಿ ಹನಿ ಕೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ರಾಶಿ"** ಎಂಬ ಮಾತನ್ನು ಒಮ್ಮೆ ನೆನಪಿಸಿಕೊಳ್ಳಿ, ನೀರುಳಿಸುವ ಕಾರ್ಯ ನಿಮ್ಮಿಂದಲೇ ಪ್ರಾರಂಭವಾಗಲಿ.

ಸಾಮಾನ್ಯವಾಗಿ ನಮ್ಮೆಲ್ಲರ ಮನೆಗಳಲ್ಲಿ ಕುಡಿಯುವ ನೀರನ್ನು ಶುದ್ಧೀಕರಿಸಲು ವಾಟರ್ ಪ್ಯೂರಿಫೈಯರ್‌ಗಳಿರುತ್ತವೆ. ಕೆಲವು ಬಗೆಯ ಪ್ಯೂರಿಫೈಯರ್‌ಗಳು ಒಂದು ಲೀಟರ್ ನೀರನ್ನು ಶುದ್ಧ ಮಾಡಿ, ಕನಿಷ್ಠ 10 ಲೀಟರ್‌ನಷ್ಟು ಅಶುದ್ಧ ನೀರನ್ನು ಹೊರಚೆಲ್ಲುತ್ತವೆ. ಬಹುತೇಕ ಜನರು ಇದನ್ನು ಹೊರಗೆ ಚೆಲ್ಲುತ್ತಾರೆ. ಆ ನೀರನ್ನು ಸಂಗ್ರಹಿಸಿ ಪಾತ್ರೆ, ಬಟ್ಟೆ ತೊಳೆಯಲು, ಮನೆ ಒರೆಸಲು, ಗಿಡಗಳಿಗೆ ಹಾಕಲು ಬಳಸಬಹುದಲ್ಲವೇ? ಸಾರ್ವಜನಿಕ ಕೊಳಾಯಿ, ಟ್ಯಾಂಕ್‌ಗಳಲ್ಲಿ ನೀರು ತುಂಬಿ ರಸ್ತೆ, ಚರಂಡಿಗಳಲ್ಲಿ ಹರಿಯುತ್ತಲೇ ಇರುತ್ತದೆ. ಅದು ನಮಗೆ ಸಂಬಂಧ ಪಟ್ಟಿದ್ದಲ್ಲ ಎಂದು ಬಹುತೇಕ ಜನರು ಉದಾಸೀನ ಮಾಡುತ್ತಾರೆ. ಇದು ತಪ್ಪು. ಸಾರ್ವಜನಿಕ ಆಸ್ತಿ ನಮ್ಮ ಆಸ್ತಿ. ಆದ್ದರಿಂದ ಇನ್ನು ಮುಂದೆ ನಿಮಗೆ ಇಂತಹ ದೃಶ್ಯ ಕಂಡುಬಂದಲ್ಲಿ ನೀವೇ ಮುಂದಾಗಿ ನೀರು ಪೋಲಾಗುವುದನ್ನು ತಡೆಯಿರಿ. ನಿಮ್ಮಿಂದ ಸ್ಫೂರ್ತಿ ಪಡೆದು ಇತರರೂ ಇಂತಹ ಕೆಲಸಕ್ಕೆ ಮುಂದಾಗಬಹುದು.

ಅಂದಹಾಗೆ ನೀರಿನ ಸಂರಕ್ಷಣೆಯನ್ನು ನಾವು ಒಂದು ದಿನಕ್ಕೆ ಮಾತ್ರ ಸೀಮಿತಗೊಳಿಸಬಾರದು. ವರ್ಷ ಪೂರ್ತಿ ನೀರಿನ ಬಗ್ಗೆ ಕಾಳಜಿ ವಹಿಸೋಣ. ಮುಂದಿನ ತಲೆಮಾರಿಗೆ ಈ ಅಮೂಲ್ಯ ನೈಸರ್ಗಿಕ ಸಂಪನ್ಮೂಲವನ್ನು ಉಳಿಸಿ ಹೋಗೋಣ. ಮುಂದಿನ ಪೀಳಿಗೆಯವರಿಗೆ, ಅಂದರೆ ನಮ್ಮ ಮಕ್ಕಳು ಹಾಗೂ ಪ್ರಾಣಿ-ಪಕ್ಷಿಗಳಿಗೂ ಸಹ ಈ ಭೂಮಿ0ಯ ಮೇಲೆ ಬದುಕುವ ಹಕ್ಕಿದೆಯಲ್ಲವೇ? ಆದ್ದರಿಂದ ನಾವೂ ಬದುಕೋಣ, ಇತರರಿಗೂ ಬದುಕಲು ಬಿಡೋಣ.

ನೀರು, ಆಹಾರ ಮತ್ತು ಗಾಳಿ (ಆಮ್ಲಜನಕ) ಇಲ್ಲದೆ ಮಾನವ ಮತ್ತು ಪ್ರಾಣಿ-ಪಕ್ಷಿಗಳು ಬದುಕಲಾರವು. ಅಲ್ಲದೆ ನೀರಿಲ್ಲದೆ ಆಹಾರ ಮತ್ತು ಆಮ್ಲಜನಕ ಕೂಡ ನಮಗೆ ದೊರಕದು. ಹಾಗಾಗಿ ನೀರು ಎಷ್ಟು ಪ್ರಮುಖ ಅಲ್ಲವೆ?...ನಮ್ಮ ಮಕ್ಕಳು ಬದುಕಲು ಬೇಕಾದ ಪ್ರಮುಖ ಸಂಪತ್ತನ್ನು ಉಳಿಸದೇ ಹಣ, ಆಸ್ತಿಯನ್ನು ಸಂರಕ್ಷಿಸಿದರೆ ಏನು ಪ್ರಯೋಜನ ಎಂಬುದನ್ನು ಒಂದು ಕ್ಷಣ ಯೋಚಿಸಿ, ಆಗ ನಮ್ಮ ಮಕ್ಕಳಿಗಾಗಿ ಸಂರಕ್ಷಿಸಬೇಕಾದ ಸಂಪತ್ತು ಯಾವುದೆಂದು ಅರಿವಾಗುತ್ತದೆ.



Download From : www.kpscvaani.com

ಕೃಷಿ ಸಂಪದ





# ಅನ್ನದಾತರ ಬೆಳೆಗಳಿಗೆ ಬಹುಪಯೋಗಿ ಎರೆಜಲ

**ತೋಟಗಾರಿಕಾ ಕ್ಷೇತ್ರದ ಅನ್ನದಾತರ ಬೆಳೆಗಳಿಗೆ ಇಸ್ರೇಲ್ ಮಾದರಿಯಲ್ಲಿ ಬಹುಪಯೋಗಿ ಶಕ್ತಿ ವರ್ಧಕ ಟಾನಿಕ್ ಆದ ಎರೆಜಲ ಮತ್ತು ಎರೆಗೊಬ್ಬರವನ್ನು ಕೊಪ್ಪಳ ಜಿಲ್ಲೆಯಲ್ಲಿ ಸಿದ್ಧಪಡಿಸಲಾಗುತ್ತಿದೆ.**

ಮಂಜುನಾಥ ಮಹಾಲಿಂಗಪುರ

ಕೃಷಿ ಜಮೀನಿನಲ್ಲಿ ಉತ್ಪನ್ನವಾಗುವ ಕಳೆ, ಕಸ, ಬೆಳೆ ಕಟಾವು ಬಳಿಕ ಉಳಿಯುವ ಕಾಂಡ ಬೇರುಗಳನ್ನು ಬೆಂಕಿ ಹಾಕಿ ಸುಡುವ ಬದಲಿಗೆ ರೈತನ ಮಿತ್ರ ಎರೆಹುಳುಗಳಿಂದ ಎರೆಗೊಬ್ಬರ ಮತ್ತು ಎರೆಜಲ ಉತ್ಪಾದಿಸುವ ಮಾದರಿ ಘಟಕವನ್ನು ನಿಡಶೇಸಿಯಲ್ಲಿ ಆರಂಭಿಸಲಾಗಿದೆ.

ಎರೆ ಹುಳು ರೈತನ ಮಿತ್ರ ನಿಜ, ಆದರೆ ಎಲ್ಲಾ ರೈತರು ಇದನ್ನು ಪೂರ್ಣ ಪ್ರಮಾಣದಲ್ಲಿ ಅಳವಡಿಸಿಕೊಂಡಿಲ್ಲ. **'ಹಾಕು ಎರೆ ಗೊಬ್ಬರ, ನೋಡು ಬೆಳೆಯ ಅಬ್ಬರ'** ಎನ್ನುವಂತೆ ಎರೆಜಲ ಮತ್ತು ಎರೆಗೊಬ್ಬರ ಬೆಳೆಗಳಿಗೆ ಶಕ್ತಿ ವರ್ಧಕ ಟಾನಿಕ್ ಆಗಿ ಪರಿಣಮಿಸಿದೆ. ಎರೆಗೊಬ್ಬರ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದಲ್ಲದೆ ಬುಡದಿಂದ ಬೆಳೆಗಳಿಗೆ ಶಕ್ತಿ ಕೊಡುತ್ತದೆ. ಎರೆಜಲವನ್ನು ಬೆಳೆಯ ಬುಡಕ್ಕೂ, ಬೆಳೆಯ ಮೇಲು ಔಷಧಿಯಾಗಿ ಸಿಂಪಡಣೆ ಮಾಡುವುದರಿಂದ ನಿರೀಕ್ಷೆಗೂ ಮೀರಿ ಗಿಡದಲ್ಲಿ ಹೂಗಳ ಸಂಖ್ಯೆ ದ್ವಿಗುಣಗೊಂಡು, ಅಧಿಕ ಇಳುವರಿ ಪಡೆಯಲು ಸಾಧ್ಯವಾಗುತ್ತಿದೆ. ಇದು ಹೂ ಉದುರಿ ಹೋಗದಂತೆ ಹಾಗೂ ಕಾಯಿಕಟ್ಟುವ ಸಾಮರ್ಥ್ಯ ಹೆಚ್ಚಿಸುತ್ತದೆ.

ಹೀಗಾಗಿ ಕಡಲೆ, ತೊಗರಿ, ದಾಳಿಂಬೆ ಇತ್ಯಾದಿ ಯಾವುದೇ ಕೃಷಿ, ತೋಟಗಾರಿಕೆ, ಪುಷ್ಪ ಕೃಷಿಗೂ ಬಹುಪಯೋಗಿ ದಿವ್ಯಾಮೃತವಾಗಿದೆ. ಈಗಾಗಲೇ ನಿಡಶೇಸಿ ತೋಟಗಾರಿಕಾ ಕ್ಷೇತ್ರದಲ್ಲಿ ಪ್ರತಿ ಬೆಳೆಗೂ ಇದರ ಬಳಕೆಯ ಪ್ರಯೋಗವನ್ನು ನಡೆಸಿ, ಉತ್ತಮ ಇಳುವರಿ ಪಡೆಯಲಾಗಿದೆ.

ಎರೆಗೊಬ್ಬರ ಮತ್ತು ಎರೆಜಲವು ಸಾವಯವ ಕೃಷಿಗೆ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ ರೈತರಿಗೆ ಎರೆಗೊಬ್ಬರ ಮತ್ತು ಎರೆಜಲವನ್ನು ತಮ್ಮ ಜಮೀನಿನಲ್ಲಿ ಸಿಗುವ ಕಳೆಗಳಿಂದಲೇ ಹೇಗೆ ಉತ್ಪಾದಿಸಿಕೊಳ್ಳಬಹುದು ಎಂಬುದನ್ನು ಈ ಘಟಕದಲ್ಲಿ



Download From : www.kpscvaani.com






**ನಿಡಶೇಸಿಯ ಇಸ್ರೇಲ್ ಮಾದರಿ ತೋಟಗಾರಿಕಾ ಕ್ಷೇತ್ರದಲ್ಲಿ ಎರೆಹುಳುವಿನಿಂದ ಎರೆಜಲ, ಎರೆಗೊಬ್ಬರ ತಯಾರಿಕಾ ಘಟಕ ರೈತರಿಗೆ ಮಾದರಿಯಾಗಿರಲು ಈ ಘಟಕವನ್ನು ಆರಂಭಿಸಲಾಗಿದೆ. ರೈತರು ಖುದ್ದಾಗಿ ಘಟಕಕ್ಕೆ ಆಗಮಿಸಿ, ಮಾಹಿತಿಯನ್ನು ಪಡೆದುಕೊಂಡು ತಾವು ಇಂತಹ ಘಟಕ ನಿರ್ಮಿಸಿಕೊಂಡು, ಅಧಿಕ ಇಳುವರಿ ಪಡೆಯುವ ಜೊತೆಗೆ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.**

ಕೃಷ್ಣಾ ಉಕ್ಕುಂದ,
ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೊಪ್ಪಳ

**ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನ ನಿಡಶೇಸಿ ಗ್ರಾಮದಲ್ಲಿರುವ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯು ಅಂದಾಜು 4 ಲಕ್ಷ ರೂ. ವೆಚ್ಚದಲ್ಲಿ ಇಸ್ರೇಲ್ ಮಾದರಿಯಲ್ಲಿ ಎರೆಜಲ ಮತ್ತು ಎರೆಗೊಬ್ಬರ ಉತ್ಪಾದನಾ ಘಟಕವನ್ನು ಕಳೆದ ವರ್ಷದಲ್ಲಿ ಸ್ಥಾಪಿಸಿದೆ. ರಾಜ್ಯದ ಮಂಡ್ಯ ಜಿಲ್ಲೆ ಮದ್ದೂರಿನಲ್ಲಿರುವ ಎರೆಗೊಬ್ಬರ/ಎರೆಜಲ ಘಟಕವನ್ನು ಹೊರತು ಪಡಿಸಿದರೆ ರಾಜ್ಯದಲ್ಲಿ ಸ್ಥಾಪಿತವಾಗಿರುವ ಎರಡನೇ ಘಟಕ ಇದಾಗಿದೆ ಎನ್ನುವುದೇ ವಿಶೇಷ.**

ತೋರಿಸಿಕೊಡಲಾಗುತ್ತದೆ. ಎರೆಗೊಬ್ಬರ/ಎರೆಜಲ ತಯಾರಿಕೆಗಾಗಿ ಇಲ್ಲಿ 20 ಘಟಕಗಳ ಶೆಡ್ ಅನ್ನು ನಿರ್ಮಿಸಲಾಗಿದೆ. ಕಳೆ, ಬೆಳೆ ಕಟಾವು ತ್ಯಾಜ್ಯವನ್ನು ತೊಟ್ಟಿಗಳಲ್ಲಿ ಒಂದೆರೆಡು ತಿಂಗಳು ಕೊಳೆಸಲಾಗುತ್ತದೆ. ನಂತರ ತೊಟ್ಟಿಯಾಕಾರದ ಎರೆಹುಳು ಘಟಕದಲ್ಲಿ 20 ಕೆ.ಜಿ. ಎರೆಹುಳುಗಳನ್ನು ಬಿಟ್ಟು, ಪ್ರತಿ ದಿನ ನಿಯಮಿತವಾಗಿ 5ರಿಂದ 10 ಲೀಟರ್ ನೀರನ್ನು ಸಿಂಪಡಿಸಿದರೆ ಎರಡೂವರೆ ತಿಂಗಳಲ್ಲಿ 1 ಟನ್ ಎರೆಗೊಬ್ಬರ ಸಿದ್ಧವಾಗುತ್ತದೆ.

ಉತ್ಪಾದಿತ ಎರೆಗೊಬ್ಬರ ಡ್ರಮ್‌ನ ತಳಭಾಗದಲ್ಲಿ 12 ಇಂಚು ಇಟ್ಟಿಗೆ ಚೂರು, ಮೂರು ಇಂಚು ಮರಳು, 6 ಇಂಚು 20 ಮಿ.ಮೀ. ಜಲ್ಲಿಕಲ್ಲು, ಮತ್ತೆ 3 ಇಂಚು ಮರಳು, ಅದರ ಮೇಲೆ ಸೆಗಣಿ ಮತ್ತು ಭತ್ತದ ಹುಲ್ಲು ಹಾಕಿ 10 ಕೆ.ಜಿ. ಎರೆಹುಳುಗಳನ್ನು ಬಿಡಬೇಕು. ನಂತರ ಇದಕ್ಕೆ 15 ಲೀಟರ್ ನೀರು ಹಾಕಿದರೆ ಎರೆಜಲ ಘಟಕ ಸಿದ್ಧವಾಗುತ್ತದೆ.

ಪ್ರತಿ ದಿನ ಪ್ರತಿ ಡ್ರಮ್‌ಗೆ 8 ಲೀಟರ್ ನೀರು ಹಾಕಿದರೆ 3 ಲೀಟರ್ ಎರೆಜಲ ಸಿದ್ಧವಾಗುತ್ತದೆ. ಇಲ್ಲಿನ 60 ಡ್ರಮ್‌ಗಳಲ್ಲಿ ಪ್ರತಿನಿತ್ಯ 500 ಲೀಟರ್ ಎರೆಜಲ ಉತ್ಪಾದನೆಯಾಗುತ್ತಿದ್ದು, ಅದನ್ನು ಸಾವಿರ ಲೀಟರ್ ಸಿಂಟೆಕ್ಸ್ ಟ್ಯಾಂಕಿನಲ್ಲಿ ಶೇಖರಿಸಿಟ್ಟಿದ್ದು, ಬೇಡಿಕೆಗೆ ಅನುಗುಣವಾಗಿ ಪೂರೈಸಲಾಗುತ್ತಿದೆ. ಸರ್ಕಾರಿ ದರದಲ್ಲಿ ಎರೆಜಲವನ್ನು ಪ್ರತಿ ಲೀಟರ್‌ಗೆ 30 ರೂ. ನಂತೆ ಹಾಗೂ ಎರೆಗೊಬ್ಬರವನ್ನು ಪ್ರತಿ ಕೆ.ಜಿ.ಗೆ 8 ರೂ.ನಂತೆ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗಿದೆ.


ಎರೆಹುಳುವಿನಿಂದ ತಯಾರಿಸುವ ಎರೆಜಲ ಮತ್ತು ಎರೆಗೊಬ್ಬರಕ್ಕೆ ಕ್ರಮೇಣ ಬೇಡಿಕೆ ಹೆಚ್ಚಿದ್ದು, 1 ಲೀಟರ್ ಬಾಟಲ್ ವೆಚ್ಚವೂ ಸೇರಿ ಸರ್ಕಾರಿ ದರದಲ್ಲಿ 35 ರೂಗೆ ಮಾರಾಟ ಮಾಡುವ ಉದ್ದೇಶ ಹೊಂದಲಾಗಿದೆ. ಹಾಗೆಯೇ ಎರೆಗೊಬ್ಬರವನ್ನು 5 ಕೆ.ಜಿಯಿಂದ 25 ಕೆ.ಜಿ. ಬ್ಯಾಗ್‌ನಲ್ಲಿ ನಿಡಶೇಸಿ ತೋಟಗಾರಿಕೆ ಬ್ರ್ಯಾಂಡ್‌ನಡಿಯಲ್ಲಿ ಮಾರುವ ಉದ್ದೇಶ ಕೂಡ ಹೊಂದಲಾಗಿದೆ.

ರಾಸಾಯನಿಕ ಗೊಬ್ಬರ ಮತ್ತು ಔಷಧಿಗಳನ್ನು ಬೆಳೆಗಳಿಗೆ ಬಳಸಲಾಗುವುದರಿಂದ ಆಹಾರ ಪದಾರ್ಥಗಳು ವಿಷಕಾರಕವಾಗುವುದಲ್ಲದೆ, ಭೂತಾಯಿ ಒಡಲು ಫಲವತ್ತತೆಯನ್ನು ಕಳೆದುಕೊಂಡು ಉತ್ತಮ ಫಸಲು ನೀಡಲು ಯೋಗ್ಯವಲ್ಲದ ಭೂಮಿಯಾಗುವುದರಲ್ಲಿ ಸಂಶಯವಿಲ್ಲ. ಹಾಗಾಗಿ ಪ್ರತಿಯೊಬ್ಬ ರೈತರು ವೈಜ್ಞಾನಿಕ ಕೀಟನಾಶಕ ಮತ್ತು ರಾಸಾಯನಿಕ ಗೊಬ್ಬರವನ್ನು ಬಳಸದೆ ತಾವೇ ತಯಾರಿಸಿಕೊಳ್ಳಬಹುದಾದ ಸಾವಯವ ಎರೆಗೊಬ್ಬರ ಮತ್ತು ಸಾವಯವ ಕೀಟನಾಶಕವಾದ ಎರೆಜಲವನ್ನು ತಮ್ಮ ಬೆಳೆಗೆ ಬಳಸುವುದು ಸೂಕ್ತ. ಇದು ನಮ್ಮ ಮತ್ತು ಭೂತಾಯಿಯ ಆರೋಗ್ಯವನ್ನು ಕಾಪಾಡಲಿದೆ. ಹೆಚ್ಚಿನ ಮಾಹಿತಿಗೆ ತೋಟಗಾರಿಕಾ ಸಹಾಯಕ ಅಧಿಕಾರಿಗಳಾದ ಆಂಜನೇಯ ದಾಸರ್ ಅವರನ್ನು 9449630918 ಮೂಲಕ ಸಂಪರ್ಕಿಸುವುದು.



Download From : www.kpscvaani.com

ನಮ್ಮ ಸಾಧಕರು



# ಅಂಚೆ ಕಲಾ ಶಿಕ್ಷಣದ ಆದ್ಯ ಪ್ರವರ್ತಕ

# ಎಂ.ಟಿ.ವಿ.ಆಚಾರ್ಯ

ಸದಾನಂದ

**ಕನ್ನಡ ನಾಡಿನ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಮತ್ತಷ್ಟು ಶ್ರೀಮಂತಗೊಳಿಸಿದ ಪ್ರಾತಃ ಸ್ಮರಣೀಯರ ಸಾಲಿನಲ್ಲಿ ಸೇರುವ ಮಹನೀಯರಲ್ಲಿ ಕಲಾವಿದ, ಚಿತ್ರಕ, ಚಿತ್ರ ಶಿಕ್ಷಕ ಎಂ.ಟಿ.ವಿ. ಆಚಾರ್ಯ ಒಬ್ಬರು.**

ಚಿತ್ರಕಲಾವಿದ ಎಂ.ಟಿ.ವಿ.ಆಚಾರ್ಯ ಅವರು ನಮ್ಮೊಡನಿದಿದ್ದರೆ ಅವರಿಗೆ ಈ ವರ್ಷ **'ಶತಮಾನಂಭವತಿ'** ಎನ್ನಬಹುದಿತ್ತು. ಆದರೆ ಚಿತ್ರಲೋಕದ ಒಳಿತಿಗಾಗಿ ಜೀವ ಸವೆಸಿದ ಈ ಮಹಾನುಭಾವ ತಮ್ಮ ಎಪ್ಪತ್ತೆರಡನೇ ವಯಸ್ಸಿನಲ್ಲಿ ನಮ್ಮನಗಲಿದವರು. ಆಚಾರ್ಯ ಬದುಕಿದ್ದರೆ ಜನವರಿ 31ಕ್ಕೆ ಅವರಿಗೆ ನೂರು ವರ್ಷ ತುಂಬಿರುತಿತ್ತು.

ನಿತ್ಯದ ಕಲಾಶಾಲೆಗೆ ಹೋಗಿ ಚಿತ್ರಕಲೆ ಅಭ್ಯಾಸ ಮಾಡಲಾಗದೆ ಪರಿತಪಿಸುತ್ತಿದ್ದ ಸಾವಿರಾರು ಕಲಾಕಾಂಕ್ಷಿಗಳಿಗೆ ದಾರಿ ದೀಪವಾದವರು ಆಚಾರ್ಯಪುರುಷ ಎಂ.ಟಿ.ವಿ. ಆಚಾರ್ಯ. ಅವರ ಕಲಾ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ಲಲಿತಕಲಾ ಅಕಾಡೆಮಿಯ ಗೌರವ ಪುರಸ್ಕಾರದ ಮೂಲಕ ಅವರನ್ನು ಗೌರವಿಸಿರುವುದು ಗಮನಾರ್ಹ.

ಮೇಲುಕೋಟೆಯಲ್ಲಿ ಜನವರಿ 31, 1920 ರಲ್ಲಿ ಜನ್ಮ ತಳೆದ ಮೇಲುಕೋಟೆ ತಿರುವೆಂಕಟಾಚಾರ್, ಚಿತ್ರಕಲಾ ಜಗತ್ತಿನಲ್ಲಿ ಚಿಕ್ಕದಾಗಿ, ಚೊಕ್ಕದಾಗಿ ಎಂ.ಟಿ.ವಿ. ಆಚಾರ್ಯರೆಂದೇ ಪ್ರಸಿದ್ಧರಾದವರು. ಅವರು ಕಲಾ ಶಿಕ್ಷಣ ಪಡೆದದ್ದು, ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ. (ಮುಂದೆ-ಅಂದರೆ 1984 ರಲ್ಲಿ ಚಾಮರಾಜೇಂದ್ರ ಅಕಾಡೆಮಿ ಆಫ್ ವಿಷ್ಯುಯಲ್ ಆರ್ಟ್-ಕಾವಾ ಎಂದು ಕರೆಸಿಕೊಂಡ ಸಂಸ್ಥೆ) ಮೈಸೂರಿನಲ್ಲಿ ಸಾಂಪ್ರದಾಯಿಕ ಚಿತ್ರಕಲೆಯನ್ನು ಪ್ರಚುರಗೊಳಿಸಿದ ವೈ.ಸುಬ್ರಹ್ಮಣ್ಯರಾಜು, ಖ್ಯಾತ ಕಲಾವಿದ ಪಂಕಸಾಲೆ-ಆಚಾರ್ಯರ ಗುರುಗಳು. ಈ ಸಂಸ್ಥೆಯಲ್ಲಿ ಡಿಪ್ಲೊಮೊ ಪದವಿ ಪಡೆದ ನಂತರ ಆಚಾರ್ಯ ಹಿಂದೂಸ್ತಾನ್ ಏರೋನಾಟಿಕಲ್ ಲಿಮಿಟೆಡ್‌ನಲ್ಲಿ ವಿನ್ಯಾಸಕರಾಗಿ ಕೆಲವು ಕಾಲ ದುಡಿದರು.



ಈ ನಡುವೆ ಆಚಾರ್ಯರ ಮೊದಲ ಚಿತ್ರಕಲಾ ಪ್ರದರ್ಶನ 1945 ರಲ್ಲಿ ಮದ್ರಾಸ್ ನಗರದಲ್ಲಿ (ಇಂದಿನ ಚೆನ್ನೈ) ನಡೆದಾಗ, ಅಂದಿನ ನ್ಯಾಯಮೂರ್ತಿ ಜಸ್ಟೀಸ್ ರಾಜಮನ್ನಾರ್ ಇವರ ಪ್ರತಿಭೆಯನ್ನು ಗುರುತಿಸಿದರು. ಹಿಂದೂಸ್ತಾನ್ ಏರೋನಾಟಿಕಲ್ ಲಿಮಿಟೆಡ್‌ನ ಯಾಂತ್ರಿಕ-



Download From : www.kpscvaani.com



**ಎಂ.ಟಿ.ವಿ.ಆಚಾರ್ಯ ಅವರ ಜನ್ಮ ಶತಾಬ್ದಿಯನ್ನು ನೆನಪಿಸಲು ಈಚೆಗೆ ಶಿವಲಿಂಗಪ್ಪನವರ ಮೈಸೂರು ಆರ್ಟ್ ಗ್ಯಾಲರಿ ಹಾಗೂ ರಾಮ್ಸನ್ಸ್ ಕಲಾ ಪ್ರತಿಷ್ಠಾನ ಮೈಸೂರಿನಲ್ಲಿ ಚಿತ್ರಕಲಾ ಪ್ರದರ್ಶನವೊಂದನ್ನು ಏರ್ಪಡಿಸಿ ಗೌರವ ಸಲ್ಲಿಸಿದ್ದು, ಅರ್ಥಪೂರ್ಣ ಶ್ರದ್ಧಾಂಜಲಿ.**

ವಿನ್ಯಾಸಕಾರರ ಕೆಲಸದಿಂದ ಬಿಡುಗಡೆ ಹೊಂದಿ ಆಚಾರ್ಯ ಭಾರತದ ಮಕ್ಕಳ ಪತ್ರಿಕೆಯೆಂದೇ ಖ್ಯಾತಿ ಗಳಿಸಿದ ಚಂದಮಾಮ ಮಾಸಿಕದ ಚಿತ್ರಕಲಾವಿದರಾಗಿ ಚೆನ್ನೈನಲ್ಲಿ ನೆಲೆಸಿದರು. ಆರಂಭದಲ್ಲಿ ಅವರು ಚಂದಮಾಮ ಪತ್ರಿಕೆಯ ತೆಲುಗು ಆವೃತ್ತಿಗಾಗಿ 1947 ರಿಂದ 1983 ರವರೆಗೆ ದುಡಿದರು. ನಂತರ ಬೆಂಗಳೂರಿಗೆ ಹಿಂದಿರುಗಿ ಕನ್ನಡ ಖ್ಯಾತ ದೈನಿಕ **'ತಾಯಿ ನಾಡು'** ಪತ್ರಿಕೆಯಲ್ಲಿ ಚಿತ್ರ ವಿಭಾಗದ ಸಂಪಾದಕರಾಗಿ ದುಡಿದರು.

ಮತ್ತೆ **'ಚಂದಮಾಮ'** ಪತ್ರಿಕೆಯಿಂದ ಕರೆ ಬಂದಾಗ 1997 ರಲ್ಲಿ ಚೆನ್ನೈಗೆ ತೆರಳಿ ಚಂದಮಾಮ ಕನ್ನಡ ಆವೃತ್ತಿಯ ಚಿತ್ರ-ಸಂಪಾದಕ ಹುದ್ದೆ ವಹಿಸಿಕೊಂಡು ಚಂದಮಾಮ ಪತ್ರಿಕೆಯನ್ನು ಭಾರತದಾದ್ಯಂತ ವಿಸ್ತರಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು.

ಇಂದು ಮಧ್ಯ ವಯಸ್ಸನ್ನು ಧಾಟಿದ ದಕ್ಷಿಣ ಭಾರತದ ಮಧ್ಯಮ ವರ್ಗದ ಜನಾಂಗಕ್ಕೆ ಚಂದಮಾಮದ ಪರಿಚಯವಿಲ್ಲದಿರುವ ಸಾಧ್ಯತೆ ತೀರಾ ಕಡಿಮೆ.  ಆಗ ಮಕ್ಕಳಾಗಿದ್ದವರು **'ಚಂದಮಾಮ'**ದ ಆಕರ್ಷಣೆಗೊಳಗಾದವರೇ. ಅದರಲ್ಲೂ **'ಚಂದಮಾಮ'**ದಲ್ಲಿ ಪ್ರಕಟವಾಗುತ್ತಿದ್ದ ಮಹಾಭಾರತ-ರಾಮಾಯಣದ ಕಥೆಗಳಿಗೆ ಆಚಾರ್ಯರು ರಚಿಸುತ್ತಿದ್ದ ಚಿತ್ರಗಳು ಮನಮೋಹಕ-ಚಿತ್ತಾಕರ್ಷಕ. ಅಂದಿನ ಎಷ್ಟೋ ಮಂದಿ ಇಂದಿಗೂ ಆಚಾರ್ಯರು ರಚಿಸಿದ ಚಿತ್ರಗಳಿಗಾಗಿ ಚಂದಮಾಮವನ್ನು ರಕ್ಷಿಸಿಟ್ಟು ತಮ್ಮ ಮಕ್ಕಳಿಗೆ ತೋರಿಸುತ್ತಾ, ಕಥೆ ಹೇಳುತ್ತಿದ್ದಾರೆ. ಕೇವಲ ಮಹಾಭಾರತ, ರಾಮಾಯಣದ ಕಥೆಗಳಷ್ಟೇ ಅಲ್ಲದೆ, ಪಂಚತಂತ್ರ, ಕಥಾಸರಿತ್ಸಾಗರ, ಪುರಾಣ ಹಾಗೂ ಜಾತಕ ಕಥೆಗಳಿಗೂ ಆಚಾರ್ಯರು ಚಿತ್ರಗಳನ್ನು ರಚಿಸಿ, ಕಥೆಗಳಿಗೆ ದೃಶ್ಯರೂಪ ನೀಡಿದ್ದಾರೆ. **'ವಿಕ್ರಮ್ - ಬೇತಾಳ್'** ಅಂತ್ಯಕಾಣದ ಕಥೆಗಳಿಗೆ ಚಿತ್ರಜೀವ ತುಂಬಿದವರು ಆಚಾರ್ಯರು.

ತಮ್ಮ ಕಲೆಯನ್ನು ನಿತ್ಯದ ತರಗತಿಗೆ ಹೋಗಲಾಗದೆ ನಿರಾಶರಾಗುತ್ತಿದ್ದ ಕಲೆಯನ್ನು ಪ್ರೀತಿಸುವವರಿಗಾಗಿ ಧಾರೆ ಎರೆಯಲು ಆಚಾರ್ಯರು 1969 ರಲ್ಲಿ ತಮ್ಮ ಆಚಾರ್ಯ ಚಿತ್ರಕಲಾಭವನವನ್ನು ಬೆಂಗಳೂರಿನ ಗಾಂಧಿನಗರದ ಬಾಡಿಗೆ ಮನೆಯೊಂದರಲ್ಲಿ ಆರಂಭಿಸಿದರು. ಇದರ ಉದ್ದೇಶ ಅಂಚೆಯ ಮೂಲಕ ಕಲಾವಿದ್ಯಾರ್ಥಿಗಳಿಗೆ ದೂರ ಶಿಕ್ಷಣ ನೀಡುವುದಾಗಿತ್ತು. ಎರಡು ವರ್ಷದ ಈ ಕಲಾಶಿಕ್ಷಣ ಮಾಧ್ಯಮದಲ್ಲಿ ವ್ಯಂಗ್ಯ ಚಿತ್ರವೂ ಒಳಗೊಂಡಂತೆ ವಾಣಿಜ್ಯ ಕಲೆಯ ಎಲ್ಲ ಆಯಾಮಗಳನ್ನು ಪರಿಚಯಿಸುವುದಾಗಿತ್ತು.

ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ರಚಿಸಿದ್ದ ಪತ್ಯಗಳಲ್ಲಿ ಕಲಾವಿದನಾಗಿ ರೂಪುಗೊಳ್ಳಲು ಅವಶ್ಯವಾದ ಎಲ್ಲ ವಿಚಾರಗಳನ್ನೂ ಚಿತ್ರಸಹಿತ ವಿವರಿಸಿದ ಪರಿಣಾಮವಾಗಿ ವಯೋಬೇಧ-ನಿಬಂಧನೆಯಿಲ್ಲದೆ ಎಲ್ಲರೂ ಸೇರ್ಪಡೆಗೊಂಡರು. ವಿದ್ಯಾರ್ಥಿಗಳಿಗೆ ಕಲಿಕಾ ಚಿತ್ರಗಳನ್ನು ಪ್ರತಿ ತಿಂಗಳೂ ತಿದ್ದಿ ಕಳುಹಿಸುವುದರ ಜತೆಗೆ ವರ್ಷಕ್ಕೊಮ್ಮೆ ಕಲಾ ಶಿಬಿರ ಮಾಡಿ, ಮುಖಾಮುಖಿಯಾಗಿ ಅಭಿಪ್ರಾಯ ಸಂಗ್ರಹಿಸಿ ಮಾರ್ಗದರ್ಶನ ಮಾಡುವ ಮೂಲಕ ಆಚಾರ್ಯರು ಇದುವರೆಗೆ ರಾಜ್ಯದಲ್ಲಿ ಯಾರೂ ಮಾಡಿರದ ಕಲಾ ಶಿಕ್ಷಣ ಕ್ರಮ ರೂಪಸಿದ ಖ್ಯಾತಿಗೆ ಪಾತ್ರರಾದರು. ಹಾಗೊಂದು ಇತಿಹಾಸ ನಿರ್ಮಿಸಿದರು.

ವಿದೇಶಿ ಕಲಾವಿದರಾದ ಡಾ:ಎಸ್. ತುಲ್ಸಾವೇಲ್, ಪ್ರೊ.ಕಾಗೆವಿನ್ ಕಲಾಕಾರ ಪ್ರೊಟೋಸೇನ್ಯ ಮುಂತಾದವರು ಆಚಾರ್ಯ ಚಿತ್ರ ಕಲಾಭವನಕ್ಕೆ ಭೇಟಿ ನೀಡಿ, ಆಚಾರ್ಯರ ಕಲೆಯ ಬಗೆಗಿನ ಪ್ರೀತಿ ಮತ್ತು ಬದ್ಧತೆಯನ್ನು ಮೆಚ್ಚಿಕೊಂಡಿದ್ದನ್ನು ಅವರ ಶಿಷ್ಯರಾದ ಕಲಾವಿದ ಎಲ್.ಶಿವಲಿಂಗಪ್ಪ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಾರೆ.

ಆಚಾರ್ಯರು ಪಾರದರ್ಶಕ ಜಲವರ್ಣ, ಅಪಾರದರ್ಶಕ ಪೋಸ್ಟರ್ ಬಣ್ಣಗಳ ಬಳಕೆಯಲ್ಲಿ ಸಿದ್ಧಹಸ್ತರು. ಮಾನವನ ಅಂಗಾಂಗ ರಚನೆಯ ಚಿತ್ರಕ ಶೈಲಿಯಲ್ಲಿ ಅವರನ್ನು ಮೀರಿಸಿದವರಿಲ್ಲ. ಶಬ್ದಗಳಲ್ಲಿ ವರ್ಣಿಸಲಾಗದಷ್ಟು ನೈಜನೆಲೆಯ ಬಣ್ಣ ಬಣ್ಣದ ವಸ್ತ್ರಾಲಂಕಾರದೊಡನೆ ಮುಖಲಕ್ಷಣದಲ್ಲಿ ನವರಸ ಚಿಮ್ಮಿಸುವ ಜಾಣ್ಮೆಯ ಕಲೆ ಆಚಾರ್ಯರದು.  ಮುದ್ರಣ ವಿನ್ಯಾಸಕ್ಕೆ ಅನುಕೂಲವಾಗುವಂಥ ವರ್ಣ ವಿನ್ಯಾಸ ಇವರದು. ಇವರ ಮಹಾಭಾರತದ ಚಿತ್ರಸರಣಿಯನ್ನು ವೀಕ್ಷಿಸಲು ಕಲಾರಸಿಕರು ಸಾಲುಗಟ್ಟಿ ನಿಂತದ್ದು, ಇನ್ನೂ ನನ್ನ ನೆನಪಿನಲ್ಲಿ ಹಸಿರಾಗಿದೆ ಎಂದು ಶಿವಲಿಂಗಪ್ಪ ತಮ್ಮ ಗುರುಗಳನ್ನು ಅಭಿಮಾನದಿಂದ ಜ್ಞಾಪಿಸಿಕೊಳ್ಳುತ್ತಾರೆ. ■





Download From : www.kpscvaani.com

# ಕೋವಿಡ್-19





ಕೋವಿಡ್-19 ವೈದ್ಯಕೀಯ ಸಹಾಯಕ್ಕಾಗಿ ಆಪ್ತಮಿತ್ರ ಸಹಾಯವಾಣಿ **14410** ಗೆ ಕರೆ ಮಾಡಿ

#KarnatakaFightsCorona

ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ

Download From : www.kpscvaani.com

# ಪದಬಂಧ-16



ವಿದ್ಯಾ ಎ. ಹಾಲಭಾವಿ

**ಎಡದಿಂದ ಬಲಕ್ಕೆ**

2. ಆಗ ತಾನೇ ತೆಗೆದ ಬೆಣ್ಣೆ (5)
4. ವಾಲ್ಮೀಕಿ ರಚಿಸಿರುವ ಮಹಾಕಾವ್ಯ (4)
7. ಯಾವುದೇ ಕಳಂಕ ಇಲ್ಲದ್ದು (4)
8. ಹೊಸದಾಗಿ ಅಭಿವೃದ್ಧಿಪಡಿಸಲಾಗಿರುವ ಕನಕಾಂಬರ ಹೂವಿನ ತಳಿ (4)
10. ನೇಯ್ಗೆಯ ಯಂತ್ರ (2)
11. ಕಂದರದಲ್ಲಿರುವ ಮಗು! (2)
12. ದೇವಾಲಯದ ಸಭಾಮಂಟಪ (4)
14. ಕರದಲ್ಲಿರುವ ಶರೀರ! (4)
17. ಮಾರ್ಚ್ 22 ರಂದು ದೇಶಾದ್ಯಂತ ಈ ದಿನಾಚರಣೆಯನ್ನು ಆಚರಿಸಲಾಗುತ್ತದೆ (4)
18. ಕುದುರೆಯ ಮುಖ(5)

**ಮೇಲಿಂದ ಕೆಳಕ್ಕೆ**

1. ಬಿಡುವು ಈ ರೀತಿ ಬಂದಿದೆ(3)
2. ಹಗರಣದಲ್ಲಿ ಸಿಕ್ಕ ದುಡ್ಡು(2)
3. ನೋಡುಗ ಇಲ್ಲಿದ್ದಾನೆ(3)
5. ಮಗಳ ಗಂಡನಿಲ್ಲಿ ತಿರುಗಿದ್ದಾನಲ್ಲಾ?(3)
6. ಹೂವಿನಲ್ಲಿರುವ ಸಿಹಿ ರಸ(4)
7. ಬೆಂದಕ್ಕಿ ಕಾಳು(2)
9. ಒಳ್ಳೆಯ ರೂಪವುಳ್ಳವನು(3)
10. ಹೆಣ್ಣು ದುಂಬಿಯಿದು(4)
12. ನಗರದಲ್ಲಿರುವ ಮನುಷ್ಯ(2)
13. ಗಲಾಟೆಗೊಂದು ಪರ್ಯಾಯ ಪದ(3)
15. ವರ್ತುಲಾಕಾರವಾಗಿರುವುದು ಅಥವಾ ಪ್ರದೇಶ(3)
16. ಸೀತೆಯ ತಂದೆ(3)
17. ಜವಾನನ ಹತ್ತಿರವಿರುವ ಮಂದಿ! (2)

**ಉತ್ತರ**

**ಮೇಲಿಂದ ಕೆಳಕ್ಕೆ**
1. ವಿರಾಮ 2. ಹಣ 3. ವೀಕ್ಷಕ 5. ಅಳಿಯ 6. ಮಕರಂದ 7. ಅನ್ನ 9. ಚೆಲುವ 10. ಮಧುಕರಿ 12. ನರ 13. ಗದ್ದಲ 15. ವಲಯ 16. ಜನಕ 17. ಜನ

**ಎಡದಿಂದ ಬಲಕ್ಕೆ**
2. ಹಯ್ಯಂಗವೀನ 4. ರಾಮಾಯಣ 7. ಅಕಳಂಕ 8. ಅರ್ಕಾಚೆನ್ನ 10. ಮಗ್ಗ 11.ಕಂದ 12. ನವರಂಗ 14. ಕಳೇಬರ 17. ಜಲದಿನ 18. ಹಯವದನ

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

Download From : www.kpscvaani.com



ಫೆಬ್ರವರಿ 13 ರಂದು ಮೈಸೂರು ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ
ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಕುಂದುಕೊರತೆಯನ್ನು ಆಲಿಸುತ್ತಿರುವುದು.



ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮತ್ತು ಎಡಿಜಿಪಿ ಬಾಸ್ಕರ್ ರಾವ್ ಅವರು
ಇತ್ತೀಚೆಗೆ ಕಬ್ಬನ್ ಉದ್ಯಾನದಲ್ಲಿ ಆಯೋಜಿಸಲಾಗಿದ್ದ ಸೈಕ್ಲಥಾನ್‌ನಲ್ಲಿ ಭಾಗವಹಿಸಿದ್ದ ಸಂದರ್ಭ.

Download From : www.kpscvaani.com

RNI No. KAR/KAN/2017/75029
Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Download From : www.kpscvaani.com